ಸಂಪುಟ: 03 ಸಂಚಿಕೆ: 270 ದಿನಾಂಕ: 08-09-2026 ಮಂಗಳವಾರ ಪುಟ: 6 ಬೆಲೆ: 2.00ರೂ.

ಸಂಪಾದಕರು, ಮಾಲೀಕರು: ರಾಧಿಕಾ ಎ.ಆರ್.

RNI:KARKAN/2023/88508, Postal Reg No:L2/RNP-1287/TMR/2025-27

# ಕರ್ನಾಟಕ ಸಕ್ಸಸ್ ನಂ 1

KARNATAKA SUCCESS NO1 Kannada Daily
Email: radhikaarno1@gmail.com Ph: 9380988530

ಕನ್ನಡ ದಿನಪತ್ರಿಕೆ

ಇದು ಸ್ವಾಭಿಮಾನಿಗಳ ಧ್ವನಿ

* ತುಮಕೂರು । ಬೆಂಗಳೂರು ನಗರ । ಬೆಂಗಳೂರು ಗ್ರಾಮಾಂತರ । ಚಿಕ್ಕಬಳ್ಳಾಪುರ । ಹಾವೇರಿ । ಮೈಸೂರು । ಮಂಡ್ಯ । ರಾಮನಗರ । ಚಿತ್ರದುರ್ಗ। ದಾವಣಗೆರೆ । ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ...



## ವಿಜೃಂಭಣೆಯಿಂದ ತುಮಕೂರು ದಸರಾ ಉತ್ಸವ ಆಚರಣೆ

ತುಮಕೂರು: ನಾಡಹಬ್ಬ ತುಮಕೂರು ದಸರಾ ಉತ್ಸವವನ್ನು ಈ ಬಾರಿಯೂ ವಿಜೃಂಭಣೆಯಿಂದ ಆಚರಿಸುವ ಮೂಲಕ ತುಮಕೂರಿನ ಕಲೆ, ಸಂಸ್ಕೃತಿ ಹಾಗೂ ಪ್ರತಿಭೆಯನ್ನು ರಾಜ್ಯದ ಗಮನ ಸೆಳೆಯುವಂತೆ ಮಾಡಬೇಕು ಎಂದು ಉಪ ಮುಖ್ಯಮಂತ್ರಿ ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ. ಪರಮೇಶ್ವರ್ ಅವರು ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ 2026ರ ದಸರಾ ಉತ್ಸವದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ಪ್ರತಿ ವರ್ಷದಂತೆ ಈ ವರ್ಷವೂ ದಸರಾ ಉತ್ಸವವನ್ನು ವಿಶೇಷ ಹಾಗೂ ಅರ್ಥಪೂರ್ಣವಾಗಿ ಆಚರಿಸಬೇಕು. ಉತ್ಸವದಲ್ಲಿ ಹೊಸತನವನ್ನು ಪರಿಚಯಿಸುವ ಮೂಲಕ ತುಮಕೂರನ್ನು ಎಲ್ಲರೂ ಗುರುತಿಸುವಂತಹ ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಹೇಳಿದರು.



ದಸರಾ ಉತ್ಸವವು ಕೇವಲ ಮನರಂಜನಾ ಕಾರ್ಯಕ್ರಮವಾಗದೆ ಮಕ್ಕಳಿಗೆ, ಯುವಕರಿಗೆ ಹಾಗೂ ಸ್ಥಳೀಯ ಕಲಾವಿದರಿಗೆ ಉತ್ತಮ ವೇದಿಕೆಯಾಗಬೇಕು. ಯುವ ಕಲಾವಿದರು, ನೃತ್ಯ ತಂಡಗಳು ಸೇರಿದಂತೆ ಸ್ಥಳೀಯ ಪ್ರತಿಭೆಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸುವ ಮೂಲಕ ಅವರ ಪ್ರತಿಭೆ ಅನಾವರಣಕ್ಕೆ ಅವಕಾಶ ಮಾಡಿಕೊಡಬೇಕು ಎಂದು ತಿಳಿಸಿದರು.

**ಅಮಾನಿಕೆರೆ ಪ್ರಮುಖ ಆಕರ್ಷಣೆಯಾಗಲಿ:** ತುಮಕೂರು ನಗರದ ಅಮಾನಿಕೆರೆಯನ್ನು ದಸರಾ ಸಂದರ್ಭದಲ್ಲಿ ಆಕರ್ಷಕವಾಗಿ ಅಲಂಕರಿಸಿ, ವಿದ್ಯುತ್ ದೀಪಾಲಂಕಾರ ಸೇರಿದಂತೆ ವಿವಿಧ ಅಲಂಕಾರಗಳಿಂದ ಕಲರ್‌ಫುಲ್ ಆಗಿ ರೂಪಿಸಬೇಕು. ಅಮಾನಿಕೆರೆಯನ್ನು ದಸರಾ ಉತ್ಸವದ ಪ್ರಮುಖ ಆಕರ್ಷಣೆಯನ್ನಾಗಿ ಮಾಡುವ ಮೂಲಕ ಸಾರ್ವಜನಿಕರನ್ನು ಸೆಳೆಯುವಂತಹ ವಾತಾವರಣ ನಿರ್ಮಿಸಬೇಕು ಎಂದು ಅವರು ಸೂಚಿಸಿದರು.



ನಗರದ ಪ್ರಮುಖ ಸರ್ಕಾರಿ ಕಚೇರಿಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯವಾಗಿ ವಿದ್ಯುತ್ ದೀಪಾಲಂಕಾರ ಮಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ ಅವರು, ಉತ್ಸವದ ಸಂದರ್ಭದಲ್ಲಿ ಇಡೀ ನಗರ ಹಬ್ಬದ ವಾತಾವರಣದಿಂದ ಕಂಗೊಳಿಸುವಂತೆ ಕ್ರಮ ಕೈಗೊಳ್ಳಬೇಕು ಎಂದರು.

ತುಮಕೂರು ದಸರಾ ಉತ್ಸವವು "ಊರ ಹಬ್ಬ"ದ ರೀತಿಯಲ್ಲಿ ಎಲ್ಲರನ್ನೂ ಒಳಗೊಂಡು ಉತ್ತಮವಾಗಿ ನಡೆಯಬೇಕು. ಉತ್ಸವದ ಮೂಲಕ ತುಮಕೂರಿನ ಕಲೆ, ಸಂಸ್ಕೃತಿ ಹಾಗೂ ಸ್ಥಳೀಯ ಪ್ರತಿಭೆಗಳಿಗೆ ಉತ್ತೇಜನ ದೊರೆಯುವುದರ ಜೊತೆಗೆ ತುಮಕೂರಿನ ಹೆಸರು ಮತ್ತಷ್ಟು ಪ್ರಸಿದ್ಧಿಯಾಗುವಂತಾಗಬೇಕು ಎಂದು ಹೇಳಿದರು. ತುಮಕೂರು ದಸರಾ ಉತ್ಸವವನ್ನು ಅಕ್ಟೋಬರ್ 11 ರಿಂದ 21ರವರೆಗೆ ಆಚರಿಸಲು ಅಗತ್ಯ ಸಿದ್ಧತೆಗ ಳನ್ನು ಕೈಗೊಳ್ಳಲಾಗುತ್ತಿದ್ದು, ಎಲ್ಲ ಇಲಾಖೆಗಳು ಸಮನ್ವ ಯದಿಂದ ಕಾರ್ಯನಿರ್ವಹಿಸುವಂತೆ ಅಧಿಕಾರಿ ಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ವಿ. ಅಶ್ವಿಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಅಪರ ಜಿಲ್ಲಾಧಿಕಾರಿ ಡಾ: ಎನ್. ತಿಪ್ಪೇಸ್ವಾಮಿ ಸೇರಿದಂತೆ ನಹೀದಾ ಜಮ್ ಜಮ್, ಮುರಳೀಧರ ಹಾಲಪ್ಪ, ಲಕ್ಷ್ಮಣ್ ದಾಸ್ ಹಾಗೂ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

## ಸೆ.17ರಂದು ಶ್ರೀ ವಿಶ್ವಕರ್ಮ ಜಯಂತಿ



ತುಮಕೂರು: ಜಿಲ್ಲಾಡಳಿತದ ವತಿಯಿಂದ ಸೆಪ್ಟೆಂಬರ್ 17ರಂದು ಹಮ್ಮಿಕೊಳ್ಳುವ ಶ್ರೀ ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲಿ ಸಮುದಾಯದ 15 ಸಾಧಕರನ್ನು ಗುರುತಿಸಿ ಸನ್ಮಾನಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಅಪರ ಜಿಲ್ಲಾಧಿಕಾರಿ ಡಾ: ಎನ್. ತಿಪ್ಪೇಸ್ವಾಮಿ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಈಶ್ವರ್ ಕು ಮಿರ್ಜಿ ಅವರಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿಂದು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ಜಯಂತಿ ಕಾರ್ಯಕ್ರಮವನ್ನು ನಗರದ ಡಾ: ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಏರ್ಪಡಿಸಲು ರಂಗಮಂದಿರವನ್ನು ಕಾಯ್ದಿರಿಸಬೇಕು. ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಶಿಷ್ಟಾಚಾರದಂತೆ ಮುದ್ರಿಸಿ, ಜನಪ್ರತಿನಿಧಿಗಳಿಗೆ ಹಾಗೂ ಸಂಘ ಸಂಸ್ಥೆಗಳಿಗೆ ತಲುಪಿಸಬೇಕು. ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಲು ನಿವೃತ್ತ ಜಿಲ್ಲಾಧಿಕಾರಿ ಹಾಗೂ ಕರ್ನಾಟಕ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ: ಸಿ ಸೋಮಶೇಖರ್ ಅವರನ್ನು ಆಹ್ವಾನಿಸಬೇಕು. ವ್ಯವಸ್ಥೆ ಮಾಡಬೇಕು. ಶ್ರೀ ವಿಶ್ವಕರ್ಮರ ಕುರಿತಂತೆ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದಲ್ಲಿ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲು ಕ್ರಮ ಕೈಗೊಳ್ಳಬೇಕು. ಜಯಂತಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ಸಕಲ ಸಿದ್ಧತೆಗಳನ್ನು ಕೈಗೊಳ್ಳಬೇಕೆಂದು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಭೆಯಲ್ಲಿ ವಿಶ್ವಕರ್ಮ ಅಭಿವೃದ್ಧಿ ನಿಗದ ವ್ಯವಸ್ಥಾಪಕ, ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ನಾಗರಾಜಾಚಾರ್, ಹರೀಶಾಚಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಗ್ರಾಮೀಣರಿಗೆ ಉದ್ಯೋಗ ಭದ್ರತೆ: ಮುದ್ದಲಿಂಗಯ್ಯ



ಚಿಕ್ಕನಾಯಕನಹಳ್ಳಿ: ಗ್ರಾಮೀಣ ಪ್ರದೇಶದ ಕುಟುಂಬ ಗಳಿಗೆ ಉದ್ಯೋಗ ಭದ್ರತೆ ಒದಗಿಸುವಲ್ಲಿ ಹಾಗೂ ಆರ್ಥಿಕವಾಗಿ ಸಬಲಗೊಳಿಸುವಲ್ಲಿ 'ವಿಬಿ-ಜಿ ರಾಮ್ ಜಿ' ಯೋಜನೆಯು ಗ್ರಾಮಸ್ಥರಿಗೆ ಲಭ್ಯವಿರುವ ವಿವಿಧ ಆರ್ಥಿಕ ನೆರವು ಮತ್ತು ವೈಯಕ್ತಿಕ ಕಾಮಗಾರಿಗಳ ಸೌಲಭ್ಯವನ್ನು ಪಡೆದುಕೊಂಡು ಆರ್ಥಿಕವಾಗಿ ಅಭಿವೃದ್ಧಿ ಪಡೆದುಕೊಳ್ಳಿ ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಮುದ್ದಲಿಂಗಯ್ಯ ಕರೆ ನೀಡಿದರು. ತಾಲ್ಲೂಕಿನ ದಸೂಡಿ ಗ್ರಾಮದ ಸಮೀಪ ಬಸ್ ನಿಲ್ದಾಣದಲ್ಲಿ ಕರಪತ್ರಗಳನ್ನು ನೀಡುವ ಮೂಲಕ ಬೀದಿನಾಟಕ ಮತ್ತು "ಜಾಬ್ ಕಾರ್ಡ್ ಮೇಳ" ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಆಗಸ್ಟ್ 15 ರಿಂದ ಸೆಪ್ಟಂಬರ್ 15 ರವರೆಗೆ ಉದ್ಯೋಗ ಚೀಟಿ ಇಲ್ಲದಾ ಎಲ್ಲಾ ರೈತರು ಮತ್ತು ಕೂಲಿಕಾರರು ಹಾಗೂ ಅರ್ಹ ಗ್ರಾಮೀಣ ಕುಟುಂಬಗಳಿಗೆ ಸ್ಥಳದಲ್ಲೇ ಪರಿಶೀಲಿಸಿ ಹೊಸ ರೋಜ್ಗಾರ್ ಗ್ಯಾರಂಟಿ ಕಾರ್ಡ್‌ಗಳನ್ನು ನೀಡಲಾಗುವುದು. ಅರ್ಹ ಫಲಾನುಭವಿಗಳು ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಉದ್ಯೋಗ ಚೀಟಿ ಪಡೆಯಬಹುದು ತಪ್ಪದೇ ಅರ್ಹರು ಸೌಲಭ್ಯಗಳನ್ನುಪಡೆದುಕೊಳ್ಳಿಎಂದುಮನವಿಮಾಡಿದರು. ಕಾರ್ಯದರ್ಶಿಗಳಾದ ಮಧುಸೂದನ್ ರವರು ಮಾತನಾಡಿ, ವಿಬಿ – ಜಿ ರಾಮ್ ಜಿ ಯೋಜನೆ ಗ್ರಾಮೀಣಾಭಿವೃದ್ಧಿಗೊಳಿಸಬೇಕು ಅದೇ ರೀತಿ ರೈತರ ಉದ್ಧಾರಕೆಂದು ಜಾರಿಯಾಗಿರುವ ಯೋಜನೆ ಎಲ್ಲರೂ ಉತ್ತಮ ರೀತಿಯಲ್ಲಿ ಅರ್ಹರು ಸದುಪಯೋಗಗಳನ್ನು ಪಡೆಯಿರಿ ಎಂದರು. ಯೋಜನೆಯಡಿ ವಾರ್ಷಿಕ ಉದ್ಯೋಗದ ಅವಧಿಯನ್ನು 100 ದಿನಗಳಿಂದ 125 ದಿನಗಳಿಗೆ ಹೆಚ್ಚಿಸಲಾಗಿದೆ. ದಿನದ ಕೂಲಿ ಮೊತ್ತವನ್ನೂ 370 ರೂ. ರಿಂದ 382 ರೂ.ಗೆ ಹೆಚ್ಚಿಸಲಾಗಿದೆ. ಈ ವೇಳೆ ಮಾನ್ಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಮುದ್ದಲಿಂಗಯ್ಯ ರವರು, ಕಾರ್ಯದರ್ಶಿ ಮಧುಸೂದನ್ ರವರು,ತಾಂತ್ರಿಕ ಸಹಾಯಕರಾದ ಹೊನ್ನೇಶ್ ಬಿ. ಎಸ್ , ಡಿಇಒ ಮದನ್, ಕರಾವಸೂಲಿಕಾರರು, ನೀರು ವಿತರಕರು, ಸಾರ್ವಜನಿಕರು ಹಾಜರಿದ್ದರು.

## ಆಹಾರವೇ ನಮ್ಮ ಆರೋಗ್ಯದ ಮೂಲ: ಡಾ. ಖಾದರ್

ಶಿರಾ :ಆಹಾರವೇ ನಮ್ಮ ಆರೋಗ್ಯದ ಮೂಲ. ನಾವು ಪ್ರತಿದಿನ ಸೇವಿಸುವ ಆಹಾರ ನಮ್ಮ ದೇಹದ ಆರೋಗ್ಯ, ಶಕ್ತಿ ಮತ್ತು ಜೀವನಶೈಲಿಯ ಮೇಲೆ ದೊಡ್ಡ ಪರಿಣಾಮ ಬೀರುತ್ತದೆ. ನಮ್ಮ ಪೂರ್ವಜರು ಪ್ರಕೃತಿಗೆ ಹತ್ತಿರವಾದ ಆಹಾರವನ್ನು ಸೇವಿಸುತ್ತಿದ್ದರು. ಸಿರಿಧಾನ್ಯಗಳು, ನೈಸರ್ಗಿಕವಾಗಿ ದೊರೆಯುವ ಸೊಪ್ಪು-ತರಕಾರಿಗಳು, ಹಣ್ಣುಗಳು, ಕಾಳುಗಳು ಮತ್ತು ಸ್ಥಳೀಯ ಆಹಾರ ಪದಾರ್ಥಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದರು. ಇಂದಿನ ಜೀವನಶೈಲಿಯಲ್ಲಿ ಸಂಸ್ಕರಿಸಿದ ಆಹಾರ, ಹೆಚ್ಚು ಸಕ್ಕರೆ, ಹೆಚ್ಚು ಉಪ್ಪು ಮತ್ತು ಎಣ್ಣೆ ಇರುವ ಆಹಾರಗಳ ಬಳಕೆ ಹೆಚ್ಚಾಗಿದೆ. ಇದರಿಂದ ಬೊಜ್ಜು, ಮಧುಮೇಹ, ರಕ್ತದೊತ್ತಡ ಸೇರಿದಂತೆ ಹಲವು ಜೀವನಶೈಲಿ ಸಂಬಂಧಿತ ಸಮಸ್ಯೆಗಳು ಹೆಚ್ಚಾಗುತ್ತಿವೆ. ಆದ್ದರಿಂದ ಆಹಾರವೇ ಔಷಧಿಯಾಗಲಿ, ಆರೋಗ್ಯವೇ ನಮ್ಮ ನಿಜವಾದ ಸಂಪತ್ತಾಗಲಿ ಎಂದು ಆಹಾರ ತಜ್ಞ ಡಾ.ಖಾದರ್ ಹೇಳಿದರು.



ಅವರು ನಗರದ ನಾಡೋಜ ಬರಗೂರು ರಾಮಚಂದ್ರಪ್ಪ ಬಯಲು ರಂಗಮಂದಿರದ ಆವರಣದಲ್ಲಿ ಶ್ರೀಗಂಧ ಬೆಳೆಗಾರರ ಮತ್ತು ಬಳಕೆದಾರರ ಅಭಿವೃದ್ಧಿ ಸಂಶೋದನಾ ಸಂಘ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ, ಚೇಳೂರಿನ ಸಹಜ, ನೈಸರ್ಗಿಕ ಬೇಸಾಯ ತರಬೇತಿ ಕೇಂದ್ರ ಇವರ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಆಹಾರ ತಜ್ಞ ಡಾ. ಖಾದರ್ ಅವರಿಂದ ನೈಸರ್ಗಿಕ ಆಹಾರ ಪದ್ಧತಿಯ ಬಗ್ಗೆ ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಎಲ್ಲರೂ ಸಾಧ್ಯವಾದಷ್ಟು ನೈಸರ್ಗಿಕ ಮತ್ತು ಸ್ಥಳೀಯ ಆಹಾರಕ್ಕೆ ಆದ್ಯತೆ ನೀಡಬೇಕು. ಸಿರಿಧಾನ್ಯಗಳನ್ನು ನಮ್ಮ ಆಹಾರದಲ್ಲಿ ಸೇರಿಸಿಕೊಳ್ಳಬೇಕು. ಆಹಾರವನ್ನು ನಿಧಾನವಾಗಿ, ಅಗತ್ಯ ಪ್ರಮಾಣದಲ್ಲಿ ಸೇವಿಸುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಆಹಾರದ ಜೊತೆಗೆ ಪ್ರತಿದಿನ ದೈಹಿಕ ಚಟುವಟಿಕೆ, ಉತ್ತಮ ನಿದ್ರೆ ಮತ್ತು ಮಾನಸಿಕ ನೆಮ್ಮದಿಯೂ ಆರೋಗ್ಯಕ್ಕೆ ಬಹಳ ಮುಖ್ಯ. ನಾವು ಆರೋಗ್ಯವಾಗಿದ್ದರೆ ಮಾತ್ರ ನಮ್ಮ ಕುಟುಂಬ, ಸಮಾಜ ಮತ್ತು ದೇಶದ ಅಭಿವೃದ್ಧಿಗೆ ನಮ್ಮ ಕೊಡುಗೆ ನೀಡಲು ಸಾಧ್ಯ ಎಂದರು.

ಶ್ರೀಗಂಧ ಬೆಳೆಗಾರರ ಮತ್ತು ಬಳಕೆದಾರರ ಅಭಿವೃದ್ಧಿ ಸಂಶೋದನಾ ಸಂಘದ ರಾಜ್ಯಾಧ್ಯಕ್ಷ ರಘುರಾವ್ ಮಾತನಾಡಿ ಆಹಾರ ತಜ್ಞರಾಗಿ ವಿದೇಶದಲ್ಲಿ ಹತ್ತಾರು ಲಕ್ಷ ರೂಗಳ ವೇತನ ಪಡೆಯುತ್ತಿದ್ದ ಡಾ. ಖಾದರ್ ಅವರು ನಿಸರ್ಗದ ಮೇಲಾಗುತ್ತಿರುವ ಪ್ಲಾಸ್ಟಿಕ್ ಹಾವಳಿ ಮತ್ತು ವಿಷಮುಕ್ತ ಆಹಾರದ ಬದಲಿಗೆ ವಿಷಮುಕ್ತ ಆಹಾರವನ್ನು ಜನರಿಗೆ ನೀಡುವ ಮಹತ್ವದ ಉದ್ದೇಶದೊಂದಿಗೆ ತಮ್ಮ ವಿದೇಶಿ ಕೆಲಸಕ್ಕೆ ರಾಜಿನಾಮೆ ನೀಡಿ ನಮ್ಮ ದೇಶದಲ್ಲಿಯೇ ನೆಲೆಸಿ ಆಹಾರ ಪದಾರ್ಥಗಳಾದ ಸಿರಿಧಾನ್ಯದ ಬಗ್ಗೆ ಹೆಚ್ಚಿನ ಅಧ್ಯಯನ ಕೈಗೊಂಡು ಜನರನ್ನು ಕಾಡುತ್ತಿರುವ ಬಿಪಿ, ಶುಗರ್, ಕ್ಯಾನ್ಸರ್ ಸೇರಿದಂತೆ ಮಾರಕ ಕಾಯಿಲೆಗಳಿಗೆ ಸಿರಿಧಾನ್ಯ ಸೇವನೆಯ ಮೂಲಕ ಹೇಗೆ ರೋಗಮುಕ್ತ ಜೀವನ ನಡೆಸಬಹುದು ಎಂಬುದನ್ನು ಸ್ವತಃ ಕಂಡುಕೊಂಡು ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸುತ್ತಿದ್ದಾರೆ. ಆದ್ದರಿಂದ ಸಾರ್ವಜನಿಕರು ಸಿರಿಧಾನ್ಯ ಖಾದ್ಯಗಳ ತಯಾರಿಕೆ ಬಗ್ಗೆ ಡಾ.ಖಾದರ್ ಅವರ ಮಾರ್ಗದರ್ಶನದಂತೆ ಸಿರಿಧಾನ್ಯಗಳನ್ನು ಬಳಕೆ ಮಾಡಿ ರೋಗಮುಕ್ತ ಜೀವನ ನಡೆಸಬೇಕು ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಸಾಲಿಂಗಯ್ಯ, ದಂತ ತಜ್ಞ ಡಾ.ಮಂಜುನಾಥ್, ಸಾಮಾಜಿಕ ಹೋರಾಟಗಾರರಾದ ಆರ್.ವಿ.ಪುಟ್ಟಕಾಮಣ್ಣ, ನೇರಲಗುಡ್ಡ ಶಿವಕುಮಾರ್, ನಿವೃತ್ತ ಇಂಜಿನಿಯರ್ ಜಯರಾಮಯ್ಯ, ಕೊರ್ಲೆ ಸಿರಿಧಾನ್ಯ ಬೆಳೆಗಾರರಾದ ಕೊರ್ಲೆ ರಘು, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಶಿರಾ-2 ಯೋಜನಾಧಿಕಾರಿ ರಮೇಶ್, ಭೂಮಿ ಮಂತ್ರ ಆರ್ಗಾನಿಕ್ಸ್‌ನ ನಾಗರಾಜು, ವೆಂಕಟೇಶ್ ಪ್ರಸಾದ್, ಹನುಮಂತರಾಯ, ರಂಗನಾಥಪ್ಪ ಸೇರಿದಂತೆ ಹಲವರು ಹಾಜರಿದ್ದರು.

## ಇತಿಹಾಸ ಮರುನಿರ್ಮಾಣದಲ್ಲಿ ಶಿಲ್ಪಿಗಳ ಪಾತ್ರ ಮಹತ್ವದ್ದು

ತುಮಕೂರು: ಶಿಲ್ಪಕಲೆಗಳಿಂದ ನಾವು ಇತಿಹಾಸವನ್ನು ಸ್ಪಷ್ಟವಾಗಿ ಅರ್ಥೈಸಿ ಕೊಳ್ಳಬಹುದು. ಧಾರ್ಮಿಕ ಆಚಾರ ವಿಚಾರಗಳು ಹಾಗೂ ಹಿಂದೆ ನಡೆದ ಪ್ರಮುಖ ಐತಿಹಾಸಿಕ ಘಟನೆಗಳನ್ನು ನಮ್ಮ ನೆನಪಿನಲ್ಲಿ ಉಳಿಸಿಕೊಳ್ಳುವಲ್ಲಿ ಇವು ಪ್ರಮುಖ ಪಾತ್ರವಹಿಸುತ್ತವೆ. ಇತಿಹಾಸವನ್ನು ಮರು ನಿರ್ಮಾಣ ಮಾಡುವಲ್ಲಿ ಶಿಲ್ಪಿಗಳ ಶ್ರಮ ಹಾಗೂ ಪಾತ್ರ ಅತ್ಯಂತ ಮಹತ್ವವಾದದ್ದು ಎಂದು ಮಾಜಿ ವಿಧಾನಪರಿಷತ್ ಸದಸ್ಯರು ಹಾಗೂ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ. ಆರ್. ಹುಲಿನಾಯ್ಕರ್ ಹೇಳಿದರು. ತುಮಕೂರು ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿವಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಸೆ. 07, ಸೋಮವಾರದಂದು ಹಮ್ಮಿಕೊಳ್ಳಲಾಗಿದ್ದ ಹಿರಿಯ ಶಿಲ್ಪಿ ವಿಶ್ವನಾಥ್ ರವರ ಏಕವ್ಯಕ್ತಿ ಶಿಲ್ಪಕಲಾ ಕೃತಿಗಳ ಪ್ರದರ್ಶನ "ಕಲ್ಲರಳಿ ಹೂವಾಗಿ" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.



ತುಮಕೂರು ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿವಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಹಿರಿಯ ಶಿಲ್ಪಿ ವಿಶ್ವನಾಥ್ ರವರ ಏಕವ್ಯಕ್ತಿ ಶಿಲ್ಪಕಲಾ ಕೃತಿಗಳ ಪ್ರದರ್ಶನ "ಕಲ್ಲರಳಿ ಹೂವಾಗಿ" ಕಾರ್ಯಕ್ರಮವನ್ನು ಮಾಜಿ ವಿಧಾನಪರಿಷತ್ ಸದಸ್ಯರು ಹಾಗೂ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ. ಆರ್. ಹುಲಿನಾಯ್ಕರ್ ಉದ್ಘಾಟಿಸಿದರು. ಅಯೋಧ್ಯೆಯ ರಾಮಲಲ್ಲಾ ಮೂರ್ತಿ ನಿರ್ಮಾತೃ ಹಾಗೂ ಹಿರಿಯ ಶಿಲ್ಪಿ ಗಣೇಶ್ ಎಲ್. ಭಟ್., ರಮೇಶ್ ಎಂ.ಸಿ., ಡಾ. ಎಲ್.ಪಿ. ರಾಜು, ಶಿವಣ್ಣ ಎಂ., ಡಾ. ಎಂ. ಕೊಟ್ರೇಶ್, ರಮೇಶ್ ಸಿ.ಕೆ., ಈಶ್ವರ್ ಮಿರ್ಜಿ ಇದ್ದಾರೆ.

ಒಬ್ಬ ಶಿಲ್ಪಿ ಕೇವಲ ಕಲ್ಲು ಕೆತ್ತುವವನಷ್ಟೇ ಅಲ್ಲ, ಆತ ಅಚ್ಚುಕಟ್ಟಾದ ಇಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಾನೆ. ಹೀಗಾಗಿ ಇಂತಹ ಪ್ರತಿಭಾವಂತ ಶಿಲ್ಪಿಗಳ ನೆರವಿಗೆ ಸರ್ಕಾರಗಳು ರಾಜಾಶ್ರಯದೋಪಾದಿಯಲ್ಲಿ ಧಾವಿಸಿ ಸೂಕ್ತ ಸಹಕಾರ ನೀಡಬೇಕು ಎಂದರು.

ಅಯೋಧ್ಯೆಯ ರಾಮಲಲ್ಲಾ ಮೂರ್ತಿ ನಿರ್ಮಾತೃ ಹಾಗೂ ಹಿರಿಯ ಶಿಲ್ಪಿ ಗಣೇಶ್ ಎಲ್. ಭಟ್ ಮಾತನಾಡಿ, ಪ್ರಾಚೀನ ಕಾಲದ ದೇವಾಲಯಗಳು ಕೇವಲ ಪೂಜಾ ಸ್ಥಳಗಳಾಗಿರದೆ ವಿಶ್ವವಿದ್ಯಾನಿಲಯಗಳ ಜೊತೆಗೆ ಪರಿಣಾಮಕಾರಿ ಮಾಧ್ಯಮಗಳಾಗಿಯೂ ಕಾರ್ಯನಿರ್ವಹಿಸಿದ್ದವು ಎಂದರು.

ಇಂದು ನಮ್ಮ ದೈನಂದಿನ ಜೀವನದಲ್ಲಿ ಹೆಚ್ಚು ಆಚರಣೆಯಲ್ಲಿರುವ ಸಂಸ್ಕೃತಿ ಎಂದರೆ ಅದು ಸನಾತನ ಸಂಸ್ಕೃತಿಯಾಗಿದ್ದು, ಶಿಲ್ಪಕಲೆಗಳು ಆ ಕ್ಷೇತ್ರಗಳ ಶ್ರೀಮಂತಿಕೆಯನ್ನು ಇಂದಿಗೂ ಜಗತ್ತಿಗೆ ಪರಿಚಯಿಸಲು ತಲೆಎತ್ತಿ ನಿಂತಿವೆ. ಇಂಗ್ಲಿಷ್ ಭಾಷೆಯೇ ರಾಷ್ಟ್ರಭಾಷೆಯಾಗಿ ಹೊರಹೊಮ್ಮಿದೆ ಎಂಬುದು ತಪ್ಪು ಕಲ್ಪನೆ, ಸಂಸ್ಕೃತ ಭಾಷೆ ಎಲ್ಲ ಭಾರತೀಯ ಭಾಷೆಗಳಲ್ಲಿ ಬೆರೆತುಹೋಗಿದೆ. ಅದನ್ನು ರಾಷ್ಟ್ರಭಾಷೆ ಎಂದು ಹೆಮ್ಮೆಯಿಂದ ಘೋಷಿಸಬಹುದು ಆದರೆ ಅದನ್ನು ಹೇಳುವ ಧೈರ್ಯ ನಮ್ಮಲ್ಲಿ ಇಲ್ಲದಿರುವುದು ನಿಜಕ್ಕೂ ದುರ್ದೈವದ ಸಂಗತಿ ಎಂದರು.

ನಾಡಿಗೆ ನಮ್ಮ ರಾಜ್ಯದ ಕಲೆ ಹಾಗೂ ಶಿಲ್ಪಕಲೆಯ ಕೊಡುಗೆ ಅಪಾರವಾಗಿದ್ದು, ಆ ಕಲೆಗಳನ್ನು ರೂಪಿಸಿದ ರಾಜರ ಮತ್ತು ಶಿಲ್ಪಿಗಳ ಕುರಿತು ಆಳವಾದ ಅಧ್ಯಯನಗಳು ನಡೆಯಬೇಕು. ಭಾರತದಲ್ಲಿ ನಮ್ಮ ಕರ್ನಾಟಕ ರಾಜ್ಯದ ಶಿಲ್ಪಕಲೆ ಅತ್ಯಂತ ಶ್ರೇಷ್ಠವಾದುದು. ಇತ್ತೀಚಿನ ದಿನಗಳಲ್ಲಿ ಇಂತಹ ಶ್ರೇಷ್ಠ ಕಲೆಗಳಿಗೆ ದೊರೆಯುತ್ತಿರುವ ಸಹಕಾರ ಮತ್ತು ಪ್ರೋತ್ಸಾಹ ಕಡಿಮೆಯಾಗುತ್ತಿರುವುದು ಕಳವಳಕಾರಿ ಎಂದರು. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷ ರಾದ ರಮೇಶ್ ಎಂ.ಸಿ. ಮಾತನಾಡಿ, ಕಲೆ ಎಂದರೆ ಕೇವಲ ಕಾಗದದ ಮೇಲೆ ಚಿತ್ರ ರಚಿಸುವುದು ಅಥವಾ ಶಿಲೆಗೆ ರೂಪ ನೀಡುವುದು ಮಾತ್ರವಲ್ಲ, ನಮ್ಮ ನಡೆ, ನುಡಿ ಮತ್ತು ಆಚಾರ ವಿಚಾರಗಳ ಅರಿತು ಪಾಲಿಸುವುದೇ ನಿಜವಾದ ಕಲೆ. ವಿದ್ಯಾರ್ಥಿಗಳು ಕೇವಲ ಶೈಕ್ಷಣಿಕ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಕಲಿಯುವುದು ಅತ್ಯಂತ ಪ್ರಮುಖವಾದದ್ದು ಎಂದರು.

ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಎಲ್.ಪಿ. ರಾಜು ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಿಶ್ವವಿದ್ಯಾಲಯದ ಸಿಂಡಿಕೆಟ್ ಸದಸ್ಯರಾದ ಶಿವಣ್ಣ ಎಂ., ಹಿರಿಯ ಪ್ರಾಧ್ಯಾಪಕರಾದ ಡಾ. ಎಂ. ಕೊಟ್ರೇಶ್, ಬೆಂಗಳೂರಿನ ಅಭಿಯಂ ತರರಾದ ರಮೇಶ್ ಸಿ.ಕೆ., ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಈಶ್ವರ್ ಮಿರ್ಜಿ ಇದ್ದರು. ಸಂಶೋಧನಾರ್ಥಿ ನಾಗೇಂದ್ರ ಎಸ್. ನಿರೂಪಿಸಿ ವಂದಿಸಿದರು.

# ಜಿಲ್ಲೆಯ ಹಲವು ಗ್ರಾಮಗಳಲ್ಲಿ ನೀರಿಗಾಗಿ ಹಾಹಾಕಾರ



ಚಿಕ್ಕಣ್ಣಸ್ವಾಮಿ ಬಿ ಸಿ
ಪತ್ರಿಕೋದ್ಯಮ ವಿದ್ಯಾರ್ಥಿ
ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು
ತುಮಕೂರು

## ಬರಡಾಯಿತೆ ಭೂತಾಯಿ ಒಡಲು



ತುಮಕೂರು: ನೀರು ಜೀವಸಂಕುಲದ ಜೀವನಾಡಿ. ಮನುಷ್ಯನ ದೈನಂದಿನ ಬದುಕಿನಿಂದ ಹಿಡಿದು ಕೃಷಿ, ಜಾನುವಾರು ಸಾಕಣೆ ಹಾಗೂ ಸ್ವಚ್ಛತೆಯವರೆಗೆ ಪ್ರತಿಯೊಂದು ಚಟುವಟಿಕೆಯಲ್ಲೂ ನೀರು ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ತುಮಕೂರು ಜಿಲ್ಲೆಯ ಹಲವು ಗ್ರಾಮಗಳಲ್ಲಿ ನೀರಿನ ಸಮಸ್ಯೆ ದಿನದಿಂದ ದಿನಕ್ಕೆ ತೀವ್ರವಾಗುತ್ತಿದ್ದು, ಗ್ರಾಮಸ್ಥರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಗ್ರಾಮೀಣ ಪ್ರದೇಶಗಳಲ್ಲಿ ಮುಂಜಾನೆ ಎದ್ದ ತಕ್ಷಣ ಮನೆಯ ಕೆಲಸಗಳನ್ನು ಆರಂಭಿಸುವುದರಿಂದ ಹಿಡಿದು ಕುಡಿಯುವ ನೀರು, ಅಡುಗೆ, ಸ್ನಾನ, ಬಟ್ಟೆ ತೊಳೆಯುವುದು ಸೇರಿದಂತೆ ಎಲ್ಲದಕ್ಕೂ ನೀರಿನ ಅಗತ್ಯವಿದೆ. ಆದರೆ ಗ್ರಾಮಗಳಲ್ಲಿ ಕೊಳವೆಬಾವಿಗಳು ಬತ್ತಿಹೋಗುತ್ತಿರುವುದರಿಂದ ಜನರು ನೀರಿಗಾಗಿ ಟ್ಯಾಂಕರ್‌ಗಳನ್ನೇ ಅವಲಂಬಿಸುವಂತಾಗಿದೆ.

**ಬತ್ತಿಹೋದ ಕೊಳವೆಬಾವಿಗಳು:** ಮಳೆಯ ಕೊರತೆ ಹಾಗೂ ಅಂತರ್ಜಲ ಮಟ್ಟ ಕುಸಿತದಿಂದ ಹಲವು ಗ್ರಾಮಗಳ ಕೊಳವೆಬಾವಿಗಳಲ್ಲಿ ನೀರು ಕಡಿಮೆಯಾಗಿದೆ. ಕೆಲವೆಡೆ ಬೋರ್‌ವೆಲ್‌ಗಳು ಸಂಪೂರ್ಣವಾಗಿ ಬತ್ತಿಹೋಗಿವೆ. ಇದರಿಂದ ಕೃಷಿಯನ್ನು ಅವಲಂಬಿಸಿರುವ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೃಷಿಗೆ ನೀರು ದೊರೆಯದ ಕಾರಣ ಬೆಳೆ ಬೆಳೆಯುವುದು ಕಷ್ಟವಾಗುತ್ತಿದೆ. ರೈತರು ಕೃಷಿಯಿಂದ ಸ್ವಾವಲಂಬಿಗಳಾಗುವ ಬದಲು ನೀರಿನ ಸಮಸ್ಯೆಯಿಂದಾಗಿ ಪರ್ಯಾಯ ಉದ್ಯೋಗವನ್ನು ಹುಡುಕುವ ಪರಿಸ್ಥಿತಿಯೂ ಎದುರಾಗಿದೆ.

**ಐದು ದಿನಕ್ಕೊಮ್ಮೆ ನೀರು:** ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ಕೆಲವು ಗ್ರಾಮಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಕೆಲವು ಕಡೆ ಐದು ದಿನಕ್ಕೊಮ್ಮೆ ನೀರು ಪೂರೈಕೆಯಾಗುತ್ತಿರುವುದು ಗ್ರಾಮಸ್ಥರ ಅಸಮಾಧಾನಕ್ಕೆ ಕಾರಣವಾಗಿದೆ. ನಿಗದಿತ ಸಮಯದಲ್ಲಿ ಟ್ಯಾಂಕರ್ ಬರುವುದರಿಂದ ಮಹಿಳೆಯರು ಮತ್ತು ವೃದ್ಧರು ನೀರನ್ನು ಸಂಗ್ರಹಿಸಲು ಗಂಟೆಗಟ್ಟಲೆ ಕಾಯಬೇಕಾಗುತ್ತದೆ. ಮನೆಯಲ್ಲಿರುವ ಒಬ್ಬರೇ ಹೆಚ್ಚಿನ ಪ್ರಮಾಣದ ನೀರನ್ನು ಸಂಗ್ರಹಿಸುವುದು ಕಷ್ಟವಾಗುತ್ತಿದೆ. ಟ್ಯಾಂಕರ್ ಮೂಲಕ ಪೂರೈಕೆಯಾಗುವ ನೀರಿನ ಗುಣಮಟ್ಟದ ಬಗ್ಗೆಯೂ ಗ್ರಾಮಸ್ಥರು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ನೀರಿನ ಸಂಗ್ರಹಣೆ ಮತ್ತು ಸಾಗಣೆಯ ವ್ಯವಸ್ಥೆ ಸಮರ್ಪಕವಾಗಿಲ್ಲದಿದ್ದರೆ ಕುಡಿಯುವ ನೀರಿನ ಗುಣಮಟ್ಟದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ.

**ಜಾನುವಾರುಗಳಿಗೂ ನೀರಿಲ್ಲ:** ಗ್ರಾಮೀಣ ಕುಟುಂಬಗಳ ಪ್ರಮುಖ ಆಧಾರವಾಗಿರುವ ಹಸು, ಕುರಿ, ಮೇಕೆ ಸೇರಿದಂತೆ ಜಾನುವಾರುಗಳಿಗೂ ನೀರಿನ ಕೊರತೆ ಎದುರಾಗಿದೆ. ಕುಡಿಯಲು ಹಾಗೂ ಸ್ವಚ್ಛತೆಗಾಗಿ ಸಾಕಷ್ಟು ನೀರು ಸಿಗದಿರುವುದು ಜಾನುವಾರು ಸಾಕಾಣಿಕೆದಾರರಿಗೆ ಮತ್ತೊಂದು ಸಮಸ್ಯೆಯಾಗಿದೆ. ನೀರಿನ ಕೊರತೆಯಿಂದ ಗ್ರಾಮಸ್ಥರ ದೈನಂದಿನ ಸ್ವಚ್ಛತೆಯ ಮೇಲೂ ಪರಿಣಾಮ ಬೀರುತ್ತಿದೆ. ನೀರನ್ನು ಮಿತವಾಗಿ ಬಳಸಬೇಕಾದ ಅನಿವಾರ್ಯತೆಯಿಂದ ಸ್ನಾನ ಸೇರಿದಂತೆ ವೈಯಕ್ತಿಕ ಸ್ವಚ್ಛತಾ ಚಟುವಟಿಕೆಗಳಿಗೂ ತೊಂದರೆಯಾಗುತ್ತಿದೆ.

**ಬಯಲು ಶೌಚಕ್ಕೆ ಮರಳುವ ಆತಂಕ:** ಗ್ರಾಮಗಳಲ್ಲಿ ನಿರ್ಮಿಸಿರುವ ಗೃಹ ಶೌಚಾಲಯಗಳ ಬಳಕೆಗೆ ನೀರು ಅಗತ್ಯ. ಆದರೆ ನೀರಿನ ಕೊರತೆಯಿಂದ ಕೆಲವು ಕುಟುಂಬಗಳು ಶೌಚಾಲಯ ಬಳಸಲು ಸಾಧ್ಯವಾಗದೆ ಬಯಲು ಶೌಚದತ್ತ ಮರಳುವ ಆತಂಕ ಎದುರಾಗಿದೆ. ಇಂತಹ ಪರಿಸ್ಥಿತಿ ಮುಂದುವರಿದರೆ ಗ್ರಾಮಗಳ ಸ್ವಚ್ಛತೆ ಮತ್ತು ಸಾರ್ವಜನಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ. ಆದ್ದರಿಂದ ಕುಡಿಯುವ ನೀರಿನ ಸಮಸ್ಯೆಯನ್ನು ಕೇವಲ ನೀರಿನ ಸಮಸ್ಯೆಯಾಗಿ ನೋಡದೆ, ಆರೋಗ್ಯ ಮತ್ತು ಸ್ವಚ್ಛತೆಯ ಸಮಸ್ಯೆಯಾಗಿಯೂ ಪರಿಗಣಿಸುವ ಅಗತ್ಯವಿದೆ.

**ಪಂಚಾಯಿತಿಗೂ ಹೆಚ್ಚಿದ ಆರ್ಥಿಕ ಹೊರೆ:** ನೀರಿನ ಸಮಸ್ಯೆಯಿಂದ ಗ್ರಾಮ ಪಂಚಾಯಿತಿಗಳ ಮೇಲೂ ಆರ್ಥಿಕ ಹೊರೆ ಹೆಚ್ಚಾಗಿದೆ. ಟ್ಯಾಂಕರ್ ಮೂಲಕ ನೀರು ಪೂರೈಸಲು ಟ್ಯಾಂಕರ್ ಬಾಡಿಗೆ, ಟ್ರ್ಯಾಕ್ಟರ್ ಬಾಡಿಗೆ ಹಾಗೂ ಚಾಲಕರ ಕೂಲಿ ಸೇರಿದಂತೆ ಹಲವು ವೆಚ್ಚಗಳನ್ನು ಪಂಚಾಯಿತಿ ಭರಿಸಬೇಕಾಗಿದೆ. ನೀರಿನ ಪೂರೈಕೆಗೆ ಹೆಚ್ಚಿನ ಹಣ ಖರ್ಚಾಗುತ್ತಿರುವುದರಿಂದ ಗ್ರಾಮಗಳ ರಸ್ತೆ, ಚರಂಡಿ, ಬೀದಿ ದೀಪ, ಸ್ವಚ್ಛತೆ ಸೇರಿದಂತೆ ಇತರ ಅಭಿವೃದ್ಧಿ ಕಾಮಗಾರಿಗಳಿಗೆ ಹಣದ ಕೊರತೆ ಉಂಟಾಗುವ ಸಾಧ್ಯತೆ ಇದೆ.

**ಯಾವಾಗ ಸಿಗಲಿದೆ ಶಾಶ್ವತ ಪರಿಹಾರ:** ಬನ್ನಿಕುಪ್ಪೆ, ಮರಿಚಿಕ್ಕಯ್ಯನಪಾಳ್ಯ, ಶಾಂತಪುರ, ಕಾಮನಹಳ್ಳಿ, ಬನ್ನಿಮರದಕಟ್ಟೆ, ಜುಂಜಯ್ಯನಪಾಳ್ಯ, ಕಲ್ಲುಪಾಳ್ಯ, ತೆರೆದಕುಪ್ಪೆ ಸೇರಿದಂತೆ ಹಲವು ಗ್ರಾಮಗಳಲ್ಲಿ ನೀರಿನ ಸಮಸ್ಯೆ ತೀವ್ರವಾಗಿದೆ ಎಂದು ಗ್ರಾಮಸ್ಥರು ಹೇಳುತ್ತಿದ್ದಾರೆ. ಟ್ಯಾಂಕರ್ ಮೂಲಕ ನೀರು ಪೂರೈಸುವುದು ತಾತ್ಕಾಲಿಕ ಪರಿಹಾರ ಮಾತ್ರ. ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು ಅಗತ್ಯವಾಗಿದೆ. ಅಗತ್ಯವಿರುವ ಪ್ರದೇಶಗಳಲ್ಲಿ ಹೊಸ ಕೊಳವೆಬಾವಿಗಳನ್ನು ಕೊರೆಸುವುದರ ಜೊತೆಗೆ ಮಳೆನೀರು ಸಂಗ್ರಹಣೆ, ಕೆರೆಗಳ ಪುನಶ್ಚೇತನ ಮತ್ತು ಅಂತರ್ಜಲ ಸಂರಕ್ಷಣೆಗೆ ಆದ್ಯತೆ ನೀಡಬೇಕು.

**ಅಧಿಕಾರಿಗಳು ಗಮನಹರಿಸಲಿ:** ನೀರಿನ ಸಮಸ್ಯೆಯಿಂದ ಜನರು ಅನುಭವಿಸುತ್ತಿರುವ ಸಂಕಷ್ಟವನ್ನು ಸಂಬಂಧಪಟ್ಟ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು. ಗ್ರಾಮಗಳ ವಾಸ್ತವ ಪರಿಸ್ಥಿತಿಯನ್ನು ಪರಿಶೀಲಿಸಿ, ಅಗತ್ಯವಿರುವ ಕಡೆ ಹೊಸ ಕೊಳವೆಬಾವಿಗಳನ್ನು ಕೊರೆಸುವುದು, ಕುಡಿಯುವ ನೀರಿನ ಗುಣಮಟ್ಟ ಪರೀಕ್ಷಿಸುವುದು ಮತ್ತು ಶಾಶ್ವತ ನೀರಿನ ಯೋಜನೆ ರೂಪಿಸುವುದು ಅಗತ್ಯವಾಗಿದೆ.

ನೀರು ಪ್ರತಿಯೊಬ್ಬರ ಮೂಲಭೂತ ಅವಶ್ಯಕತೆ. ಗ್ರಾಮಸ್ಥರು ನೀರಿಗಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗದಂತೆ ಜಿಲ್ಲಾಡಳಿತ, ಗ್ರಾಮ ಪಂಚಾಯಿತಿ ಹಾಗೂ ಸಂಬಂಧಪಟ್ಟ ಇಲಾಖೆಗಳು ಸಮನ್ವಯದಿಂದ ತುರ್ತು ಕ್ರಮ ಕೈಗೊಳ್ಳಬೇಕಿದೆ.



ಹಾಲನೂರು ಪ್ರೌಢಶಾಲೆಯಲ್ಲಿ ಶಿಕ್ಷಕರ ದಿನಾಚರಣೆಯನ್ನು ವಿದ್ಯಾರ್ಥಿಗಳು ಆಚರಣೆ ಮಾಡಲಾಯಿತು. ಗುರುಗಳಿಗೆ ಗೌರವ ಸಮರ್ಪಣೆಯನ್ನು ಮಾಡುವ ಮೂಲಕ ಗುರುವಂದನೆಯನ್ನು ಮಾಡಲಾಯಿತು. ಗಗನ 10 ನೇ ತರಗತಿ ವಿದ್ಯಾರ್ಥಿ ನಿರೂಪಣೆ ಮಾಡಿದರೆ ದೀಕ್ಷಿತಾ ಸ್ವಾಗತವನ್ನು ಮಾಡಿದರೆ ಪ್ರಾರ್ಥನೆಯನ್ನು ಯಶಸ್ವಿನಿ ಸಂಗಡಿಗರು ಮಾಡಿದರು ಗುರುಗಳು ಆಜ್ಞಾನದಿಂದ ಜ್ಞಾನದ ಕಡೆಗೆ ನಮನ್ನು ಕರೆದುಕೊಂಡು ಹೋಗುತ್ತಾರೆ ನಮ್ಮನ್ನು ತಿದ್ದಿ ತೀಡಿ ಪ್ರಾಜ್ಞಾವಂತರಾನ್ನಾಗಿ ಮಾಡಿ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಬೆಳಗುವಂತೆ ನಮಗೆ ಮಾರ್ಗದರ್ಶನ ನೀಡಿದ ಶಿಕ್ಷಕರಿಗೆ ವಂದನೆಗಳು ಎಂದು ಭಾಷಣವನ್ನು ಲಿಖಿತರವರು ಮಾತನಾಡಿದರು. ಅಂಕಿತ ಎಂಬ ವಿದ್ಯಾರ್ಥಿ ವಂದನೆಯನ್ನು ಮಾಡಿದರು.

## ಸಾಲ ಸೌಲಭ್ಯ ಅರ್ಜಿ ಆಹ್ವಾನ

ತುಮಕೂರು: ಕರ್ನಾಟಕ ರಾಜ್ಯ ಕಾಡುಗೊಲ್ಲ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಡಿ ಸಾಲ ಸೌಲಭ್ಯಕ್ಕಾಗಿ ಕಾಡುಗೊಲ್ಲ ಜಾತಿಗೆ ಸೇರಿದವರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಫಲಾಪೇಕ್ಷಿಗಳು ಸಾಲ ಸೌಲಭ್ಯಕ್ಕಾಗಿ ಸ್ವಯಂ ಉದ್ಯೋಗ ವೈಯಕ್ತಿಕ ಸಾಲ, ಅರಿವು-ಶೈಕ್ಷಣಿಕ ನೇರ ಸಾಲ(ಹೊಸತು ಹಾಗೂ ನವೀಕರಣ), ಗಂಗಾ ಕಲ್ಯಾಣ, ಸ್ವಾವಲಂಬಿ ಸಾರಥಿ ಹಾಗೂ ಹೊಲಿಗೆ ಯಂತ್ರ(ZIG-ZAG) ಯೋಜನೆಗಳಡಿ ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತರು https://sevasindhu.karnataka.gov.in ಪೋರ್ಟಲ್ ಮೂಲಕ ಗ್ರಾಮ ಒನ್/ ಕರ್ನಾಟಕ ಒನ್/ ತುಮಕೂರು ಒನ್/ ಬೆಂಗಳೂರು ಒನ್ ಸೇವಾ ಕೇಂದ್ರದಲ್ಲಿ ಸೆಪ್ಟೆಂಬರ್ 30ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸುವಾಗ ಅರ್ಜಿದಾರರು ಆಧಾರ್ ಕಾರ್ಡ್ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು. ಆಧಾರ್ ಕಾರ್ಡ್‌ನಲ್ಲಿರುವಂತೆ ಅರ್ಜಿದಾರರ ಹೆಸರು/ವಿಳಾಸ/ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮತ್ತು ಬ್ಯಾಂಕ್ ಪಾಸ್ ಪುಸ್ತಕಗಳಲ್ಲಿ ಹೊಂದಾಣಿಕೆಯಾಗಬೇಕು. 2024-25 ಮತ್ತು 2025-26ನೇ ಸಾಲುಗಳಲ್ಲಿ ಅರ್ಜಿ ಸಲ್ಲಿಸಿರುವವರು ಮತ್ತೊಮ್ಮೆ ಬೇರೆ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ದೂ.ಸಂ 0816-2005008ನ್ನು ಸಂಪರ್ಕಿಸಬಹುದಾಗಿದೆ ತಿಳಿಸಿದ್ದಾರೆ.

## ಪ್ರತಿಭಾ ಪುರಸ್ಕಾರ ವಿತರಿಸಿ ಶಾಸಕ ಜ್ಯೋತಿಗಣೇಶ್ ಸಲಹೆ

# ವಿದ್ಯಾರ್ಥಿಗಳಿಗೆ ಉದ್ಯೋಗಾಧಾರಿತ ಮಾರ್ಗದರ್ಶನ ಅಗತ್ಯ

ತುಮಕೂರು: ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ವಿತರಿಸುವುದು ಉತ್ತಮ ಸಂಪ್ರದಾಯ. ಅದರ ಜೊತೆಗೆ ಸಂಘ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಉದ್ಯೋಗ ಆಧಾರಿತ ಮಾಹಿತಿ, ಕೌಶಲ್ಯ ಪರಿಣತಿಯ ಮಾರ್ಗದರ್ಶನ ಕಾರ್ಯಕ್ರಮಗಳನ್ನು ಆಯೋಜಿಸಿದರೆ ಅವರು ಮುಂದೆ ಅರ್ಹ ಉದ್ಯೋಗ ಪಡೆದು ಉತ್ತಮ ಬದುಕು ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಶಾಸಕ ಜಿ.ಬಿ. ಜ್ಯೋತಿಗಣೇಶ್ ಹೇಳಿದರು.

ಆಟೋ ಚಾಲಕರು ಮತ್ತು ಇತರೆ ಅಸಂಘಟಿತ ವೇದಿಕೆ ಭಾನುವಾರ ನಗರದ ಕನ್ನಡ ಭವನದಲ್ಲಿ ಹಮ್ಮಿಕೊಂಡಿದ್ದ 10ನೇ ವರ್ಷದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯೂಸಿ ವಿದ್ಯಾರ್ಥಿಗಳಿಗೆ ಪುರಸ್ಕಾರ ವಿತರಿಸಿ ಮಾತನಾಡಿದ ಶಾಸಕರು, ಎಲ್ಲಾ ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಶಿಕ್ಷಣ ಪಡೆದರೆ ಬಡತನ, ಜಾತಿಬೇಧ ಎಲ್ಲವನ್ನೂ ಮೆಟ್ಟಿನಿಂತು ಸಮಾಜದಲ್ಲಿ ಗೌರವ ಪಡೆಯಬಹುದು. ದೇಶದಲ್ಲಿ ಲಕ್ಷಾಂತರ ಉದ್ಯೋಗಗಳ ಅವಕಾಶಗಳಿಗೆ ಅವುಗಳನ್ನು ಪಡೆಯಲು ನಮ್ಮ ಮಕ್ಕಳಿಗೆ ಸರಿಯಾದ ಮಾರ್ಗದರ್ಶನ, ಬೇಕಾದ ಕೌಶಲ್ಯ ಪರಿಣತಿಯ ಅಗತ್ಯವಿದೆ. ಈ ಎರಡರ ಬಗ್ಗೆ ತಜ್ಞರಿಂದ ಮಾರ್ಗದರ್ಶನ, ಸಲಹೆ ಕೊಡಿಸಿದರೆ ಮಕ್ಕಳು ತಮ್ಮ ಭವಿಷ್ಯದ ಬಗ್ಗೆ ಸ್ಪಷ್ಟ ನಿರ್ಧಾರ ತೆಗೆದುಕೊಂಡು ಮುನ್ನಡೆಯುತ್ತಾರೆ ಎಂದು ಹೇಳಿದರು. ಕೇಂದ್ರದ ನರೇಂದ್ರ ಮೋದಿ ಸರ್ಕಾರ ಬಡವರ ಸಬಲೀಕರಣಕ್ಕಾಗಿ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಅಂತಹ ಯೋಜನೆಗಳ ಬಗ್ಗೆ ಜನಸಾಮಾನ್ಯರಿಗೆ, ಕಾರ್ಮಿಕರಿಗೆ, ಬಡವರಿಗೆ ಪರಿಚಯ ಮಾಡಿಕೊಟ್ಟು ಅವರು ಯೋಜನೆಗಳ ಪ್ರಯೋಜನ ಪಡೆಯಲು ಸಂಘಸಂಸ್ಥೆಗಳು ಸಹಕಾರ ನೀಡಬೇಕು. ಅರ್ಹ ಫಲಾನುಭವಿಗಳು ಪ್ರಯೋಜನ ಪಡೆದರೆ ಯೋಜನೆ ಜಾರಿಗೆ ತಂದದಕ್ಕೆ ಸಾರ್ಥಕವಾಗುತ್ತದೆ ಎಂದರು.



ಆಟೋ ಚಾಲಕರು ಮತ್ತು ಇತರೆ ಅಸಂಘಟಿತ ವೇದಿಕೆಯ ಅಧ್ಯಕ್ಷರಾದ ಆಟೋ ಯಡಿಯೂರಪ್ಪ ಎಂದೇ ಹೆಸರಾಗಿರುವ ಕೆ.ಎಂ. ಶಿವಕುಮಾರ್ ಅವರು ಸಾಮಾನ್ಯ ಆಟೋ ಚಾಲಕರಾಗಿ ಸಮಾಜಸೇವಾ ಗುಣಗಳನ್ನು ರೂಢಿಸಿಕೊಂಡಿದ್ದಾರೆ. ಬಡವರಿಗೆ ಸಹಾಯ ಮಾಡುವ ಪ್ರವೃತ್ತಿ ಬೆಳೆಸಿಕೊಂಡು ಬಂದಿದ್ದಾರೆ. ಕಷ್ಟದಲ್ಲಿರುವ ಅಸಹಾಯಕರಿಗೆ ಹೇಗಾದರೂ ಸರಿ ಸಹಾಯ ಮಾಡಲೇಬೇಕು ಎಂದು ಪ್ರಯತ್ನಿಸುತ್ತಾರೆ. ಇವರ ಗೆಳೆಯರ ತಂಡ ಇವರ ಕಾರ್ಯಕ್ಕೆ ಕೈ ಜೋಡಿಸುತ್ತದೆ. ಇಂತಹ ಕೆಲಸಗಳನ್ನು ಇವರ ತಂಡ ಮತ್ತಷ್ಟು ಮಾಡಲಿ ಎಂದು ಶಾಸಕ ಜ್ಯೋತಿಗಣೇಶ್ ಹೇಳಿದರು.

ಮಾಜಿ ಸಂಸದ ಜಿ.ಎಸ್. ಬಸವರಾಜು ಕಾರ್ಯಕ್ರಮ ಉದ್ಘಾಟಿಸಿ, ಪ್ರತಿಭಾ ಪುರಸ್ಕಾರ ಎಂಬುದು ವಿದ್ಯಾರ್ಥಿಗಳನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸುವ ಕೆಲಸ, ಇತರೆ ವಿದ್ಯಾರ್ಥಿಗಳಿಗೂ ಪ್ರೇರಣೆ ನೀಡುವ ಕಾರ್ಯ. ಇಂತಹ ಕೆಲಸಗಳು ನಿರಂತರವಾಗಿ ನಡೆಯಲಿ ಎಂದು ಆಶಿಸಿದರು.

ವೇದಿಕೆ ಅಧ್ಯಕ್ಷ ಆಟೋ ಯಡಿಯೂರಪ್ಪ(ಕೆ.ಎಂ. ಶಿವಕುಮಾರ್), ಮುಖಂಡರಾದ ಬಂಬೂ ಮೋಹನ್, ನಿಸರ್ಗ ರಮೇಶ್, ಹನುಮಂತಪುರ ಹನುಮಂತರಾಜು, ಧನುಷ್, ಲತಾ ಬಾಬು, ವಸಂತ ಬಿ.ಹೆಚ್, ನಟರಾಜಶೆಟ್ಟಿ, ದೇವರಾಜು, ಜಯಪುರ ಮಂಜಣ್ಣ, ರಾಧಮ್ಮ, ಫ್ರೂಟ್ಸ್ ಗಿರೀಶ್, ಮುನಿಬಸವರಾಜು, ನವೀನ್, ಚೆಂಗಾವಿ ರವಿ, ಸಿ.ಎಂ. ಹರೀಶ್, ಎಲೆರಾಂಪುರ ಶಿವಕುಮಾರ್ ಮೊದಲಾದವರು ಭಾಗವಹಿಸಿದ್ದರು.

> ಶಿಕ್ಷಣ ಪಡೆದರೆ ಬಡತನ, ಜಾತಿಬೇಧ ಎಲ್ಲವನ್ನೂ ಮೆಟ್ಟಿನಿಂತು ಸಮಾಜದಲ್ಲಿ ಗೌರವ ಪಡೆಯಬಹುದು. ದೇಶದಲ್ಲಿ ಲಕ್ಷಾಂತರ ಉದ್ಯೋಗಗಳ ಅವಕಾಶಗಳಿಗೆ ಅವುಗಳನ್ನು ಪಡೆಯಲು ನಮ್ಮ ಮಕ್ಕಳಿಗೆ ಸರಿಯಾದ ಮಾರ್ಗದರ್ಶನ, ಬೇಕಾದ ಕೌಶಲ್ಯ ಪರಿಣತಿಯ ಅಗತ್ಯವಿದೆ. ಈ ಎರಡರ ಬಗ್ಗೆ ತಜ್ಞರಿಂದ ಮಾರ್ಗದರ್ಶನ, ಸಲಹೆ ಕೊಡಿಸಿದರೆ ಮಕ್ಕಳು ತಮ್ಮ ಭವಿಷ್ಯದ ಬಗ್ಗೆ ಸ್ಪಷ್ಟ ನಿರ್ಧಾರ ತೆಗೆದುಕೊಂಡು ಮುನ್ನಡೆಯುತ್ತಾರೆ.ಕೇಂದ್ರದ ನರೇಂದ್ರ ಮೋದಿ ಸರ್ಕಾರ ಬಡವರ ಸಬಲೀಕರಣಕ್ಕಾಗಿ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಅಂತಹ ಯೋಜನೆಗಳ ಬಗ್ಗೆ ಜನಸಾಮಾನ್ಯರಿಗೆ, ಕಾರ್ಮಿಕರಿಗೆ, ಬಡವರಿಗೆ ಪರಿಚಯ ಮಾಡಿಕೊಟ್ಟು ಅವರು ಯೋಜನೆಗಳ ಪ್ರಯೋಜನ ಪಡೆಯಲು ಸಂಘಸಂಸ್ಥೆಗಳು ಸಹಕಾರ ನೀಡಬೇಕು.

## ಸಂಘದ ಸೇವಾ ವ್ಯಾಪ್ತಿ ವಿಸ್ತರಿಸುವ ಗುರಿ



ತುಮಕೂರು: ನಗರದ ಶ್ರೀ ಕಾಳಿಕಾಂಬ ಪತ್ತಿನ ಸಹಕಾರ ಸಂಘ ಸದಸ್ಯರ ಆರ್ಥಿಕ ಪ್ರಗತಿ ಹಾಗೂ ಪರಸ್ಪರ ಸಹಕಾರದ ಧ್ಯೆಯದೊಂದಿಗೆ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದು, ವರ್ಷದಿಂದ ವರ್ಷಕ್ಕೆ ಅಭಿವೃದ್ಧಿಯತ್ತ ಮುನ್ನಡೆಯುತ್ತಿದೆ ಎಂದು ಸಂಘದ ಅಧ್ಯಕ್ಷ ಎಸ್. ಹರೀಶ್ ಆಚಾರ್ಯ ಹೇಳಿದರು.

ನಗರದ ಚಿಕ್ಕಪೇಟೆಯ ವಾಸವಿ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ 28ನೇ ವರ್ಷದ ಸರ್ವ ಸದಸ್ಯರ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತುಮಕೂರು ನಗರವು ವಿಸ್ತರಣೆಯಾಗಿರುವ ಹಿನ್ನೆಲೆಯಲ್ಲಿ, ಸಂಘದ ಕಾರ್ಯವ್ಯಾಪ್ತಿಯಲ್ಲಿಯೂ ಹೆಚ್ಚಿನ ಅವಕಾಶಗಳು ಸೃಷ್ಟಿಯಾಗಿವೆ. ಸಂಘದ ವ್ಯಾಪ್ತಿಗೆ ಒಳಪಡುವ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿರುವ ಅರ್ಹ ಬಂಧುಗಳನ್ನು ಸಂಘದ ಸದಸ್ಯರನ್ನಾಗಿ ಸೇರ್ಪಡೆಗೊಳಿಸುವ ಮೂಲಕ ಸಂಘದ ಸದಸ್ಯತ್ವವನ್ನು ಮತ್ತಷ್ಟು ವಿಸ್ತರಿಸಲು ಆಡಳಿತ ಮಂಡಳಿಯು ಕ್ರಮ ಕೈಗೊಂಡಿದೆ. ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ವಲಯಗಳಲ್ಲಿರುವ ಅರ್ಹ ಸದಸ್ಯರು ಸಂಘದ ಸದಸ್ಯತ್ವ ಪಡೆದು ಸಂಘದ ವಿವಿಧ ಸೌಲಭ್ಯಗಳನ್ನು ಬಳಸಿಕೊಳ್ಳುವಂತೆ ಮನವಿ ಮಾಡಲಾಗುತ್ತಿದೆ ಎಂದು ಹೇಳಿದರು.

2025-26ನೇ ಸಾಲಿನಲ್ಲಿ ಸಂಘದ ಒಟ್ಟು ಠೇವಣಿ 8.15 ಕೋಟಿ ರೂ, 3.79 ಕೋಟಿ ರೂ. ಸಾಲ ವಿತರಣೆ ಮಾಡಿದೆ, ಸಂಘದ ಒಟ್ಟು ವಹಿವಾಟು ರೂ. 29 ಕೋಟಿಗೂ ಅಧಿಕ ಆಗಿರುತ್ತದೆ. ವಿವಿಧ ರೂಪದ ನಿಧಿಗಳು 1 ಕೋಟಿ 74 ಲಕ್ಷ, ಸುಮಾರು 2 ಕೋಟಿ ರೂಪಾಯಿ ವಿವಿಧೆಡೆ ಹೂಡಿಕೆ, ಸಂಘದ ಷೇರು ಬಂಡವಾಳ 49 ಲಕ್ಷ 46 ಸಾವಿರ ಸಂಘವು ಡಿಸಿಸಿ ಬ್ಯಾಂಕ್‌ನಲ್ಲಿ 1 ಕೋಟಿ ಆಪದ್ಧನ ನಿಧಿ ಹಾಗೂ 1.5 ಕೋಟಿ ಮೌಲ್ಯದ ಸ್ವಂತ ಕಟ್ಟಡ ಹೊಂದಿದೆ. ಸಂಘದ ಆರ್ಥಿಕ ಶಿಸ್ತು ಮತ್ತು ಪಾರದರ್ಶಕತೆಯನ್ನು ಕಾಪಾಡಲು ಆಡಳಿತ ಮಂಡಳಿಯು ಹೆಚ್ಚಿನ ಆದ್ಯತೆ ನೀಡಿದೆ. ಸಂಘವು ಉತ್ತಮ ಆರ್ಥಿಕ ನಿರ್ವಹಣೆ, ಸದಸ್ಯರ ವಿಶ್ವಾಸ ಮತ್ತು ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯ ನಿರಂತರ ಪ್ರಯತ್ನದಿಂದ ತನ್ನ ಉತ್ತಮ ವರ್ಗೀಕರಣವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ಹರೀಶ್ ಆಚಾರ್ಯ ಹೇಳಿದರು.

ಸಭೆಯಲ್ಲಿ ಭಾಗವಹಿಸಿದ್ದ ಶಾಸಕ ಜಿ.ಬಿ. ಜ್ಯೋತಿಗಣೇಶ್ ಅವರು ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯೂಸಿಯಲ್ಲಿ ಅಧಿಕ ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ವಿತರಿಸಲಾಯಿತು.

ಸಂಘದ ಉಪಾಧ್ಯಕ್ಷರಾದ ಜೆ.ಎನ್. ಗೋಪಾಲಕೃಷ್ಣಾಚಾರ್, ನಿರ್ದೇಶಕರಾದ ಟಿ.ಸಿ. ಢಮರುಗೇಶ್, ವಿ.ಎ. ವಿನಯ್ ಕುಮಾರ್, ಎಂ.ಎಸ್. ಲಿಂಗರಾಜಾಚಾರ್, ಟಿ.ಎ. ರವಿಕುಮಾರ್, ವೈ.ಎಸ್. ನಾಗರತ್ನ, ಟಿ.ಜೆ. ಉಷಾ, ನರಸಿಂಹಸ್ವಾಮಿ, ಟಿ.ವಿ. ಚೇತನ್ ಕುಮಾರ್, ಫೈರೋಜ್, ಸಂಘದ ವ್ಯವಸ್ಥಾಪಕರಾದ ಜಿ. ಲೀಲಾ ಹಾಗೂ ಸಿಬ್ಬಂದಿ ವರ್ಗದರಾದ ಟಿ.ಎನ್. ಮೂರ್ತಾಚಾರ್, ಟಿ.ಎನ್. ಶಶಾಂಕ್, ಬಿ.ಆರ್. ಯೋಗಾಚಾರ್ ಸಭೆಯಲ್ಲಿ ಭಾಗವಹಿಸಿದ್ದರು.

# ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ: ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ

ಪಾವಗಡ: ಶಾಲಾ ಶಿಕ್ಷಣ ಇಲಾಖೆ ಮಧುಗಿರಿ ಶೈಕ್ಷಣಿಕ ಜಿಲ್ಲೆ, ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ ಕಚೇರಿ ಪಾವಗಡ ರವರ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಗುರುಕುಲ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಶನಿವಾರ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ರವರ 139ನೇ ಜಯಂತಿ ಹಾಗೂ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ ಅದ್ದೂರಿಯಾಗಿ ನೆರವೇರಿತು.

ಕಾರ್ಯಕ್ರಮವನ್ನು ಮಧುಗಿರಿ ಶೈಕ್ಷಣಿಕ ಜಿಲ್ಲಾ ಡಿಡಿಪಿಐ ಮಾಧವರೆಡ್ಡಿ, ಶಾಸಕ ಎಚ್‌ವಿ ವೆಂಕಟೇಶ್ ಉದ್ಘಾಟಿಸಿ ಶಿಕ್ಷಕರ ದಿನಾಚರಣೆಯ ಶುಭಾಶಯ ಕೋರಿದರು.

ಶಾಸಕ ಎಚ್‌ವಿ ವೆಂಕಟೇಶ್ ಮಾತನಾಡಿ ಕ್ಷೇತ್ರದಲ್ಲಿ ಖಾಸಗಿ ಶಾಲೆಗಳ ವ್ಯಾಮೋಹದಿಂದಾಗಿ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಕ್ಷೀಣಿಸುತ್ತಿದ್ದೆ, ಸರ್ಕಾರಿ ಶಾಲಾ ಶಿಕ್ಷಕರೂ ಸಹ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ದಾಖಲು ಮಾಡುತ್ತಿರುವುದು ವಿಪರ್ಯಾಸ ಎಂದರು.



ಉತ್ತಮ ಸಮಾಜದ ನಿರ್ಮಾಣಕ್ಕೆ ಶಿಕ್ಷಕರ ಕೊಡುಗೆ ಅಪಾರವಾಗಿದೆ, ಸಮಾಜದಲ್ಲಿ ಶ್ರೀಮಂತರನ್ನು ಸೃಷ್ಠಿಮಾಡುವ ಶಕ್ತಿ ಶಿಕ್ಷಕರಿಗಿದೆ ಆದರೆ ಶ್ರೀಮಂತರಾಗುವ ಚೈತನ್ಯ ಶಿಕ್ಷಕರಿಗೆ ಇರುವುದಿಲ್ಲ ಎಂದರು, ಶಿಕ್ಷಕರ ಮನವಿ ಮೇರೆಗೆ ಗುರುಭವನ ಅಭಿವೃದ್ದಿಗೆ 25 ಲಕ್ಷ ಅನುದಾನ ಹಾಗೂ ಶಿಕ್ಷಣಾಧಿಕಾರಿಗಳ ಕಚೇರಿ ರಿಪೇರಿ ಕಾರ್ಯಗಳಿಗೆ 20 ಲಕ್ಷ ಅನುದಾನ ನೀಡುವ ಭರವಸೆ ನೀಡಿದರು.

ಡಾ.ಸವ್ಪಲ್ಲಿ ರಾಧಾಕೃಷ್ಣನ್ ರವರ ಆಶಯದಂತೆ ಅವರ ಜಯಂತಿ ಬದಲಿಗೆ ಶಿಕ್ಷಕರ ಜಯಂತಿಯನ್ನಾಗಿ ಆಚರಿಸಲಾಗುತ್ತಿದೆ, ಆದರೆ ಕಾರ್ಯಕ್ರಮದಲ್ಲಿ ವಿದ್ಯೆ ಹೇಳಿಕೊಡವ ಶಿಕ್ಷಕರೇ ಶಿಸ್ತು, ಸಂಯಮ ಮರೆತು ವರ್ತಿಸುತ್ತಿರುವುದು ಬೇಸರ ತಂದಿದೆ ಎಂದರು.

ಡಿಡಿಪಿಐ ಮಾಧವರೆಡ್ಡಿ ಮಾತನಾಡಿ ಶಿಕ್ಷಕ ವೃತ್ತಿಯಿಂದ ರಾಷ್ಟ್ರಪತಿ ಹುದ್ದೆಗೇರಿದ ಸರ್ವಪಲ್ಲಿ ರಾಧಾಕೃಷ್ಣನ್ ರವರ ಜಯಂತಿಯನ್ನು ಶಿಕ್ಷಕರ ದಿನಾಚರಣೆಯಾಗಿ ಅರ್ಥಪೂರ್ಣ ಆಚರಣೆ ಮಾಡಲಾಗುತ್ತಿದೆ, ಶಿಕ್ಷಕರು ತಮ್ಮ ಶಾಲೆಗಳಲ್ಲಿ ಶಿಸ್ತು, ಸಂಯಮ ಹಾಗೂ ಶಕ್ಷಣಕ್ಕೆ ಉತ್ತು ನೀಡಿ ಪಾಟ ಹೇಳಿಕೊಟ್ಟಾಗ ಮಾತ್ರ ವಿದ್ಯಾರ್ಥಿಗಳು ಸಮಾದಲ್ಲಿ ಬೆಳೆಯಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಪಟ್ಟಣದ ಶ್ರೀಶನಿಮಹಾತ್ಮ ದೇವಸ್ಥಾನದ ಹಿಂಭಾಗದ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠ ಶಾಲೆಯ ಶಿಕ್ಷಕಿ ಆದಿಲಕ್ಷ್ಮ್ಮ, ಕಣಿವೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯ ಶಿಕ್ಷಕ ನಾರಾಯಣಪ್ಪ.ಕೆ, ಕೊಡಮಡಗು ಸರ್ಕಾರಿ ಪ್ರೌಢಶಾಲೆಯ ದೈಹಿಕ ಶಿಕ್ಷಕಿ ವಿಮಲ.ಆರ್ ಸೇರಿದಂತೆ ಶಿರಾ, ಮಧುಗಿರಿ, ಕೊರಟಗೆರೆ ತಾಲೂಕಿನ ತಲಾ ಮೂವರು ಶಿಕ್ಷಕರಂತೆ ಒಟ್ಟು 12 ಶಿಕ್ಷಕರಿಗೆ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಗಿತು.

ಈ ವೇಳೆ ಡಯಟ್ ಪ್ರಾಂಶುಪಾಲ ಗಂಗಾಧರ್, ವೇಧಮೂರ್ತಿ, ನರಸಿಂಹಮೂರ್ತಿ, ನೌಕರರ ಸಂಘದ ತಾಲೂಕು ಅಧ್ಯಕ್ಷ ರವಿಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯತಿಕುಮಾರ್, ದೊಡ್ಡಯ್ಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ರವಿಕುಮಾರ್ ನೀಹಾ, ಶಂಕರಪ್ಪ, ಟೆಂಕಾಯಿರವಿ, ಎನ್‌ಸಿ ನಾಗಭೂಷಣ, ಕಟ್ಟಾನರಸಿಂಹಮೂರ್ತಿ, ಬಿಇಒ ರೇಣುಕಮ್ಮ, ಇಸಿಒ ವೇಣು, ಬಿಆರ್‌ಸಿ ವೆಂಖಟೇಶ್, ನಿಂಗಣ್ಣ ಸೇರಿದಂತೆ ಶಿಕ್ಷಕರ ವಿವಿಧ ಸಂಘಗಳ ಪದಾಧಿಕಾರಿಗಳು ಹಾಗೂ ಶಿಕ್ಷಕರು ಇದ್ದರು.

# ಸೆ. 10ಕ್ಕೆ ವೈಭವ ಗ್ರಂಥ ಲೋಕಾರ್ಪಣೆ

ತುಮಕೂರು: ಬಸವಯುಗ ವೈಭವ ಗ್ರಂಥ ಪ್ರಕಟಣಾ ಸಮಿತಿ, ಕರ್ನಾಟಕ, ಜಿಲ್ಲಾ ಶರಣ ಸಾಹಿತ್ಯ ಪರಿಷತ್, ತುಮಕೂರು ಇವರ ಸಂಯುಕ್ತಾಶ್ರಯದಲ್ಲಿ ಬಸವಯುಗ ವೈಭವ ಬೃಹತ್ ಗ್ರಂಥ ಲೋಕಾರ್ಪಣಾ ಸಮಾರಂಭವನ್ನು ನಗರದ ಶ್ರೀ ಸಿದ್ದಗಂಗಾ ಮಠದ ಪ್ರಾರ್ಥನಾ ಸಭಾಂಗಣದಲ್ಲಿ ಸೆ. 10 ರಂದು ಸಂಜೆ 6 ಗಂಟೆಗೆ ಏರ್ಪಡಿಸಲಾಗಿದೆ.

ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಸಿದ್ದಗಂಗಾ ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಸ್ವಾಮೀಜಿ ವಹಿಸಿ ಬಸವಯುಗ ವೈಭವ ಗ್ರಂಥವನ್ನು ಲೋಕಾರ್ಪಣೆ ಮಾಡುವರು.

ಸಮಾರಂಭವನ್ನು ಕಲ್ಬುರ್ಗಿ ಮಾಜಿ ಸಂಸದ ಹಾಗೂ ರಾಷ್ಟ್ರೀಯ ಚಿಂತಕರಾದ ಡಾ. ಬಸವರಾಜ ಪಾಟೀಲ ಸೇಡಂ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ವಹಿಸುವರು.

ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತರಾದ ಡಾ. ಎಸ್. ನಾಗಣ್ಣ, ಯಾದಗಿರಿ ಯುವ ಮುಖಂಡ ಹಾಗೂ ಚಿಂತಕ ಮಹೇಶರಡ್ಡಿ ವೆಂಕಟರಡ್ಡಿ ಮುದ್ನಾಳ ಭಾಗವಹಿಸುವರು. ಬಸವಯುಗ ವೈಭವ ಗ್ರಂಥ ಲೇಖಕರಾದ ಶಾಮಲಿಂಗ ಜವಳಗಿ ಆಶಯ ನುಡಿಗಳನ್ನಾಡುವರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ವಿದ್ವಾನ್ ಎಂ.ಜಿ. ಸಿದ್ದರಾಮಯ್ಯ ಪ್ರಾಸ್ತಾವಿಕ ನುಡಿಗಳನ್ನಾಡುವರು.

ಇದೇ ಸಂದರ್ಭದಲ್ಲಿ ಬೆಂಗಳೂರಿನ ಬಿ.ಸಿ. ಪಾಟೀಲ, ರವಿಕಿರಣ ನರಗುಂದ ಹಾಗೂ ಶರಣಕುಮಾರ ಮಠಪತಿ ರವರನ್ನು ಗೌರವಿಸಲಾಗುವುದು ಎಂದು ಬಸವಯುಗ ವೈಭವ ಗ್ರಂಥ ಪ್ರಕಟಣಾ ಸಮಿತಿ ಅಧ್ಯಕ್ಷ ಶಾಮಲಿಂಗ ಜವಳಗಿ ಹಾಗೂ ಜಿಲ್ಲಾ ಶರಣ ಪರಿಷತ್ ಅಧ್ಯಕ್ಷ ವಿದ್ವಾನ್ ಎಂ.ಜಿ. ಸಿದ್ದರಾಮಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶೇಷ ಆಹ್ವಾನಿತರಾಗಿ ಸಿದ್ದಗಂಗಾ ಮಠದ ಹಳೆಯ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಕೆ.ಹೆಚ್. ಶಿವರುದ್ರಯ್ಯ, ಹಿರಿಯ ಕಲಾವಿದ ಡಾ. ಎ.ಎಸ್. ಪಾಟೀಲ, ಜಿ.ಬಿ. ನಾಗಭೂಷಣ್, ಹೆಚ್. ಎಸ್. ಸಿದ್ದಗಂಗಪ್ಪ, ಎಸ್.ವಿ. ರವೀಂದ್ರನಾಥ ಠಾಗೂರ್, ಡಾ. ಎಸ್. ಪರಮೇಶ್, ಡಾ. ಆರ್. ಎಸ್. ಸದಾಶಿವಯ್ಯ, ಕೆ.ಎಸ್. ಸಿದ್ದಲಿಂಗಪ್ಪ, ಪ್ರೊ. ಕೆ. ಚಂದ್ರಣ್ಣ, ಶಂಕರಗೌಡ ಮ. ಬಿರಾದಾರ, ಮುದ್ದೇನಹಳ್ಳಿ ನಂಜಯ್ಯ, ಎಲ್. ಯೋಗೀಶ್, ಮುರುಳಿಕೃಷ್ಣಪ್ಪ ಮತ್ತಿತರರು ಪಾಲ್ಗೊಳ್ಳುವರು.

ಈ ಗ್ರಂಥವು ಭಾರತ, ಕರ್ನಾಟಕ ಇತಿಹಾಸ ಪರಿಚಯದೊಂದಿಗೆ ಪ್ರಾರಂಭವಾಗಿ ದೇವರು, ಧರ್ಮ, ಸಾಹಿತ್ಯ, ಕಲೆ, ಸಂಸ್ಕೃತಿ ಇತ್ಯಾದಿಗಳ ನಿರೂಪಣೆಯಲ್ಲಿ ಬಸವ ಪೂರ್ವ ಯುಗ, ಬಸವ ಸಮಕಾಲಿನ ಮತ್ತು ಬಸವೋತ್ತರ ಕಾಲದಲ್ಲಿಯ ವಸ್ತುಸ್ಥಿತಿ ಮತ್ತು ಪ್ರಾಕೃತಿಕ ನಿಯಮಾಧಾರಿತವಾದ ವಾಸ್ತವತೆಯ ವೈಚಾರಿಕ ಚಿಂತನ-ಮಂಥನದ ವಿಚಾರಧಾರೆಯ ಹೊನಲು ಇಲ್ಲಿ ಹರಿದಿದೆ. ಬಸವಪೂರ್ವ ಇತಿಹಾಸದಿಂದ ಪ್ರಾರಂಭವಾಗಿ ಇತ್ತೀಚೆಗೆ ನಡೆದ ಬಸವರ ಸಂಸ್ಕೃತಿ ಅಭಿಯಾನದ ಹೆಜ್ಜೆ ಗುರುತಿನ 856 ಪುಟಗಳ 3 ಕೆ.ಜಿ. 200 ಗ್ರಾಂ ತೂಕದ ಕಾಫಿ ಟೇಬಲ್ ಬುಕ್ ಇದಾಗಿದೆ. 43 ಜನ ಹಿರಿಯ ಕಲಾವಿದರ 600ಕ್ಕೂ ಹೆಚ್ಚು ಕಲಾಕೃತಿಗಳನ್ನು ಈ ಗ್ರಂಥದಲ್ಲಿ ಬಳಸಿಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಬಸವಯುಗ ವೈಭವ ಗ್ರಂಥ ಲೋಕಾರ್ಪಣೆ ಸಮಾರಂಭದಲ್ಲಿ ಸಾಹಿತಿಗಳು, ಪುಸ್ತಕ ಪ್ರೇಮಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

# ಚಿತ್ರದುರ್ಗ ಶಾಖಾ ಕಾಲುವೆಯಲ್ಲಿ ಪ್ರಾಯೋಗಿಕ ನೀರು ಹರಿವು



ಚಿತ್ರದುರ್ಗ: ಬರಪೀಡಿತ ಚಿತ್ರದುರ್ಗ ಜಿಲ್ಲೆಯ ನೀರಾವರಿ ವ್ಯವಸ್ಥೆಗೆ ಹೊಸ ಭರವಸೆ ಮೂಡಿದ್ದು, ಭದ್ರಾ ಮೇಲ್ದಂಡೆ ಯೋಜನೆಯ ಜಿಲ್ಲಾ ಶಾಖಾ ಕಾಲುವೆಯಲ್ಲಿ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ.

ಈ ಮೂಲಕ ಜಿಲ್ಲೆಯ ನೀರಾವರಿ ಹಾಗೂ ಜಲ ಭದ್ರತೆ ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಡಲಾಗಿದೆ. ಇಂದು ಚಿತ್ರದುರ್ಗ ಶಾಖಾ ಕಾಲುವೆಗೆ ಭದ್ರಾ ಜಲಾಶಯದಿಂದ ಪ್ರಾಯೋಗಿಕವಾಗಿ 3 ಟಿಎಂಸಿ ನೀರು ಹರಿಸಿ ಈ ಪ್ರಾಯೋಗಿಕ ಚಾಲನೆ ನಡೆಸಲಾಯಿತು.

ಕರ್ನಾಟಕ ಸಚಿವ ಟಿ. ರಘುಮೂರ್ತಿ, ಕಾಂಗ್ರೆಸ್ ಶಾಸಕ ಟಿ.ಬಿ. ಜಯಚಂದ್ರ ಸೇರಿದಂತೆ ಹಲವು ನಾಯಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದು, ಕಾಲುವೆಗೆ ನೀರು ಹರಿಸಿದರು.

ಬರಪೀಡಿತ ಪ್ರದೇಶಗಳ ನೀರಾವರಿ ಮತ್ತು ಜಲ ಭದ್ರತೆಯನ್ನು ಬಲಪಡಿಸುವ ಉದ್ದೇಶದಿಂದ ಕೈಗೊಳ್ಳಲಾಗಿರುವ ಮೇಲ್ಭದ್ರಾ ಯೋಜನೆಯಡಿ ಚಿತ್ರದುರ್ಗ ಶಾಖಾ ಕಾಲುವೆಯಲ್ಲಿ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ.

ಭದ್ರಾ ಮೇಲ್ದಂಡೆ ಯೋಜನೆಯ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿರುವ ಬರಪೀಡಿತ ಪ್ರದೇಶಗಳಿಗೆ ನೀರು ಒದಗಿಸುವ ಕಾರ್ಯದಲ್ಲಿ ಚಿತ್ರದುರ್ಗ ಶಾಖಾ ಕಾಲುವೆಯ ಈ ಪ್ರಾಯೋಗಿಕ ನೀರು ಹರಿಸುವಿಕೆ ಸಾಕಷ್ಟು ಮಹತ್ವ ಪಡೆದಿದೆ.

ಕಾಲುವೆಯಲ್ಲಿ ನೀರು ಹರಿಸಿ ಅದರ ಕಾರ್ಯ ಕ್ಷಮತೆ ಹಾಗೂ ನೀರು ಸಾಗಣೆ ವ್ಯವಸ್ಥೆಯನ್ನು ಪರಿಶೀಲಿಸುವ ಪ್ರಕ್ರಿಯೆ ಆರಂಭವಾಗಿದೆ.

ಯೋಜನೆ ಪೂರ್ಣ ಪ್ರಮಾಣದಲ್ಲಿ ಕಾರ್ಯಗತಗೊಂಡ ಬಳಿಕ ಚಿತ್ರದುರ್ಗ ಜಿಲ್ಲೆಯ ಹಲವು ಪ್ರದೇಶಗಳ ಕೃಷಿ ಚಟುವಟಿಕೆಗಳಿಗೆ ನೀರಿನ ಲಭ್ಯತೆ ಸುಧಾರಿಸುವ ನಿರೀಕ್ಷೆಯಿದೆ. ಇದರಿಂದ ಮಳೆಯನ್ನೇ ಅವಲಂಬಿಸಿರುವ ರೈತರಿಗೆ ಹೆಚ್ಚಿನ ಅನುಕೂಲವಾಗಲಿದ್ದು, ಕೃಷಿ ಉತ್ಪಾದಕತೆ ಹೆಚ್ಚಿಸಲು ನೆರವಾಗಲಿದೆ. ಅಲ್ಲದೆ, ನೀರಾವರಿ ಸೌಲಭ್ಯ ವಿಸ್ತರಣೆಯಿಂದ ಕೃಷಿ ಆಧಾರಿತ ಚಟುವಟಿಕೆಗಳಿಗೆ ಉತ್ತೇಜನ ದೊರೆಯುವ ಜೊತೆಗೆ, ಗ್ರಾಮೀಣ ಆರ್ಥಿಕತೆ ಮತ್ತು ಈ ಭಾಗದ ಒಟ್ಟಾರೆ ಅಭಿವೃದ್ಧಿಗೂ ಯೋಜನೆ ಕೊಡುಗೆ ನೀಡುವ ನಿರೀಕ್ಷೆಯಿದೆ.

ಬರದ ನಾಡು ಎಂಬ ಹಣೆಪಟ್ಟಿ ಹೊಂದಿರುವ ಚಿತ್ರದುರ್ಗಕ್ಕೆ ನೀರಿನ ಶಾಶ್ವತ ಪರಿಹಾರದ ನಿರೀಕ್ಷೆ ಮೂಡಿಸಿರುವ ಮೇಲ್ಭದ್ರಾ ಯೋಜನೆಯ ಪ್ರಗತಿಯತ್ತ ಶಾಖಾ ಕಾಲುವೆಯ ಟ್ರಯಲ್ ರನ್ ಮತ್ತೊಂದು ಪ್ರಮುಖ ಹೆಜ್ಜೆಯಾಗಿದೆ. ಈ ಮೂಲಕ ಚಿತ್ರದುರ್ಗ ಜಿಲ್ಲೆಯ ರೈತರಿಗೆ ನೀರಾವರಿ ಸೌಲಭ್ಯ ವಿಸ್ತರಣೆಯಾಗುವ ನಿರೀಕ್ಷೆ ಮೂಡಿದೆ. ಕಾಲುವೆ ಮೂಲಕ ನೀರು ಲಭ್ಯವಾದರೆ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ದೊರೆಯಲಿದ್ದು, ಬರದಿಂದ ಸಂಕಷ್ಟಕ್ಕೊಳಗಾಗಿರುವ ರೈತರಿಗೆ ದೊಡ್ಡ ಮಟ್ಟದ ನೆರವಾಗಲಿದೆ.

ಯೋಜನೆಯ ಪ್ರಗತಿಯಿಂದ ಚಿತ್ರದುರ್ಗ ಸೇರಿದಂತೆ ಬರಪೀಡಿತ ಪ್ರದೇಶಗಳಲ್ಲಿ ನೀರಿನ ಲಭ್ಯತೆ ಹೆಚ್ಚಿಸುವ ಜೊತೆಗೆ ಕೃಷಿ ಉತ್ಪಾದಕತೆ ಮತ್ತು ಗ್ರಾಮೀಣ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ಸಿಗುವ ನಿರೀಕ್ಷೆಯಿದೆ.

# ಅಕ್ರಮ ಬಾಂಗ್ಲಾ ವಲಸಿಗರ ಪ್ರಯಾಣ ಶಂಕೆ: ತೀವ್ರ ತಪಾಸಣೆ



ದಾವಣಗೆರೆ: ರೈಲಿನಲ್ಲಿ ಅಕ್ರಮ ಬಾಂಗ್ಲಾ ವಲಸಿಗರು ಸಂಚರಿಸುತ್ತಿದ್ದಾರೆಂಬ ಮಾಹಿತಿಯ ಮೇರೆಗೆ ಆರ್?ಪಿಎಫ್ ಪೊಲೀಸರು ಶನಿವಾರ ತಡರಾತ್ರಿ ಬೆಂಗಳೂರು-ಛತ್ತೀಸ್‌ಗಢ ರೈಲಿನಲ್ಲಿ ತೀವ್ರ ತಪಾಸಣೆ ನಡೆಸಿದರು. ತಪಾಸಣೆ ವೇಳೆ ರೈಲಿನಲ್ಲಿ ಅಕ್ರಮ ಬಾಂಗ್ಲಾ ವಲಸಿಗರು ಪತ್ತೆಯಾಗಿಲ್ಲ ಎಂದು ರೈಲ್ವೆ ಪೊಲೀಸರು ಮಾಹಿತಿ ನೀಡಿದ್ದಾರೆ.

ದಾವಣಗೆರೆ ರೈಲು ನಿಲ್ದಾಣಕ್ಕೆ ಆಗಮಿಸಿದ್ದ ಬೆಂಗಳೂರು-ಛತ್ತೀಸ್‌ಗಢ ರೈಲಿನ ಕೆಲ ಬೋಗಿಗಳ ಮೇಲೆ ಪೊಲೀಸರು ದಿಢೀರ್ ದಾಳಿ ನಡೆಸಿ, ಪರಿಶೀಲನೆ ನಡೆಸಿದರು. ಅದರಲ್ಲಿನ ಪ್ರಯಾಣಿಕರನ್ನು ಸಿಬ್ಬಂದಿ ತಪಾಸಣೆಗೆ ಒಳಪಡಿಸಿದರು.

ಅಕ್ರಮ ಬಾಂಗ್ಲಾ ವಲಸಿಗರು ರೈಲಿನಲ್ಲಿ ಸಂಚರಿಸುತ್ತಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಅಂತೆಯೇ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ 10ಕ್ಕೂ ಹೆಚ್ಚು ಯುವಕರು, ಮಹಿಳೆಯ ಮೇಲೆ ಪೊಲೀಸರು ನಿಗಾ ಇಟ್ಟಿದ್ದರು. ರೈಲು ದಾವಣಗೆರೆ ನಿಲ್ದಾಣಕ್ಕೆ ಬರುತ್ತಿದ್ದಂತೆ ರೈಲಿನಲ್ಲಿನ ಪ್ರಯಾಣಿಕರ ಐಡಿ ಕಾರ್ಡ್, ದಾಖಲೆಗಳನ್ನು ಪರಿಶೀಲನೆ ನಡೆಸಿದರು.

ರೈಲಿನಲ್ಲಿದ್ದ ಅನುಮಾನಾಸ್ಪದ ಮಹಿಳೆಯನ್ನು ಪೊಲೀಸರು ವಿಚಾರಣೆ ಮಾಡಿದರು. ತಪಾಸಣೆ ವೇಳೆ ಅಕ್ರಮ ಬಾಂಗ್ಲಾ ವಲಸಿಗರು ಕಂಡುಬಂದಿಲ್ಲ ಎಂದು ಪೊಲೀಸರು ತಿಳಿಸಿದರು.

ಈ ಕುರಿತು ದಾವಣಗೆರೆ ರೈಲ್ವೆ ಪೊಲೀಸ್ ಠಾಣೆಯ ಪಿಐ ಕೃಷ್ಣ ನಾಯ್ಕ್ ಅವರು ಮಾತನಾಡಿ, "ಅಕ್ರಮ ಬಾಂಗ್ಲಾ ವಲಸಿಗರು ರೈಲಿನಲ್ಲಿ ಸಂಚರಿಸುತ್ತಿದ್ದಾರೆ ಎಂಬ ಮಾಹಿತಿ ಸಿಕ್ಕಿತ್ತು. ಹಾಗಾಗಿ ರೈಲು ದಾವಣಗೆರೆ ನಿಲ್ದಾಣಕ್ಕೆ ಬಂದ ತಕ್ಷಣ ನಮ್ಮ ಸಿಬ್ಬಂದಿ ಹಾಗೂ ಆರ್‌ಪಿಎಫ್‌ನವರು ಸೇರಿ ಪರಿಶೀಲನೆ ನಡೆಸಿದ್ದೇವೆ. ಇದೇ ರೀತಿ ಅರಸೀಕೆರೆ ಜಂಕ್ಷನ್?ನಲ್ಲಿ ಪರಿಶೀಲನೆ ಮಾಡಿದ್ದಾರೆ. ಅದರೆ ಯುಪಿ ಮೂಲದ ಏಳು ಜನ ರೈಲಿನಲ್ಲಿ ಪ್ರಯಾಣ ಮಾಡ್ತಿದ್ದರು. ಅವರ ದಾಖಲೆ ಪರಿಶೀಲನೆ ಮಾಡಿದ್ದೇವೆ ಅಷ್ಟೇ. ರೈಲಿನಲ್ಲಿ ಅಕ್ರಮ ಬಾಂಗ್ಲಾದವರು ಪತ್ತೆಯಾಗಿಲ್ಲ" ಎಂದು ಅವರು ಸ್ಪಷ್ಟಪಡಿಸಿದ್ದಾರೆ.

# ಬಾಲ್ಯ ವಿವಾಹ ತಡೆಗಟ್ಟುವಲ್ಲಿ ಯಶಸ್ವಿ



ಮಧುಗಿರಿ: ರೀಡ್ ಸಂಸ್ಥೆಯು ತುಮಕೂರು ಜಿಲ್ಲೆಯಲ್ಲಿ 300 ಬಾಲ್ಯ ವಿವಾಹಗಳನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದೆ ಎಂದು ರೀಡ್ ಸಂಸ್ಥೆಯ ಜಿಲ್ಲಾ ಸಂಯೋಜಕರಾದ ಎನ್ ಮಂಜುನಾಥ್ ತಿಳಿಸಿದ್ದಾರೆ. ಪಟ್ಟಣದ ಎಂಜಿಎಂ ಪ್ರೌಢಶಾಲೆಯಲ್ಲಿ ಬಾಲ್ಯ ವಿವಾಹ ಕುರಿತು ನಡೆದ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ನವೆಂಬರ್ 27ರಂದು ಬಾಲ್ಯ ವಿವಾಹ ಹಾಗೂ ಬಲವಂತದ ವಿವಾಹಗಳ ನಿರ್ಮೂಲನೆಗಾಗಿ ಅಂತರರಾಷ್ಟ್ರೀಯ ದಿನ ಇಂದು ಘೋಷಿಸಿದೆ ಈ ಹಿನ್ನೆಲೆಯಲ್ಲಿ ಶಾಲೆಗಳು ಗ್ರಾಮ ಪಂಚಾಯಿತಿಗಳು ಮತ್ತು ಗ್ರಾಮಗಳಲ್ಲಿ ಜಾಗೃತಿ ಅಭಿಯಾನ ಕೈಗೊಳ್ಳಲಾಗಿದೆ ಬಾಲ್ಯ ವಿವಾಹ ನಿರ್ಮೂಲನೆ ಮಾಡಲು ಜನರು ಪ್ರತಿಜ್ಞೆ ಕೈಗೊಳ್ಳುವಂತೆ ಪ್ರೋತ್ಸಾಹಿಸಬೇಕಾಗಿದೆ ನಮ್ಮ ಸಂಸ್ಥೆ ವತಿಯಿಂದ ಶಾಲೆಯಿಂದ ಹೊರಗೆ ಉಳಿಯುತ್ತಿದ್ದ ಮಕ್ಕಳನ್ನು ಮತ್ತೆ ಶಾಲೆಗೆ ದಾಖಲಿಸಿಕೊಳ್ಳುವ ಅಗತ್ಯ ನೆರವು ಮತ್ತು ಮಾರ್ಗದರ್ಶನವನ್ನು ನಮ್ಮ ಸಂಸ್ಥೆ ಒದಗಿಸುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕರಾದ ಶ್ವೇತಾ ರೀಡ್ ಸಂಸ್ಥೆಯ ಕಿಶೋರ್ ಕಾವ್ಯ ಪರಿವರ್ತನಾ ಸಂಸ್ಥೆಯ ನಾಗೇಶ್ ಹಾಜರಿದ್ದರು.

# ರಾಸುಗಳಿಗೆ ವಿಮೆ ಮಾಡಿಸಿ ಆರ್ಥಿಕ ನಷ್ಟದಿಂದ ರಕ್ಷಿಸಿಕೊಳ್ಳಿ



ಶಿರಾ: ಹೈನುಗಾರರು ತಮ್ಮ ರಾಸುಗಳಿಗೆ ವಿಮೆ ಮಾಡಿಸುವ ಮೂಲಕ ಅನಿರೀಕ್ಷಿತ ನಷ್ಟದಿಂದ ಆರ್ಥಿಕವಾಗಿ ರಕ್ಷಿಸಿಕೊಳ್ಳಬೇಕು. ರಾಸುಗಳು ಅನಾರೋಗ್ಯ, ಅಪಘಾತ ಅಥವಾ ಇತರೆ ಕಾರಣಗಳಿಂದ ಮೃತಪಟ್ಟರೆ ರೈತರಿಗೆ ದೊಡ್ಡ ಪ್ರಮಾಣದ ಆರ್ಥಿಕ ನಷ್ಟ ಉಂಟಾಗುತ್ತದೆ. ಇಂತಹ ಸಂದರ್ಭದಲ್ಲಿ ವಿಮೆ ಮಾಡಿಸಿರುವ ರೈತರಿಗೆ, 75,000 ರೂ. ವರೆಗೂ ವಿಮಾ ಪರಿಹಾರ ದೊರೆಯುತ್ತದೆ ಎಂದು ತುಮಕೂರು ಹಾಲು ಒಕ್ಕೂಟದ ನಿರ್ದೇಶಕ ಎಸ್.ಆರ್.ಗೌಡ ಹೇಳಿದರು.

ಅವರು ಶನಿವಾರ ಶಿರಾ ತಾಲೂಕಿನ ಹುಳಿಗೆರೆ ಹಾಲು ಉತ್ಪಾದಕರ ಸಹಕಾರ ಸಂಘದ 2025-26ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ರೈತರು ಯಾವುದೇ ಅನಿರೀಕ್ಷಿತ ಪರಿಸ್ಥಿತಿಯಲ್ಲಿ ಆರ್ಥಿಕ ಸಂಕಷ್ಟಕ್ಕೆ ಒಳಗಾಗದಂತೆ ತಮ್ಮ ರಾಸುಗಳಿಗೆ ಸೂಕ್ತ ಸಮಯದಲ್ಲಿ ವಿಮೆ ಮಾಡಿಸಿಕೊಳ್ಳುವ ಮೂಲಕ ರಾಸುಗಳಿಗೆ ಭದ್ರತೆ ಕಲ್ಪಿಸಿಕೊಳ್ಳಬೇಕು. ಸೆಪ್ಟೆಂಬರ್ ತಿಂಗಳಿನಿಂದ ವಿಮೆ ಪ್ರಾರಂಭವಾಗುವುದು. ಆದ್ದರಿಂದ ತಾಲೂಕಿನ ಎಲ್ಲಾ ಹಾಲು ಉತ್ಪಾದಕರುಗಳು ಇದರ ಸೌಲಭ್ಯವನ್ನು ಪಡೆದುಕೊಳ್ಳಬೇಕು ಎಂದ ಅವರು ಹೈನುಗಾರರಿಗೆ ಹಾಲು ಉತ್ಪಾದನೆಗೆ ಪ್ರೋತ್ಸಾಹಿಸಲು ಮತ್ತು ಆರ್ಥಿಕವಾಗಿ ಇನ್ನಷ್ಟು ಶಕ್ತಿ ತುಂಬಲು ತುಮಕೂರು ಹಾಲು ಒಕ್ಕೂಟದಲ್ಲಿ ಅತಿ ಶೀಘ್ರದಲ್ಲಿ ಹಾಲಿನ ದರ ಪರಿಷ್ಕರಣೆ ಆಗಲಿದೆ. ಈ ಬಗ್ಗೆ ಒಕ್ಕೂಟದಿಂದ ಆದೇಶ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ತುಮಕೂರು ಹಾಲು ಒಕ್ಕೂಟದ ಉಪ ವ್ಯವಸ್ಥಾಪಕ ಗಿರೀಶ್, ಹುಳಿಗೆರೆ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಚ್.ಈ.ರಂಗನಾಥ್, ಉಪಾಧ್ಯಕ್ಷ ಈರಣ್ಣ, ನಿರ್ದೇಶಕರಾದ ರಾಜಣ್ಣ, ಲಕ್ಷ್ಮೀಕಾಂತ್, ಕೃಷ್ಣಪ್ಪ, ಎಚ್.ಟಿ. ಮಂಜುನಾಥ್, ಎಚ್.ಎಸ್.ಲಕ್ಷ್ಮೀಕಾಂತ್, ಎಚ್.ಜಿ.ಈರಣ್ಣ, ರಾಮಚಂದ್ರಪ್ಪ, ಗೀತಮ್ಮ, ಶಿವಮ್ಮ, ಬಿ.ಎಚ್.ಲಕ್ಷ್ಮೀದೇವಿ, ಎಚ್.ಟಿ.ಕುಮಾರ್, ಗೌರವ ಕಾರ್ಯದರ್ಶಿ ರಾಮಕೃಷ್ಣಪ್ಪ, ಕಾರ್ಯದರ್ಶಿ ಎಚ್.ಪಿ. ಆನಂದ್, ಹಾಲು ಪರೀಕ್ಷಕ ಎಚ್.ಕೆ. ಯತೀಶ್ ಕುಮಾರ್, ಸಹಾಯಕಿ ಸಾಕಮ್ಮ ತಿಮ್ಮೇಗೌಡ, ಕಾರ್ಯಕರ್ತ ಬಲರಾಮ ಸೇರಿದಂತೆ ಹಲವರು ಹಾಜರಿದ್ದರು.

# ಬರ ಘೋಷಣೆ ಸಂಬಂಧ 'ಕೈ'ನಾಯಕರ ಜಟಾಪಟಿ





ಬೆಂಗಳೂರು: ಬರ ಘೋಷಣೆ ವಿಚಾರವಾಗಿ ಸಚಿವ ಎಂ.ಬಿ. ಪಾಟೀಲ್ ವಿರುದ್ಧ ಮುದ್ದೇಬಿಹಾಳ ಕಾಂಗ್ರೆಸ್ ಹಿರಿಯ ಶಾಸಕ ಅಪ್ಪಾಜಿ ಸಿ.ಎಸ್. ನಾಡಗೌಡ ಬಹಿರಂಗ ಸಮರ ಸಾರಿದ್ದಾರೆ. ಬರ ವಿಚಾರವಾಗಿ ವಿಜಯಪುರ ಜಿಲ್ಲೆಯ ಹಿರಿಯ ಕೈ ನಾಯಕರ ಮಧ್ಯೆ ಜಟಾಪಟಿ ಏರ್ಪಟ್ಟಿದೆ.

ಸಚಿವ ಎಂ.ಬಿ. ಪಾಟೀಲ್ ವಿರುದ್ಧ ಆಕ್ರೋಶ ಹೊರಹಾಕಿರುವ ಮುದ್ದೇಬಿಹಾಳ ಕ್ಷೇತ್ರದ ಕಾಂಗ್ರೆಸ್ ಶಾಸಕ ಅಪ್ಪಾಜಿ ಸಿ.ಎಸ್. ನಾಡಗೌಡ ಮಾಧ್ಯಮ ಪ್ರಕಟಣೆ ಹೊರಡಿಸಿ, ಸಚಿವ ಎಂ.ಬಿ. ಪಾಟೀಲ್ ಅವರಿಗೆ ರಾಜಕೀಯ ನಿವೃತ್ತಿಯ ಸವಾಲು ಹಾಕಿದ್ದಾರೆ.

ನಮ್ಮ ಮತಕ್ಷೇತ್ರದ ಮುದ್ದೇಬಿಹಾಳ ಮತ್ತು ತಾಳಿಕೋಟಿ ತಾಲೂಕುಗಳನ್ನು ನಿಯಮಾನುಸಾರ ಬರಪಟ್ಟಿಯಲ್ಲಿ ಸೇರಿಸುವುದು ಜಿಲ್ಲಾ ಮಂತ್ರಿಗಳ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ನಾನು ಅನ್ಯಾಯವಾಗಿದ್ದನ್ನು ಪ್ರಶ್ನಿಸುವುದು ನನ್ನ ಕರ್ತವ್ಯವಾಗಿದೆ. ಅದನ್ನು ನಾನು ಕೇಳಿದ್ದೇನೆ, ಒತ್ತಾಯಿಸಿದ್ದೇನೆ. ಈ ಕುರಿತು ನಾನು ನಮಗಾದ ಅನ್ಯಾಯ ವಿರುದ್ಧ ಸತ್ಯಾಗ್ರಹ ಮಾಡುವುದಾಗಿ ನೀಡಿದ ನನ್ನ ಹೇಳಿಕೆಗೆ ಚಡಪಡಿಸಿ ಒದ್ದಾಡುತ್ತಿರುವ ತಮ್ಮ ಬಗ್ಗೆ ನಾನೇನು ಹೊಸದಾಗಿ ಹೇಳಬೇಕಿಲ್ಲ. ವಿಜಯಪುರ ಜಿಲ್ಲೆಯ ರಾಜಕಾರಣದ ಬಗ್ಗೆ ಗೊತ್ತಿರುವವರೆಲ್ಲರಿಗೂ ನಿಮ್ಮ ಪಿತೂರಿ ಬಗ್ಗೆ ಗೊತ್ತಿರುವುದು ಹೊಸದೇನಲ್ಲ ಎಂದು ಟೀಕಿಸಿದ್ದಾರೆ.

ನಿಮಗೆ ಕಳೆದ ಹಲವು ವರ್ಷಗಳಿಂದ ಜಿಲ್ಲೆಯ ಕಾಂಗ್ರೆಸ್ ಪಕ್ಷದ ಶಾಸಕರಿಗಿಂತ, ನಾಯಕರಿಗಿಂತ ವಿರೋಧ ಪಕ್ಷದ ಹಲವರ ಜೊತೆ ಮಧುರ ಬಾಂಧವ್ಯ ಇದೆ. ತನಗಾಗದವರನ್ನು ಸ್ವಪಕ್ಷೀಯರು ಅಂತಲೂ ನೋಡದೇ ವಾಮಮಾರ್ಗದಿಂದ ಹಣಿಯಲು ಪ್ರಯತ್ನಿಸುತ್ತಿರುವುದನ್ನೆಲ್ಲ ಎಳೆ ಎಳೆಯಾಗಿ ನಾನು ಸೇರಿದಂತೆ ಜಿಲ್ಲೆಯ ಇತರೆ ನಾಯಕರು ಹೈಕಮಾಂಡ್ ಗಮನಕ್ಕೆ ತಂದಿದ್ದೇವೆ. ಹೈಕಮಾಂಡ್ ಕೂಡ ನಮಗೆ ಸಹನೆ ಕಾಯ್ದುಕೊಳ್ಳಲು ತಿಳಿಹೇಳಿದ್ದರಿಂದ ರಾಜಕೀಯ ವಿಷಯದಲ್ಲಿ ನಾವೆಲ್ಲರೂ ತಾಳ್ಮೆಯಿಂದ ಇದ್ದೇವೆ. ಆದರೆ ಬೀಕರ ಬರಗಾಲ ಬಂದು ನನ್ನ ಕ್ಷೇತ್ರದ ಅನ್ನದಾತರು ಸಂಕಟದಲ್ಲಿರುವ ಸಮಯದಲ್ಲೂ ಕೂಡ ನಾನು ಮೌನವಾಗಿದ್ದರೆ ಎಷ್ಟು ಸರಿ? ಎಂದು ವಾಗ್ದಾಳಿ ನಡೆಸಿದ್ದಾರೆ.

ಬರಪಟ್ಟಿಯಲ್ಲಿ ಸೇರಿಸದಿರಲು ಕಾರಣವೇನು? ಈ ಸಮಯದಲ್ಲಿ ನೀವು ಎಸಗಿರುವ ಅನ್ಯಾಯವನ್ನೆಲ್ಲ ಅದುಮಿಟ್ಟುಕೊಂಡು ಸುಮ್ಮನಿರಲು ಹೇಗೆ ಸಾಧ್ಯ? ನಮ್ಮ ರೈತರ ಹಿತಕ್ಕಿಂತ ವೈಯಕ್ತಿಕ ಪ್ರತಿಷ್ಠೆ ಏನೂ ದೊಡ್ಡದಲ್ಲ. ತಾವು ಏನೇನು ಪಿತೂರಿ ಮಾಡುತ್ತಿದ್ದೀರಿ ಎಂಬ ಬಗ್ಗೆ ಜಿಲ್ಲೆಯ ನಾಯಕರಿಗೆ, ಜನತೆಗೆ ಹಾಗೂ ರೈತರಿಗೆ ತಿಳಿದಿದೆ. ಇನ್ನು ಮುಂದೆಯಾದರೂ ತಮ್ಮ ದ್ವಂದ್ವ ಹೇಳಿಕೆಗಳನ್ನು ನಿಲ್ಲಿಸಿ. ನಮ್ಮ ವರಿಷ್ಠರು ದೆಹಲಿಗೆ ಆಗಮಿಸುವಂತೆ ಕರೆ ಮಾಡಿ ತಿಳಿಸಿದ್ದರಿಂದಾಗಿ ನಾನು ಆಗಸ್ಟ್ 5ರಂದು ಸಾಯಂಕಾಲ 5 ಗಂಟೆಗೆ ಬೆಂಗಳೂರಿನಿಂದ ದೆಹಲಿಗೆ ಪ್ರಯಾಣ ಬೆಳೆಸಿ ನಂತರ ಆಗಸ್ಟ್ 7ರಂದು ರಾತ್ರಿ ಬೆಂಗಳೂರಿಗೆ ಪ್ರಯಾಣ ಬೆಳೆಸಿ ಮರಳಿದ್ದೇನೆ. ತದನಂತರ ಆಗಸ್ಟ್ 10ರಂದು ನನ್ನ ಕ್ಷೇತ್ರ ಮುದ್ದೇಬಿಹಾಳಕ್ಕೆ ತೆರಳಿ ದಿನಾಂಕ 11-08-2026ರಂದು ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಮುದ್ದೇಬಿಹಾಳ ಹೋಬಳಿ ಹಾಗೂ ಢವಳಗಿ ವ್ಯಾಪ್ತಿಯ ಗ್ರಾಮಗಳ ರೈತರ ಹೊಲಗಳಿಗೆ ಭೇಟಿ ನೀಡಿ ಬೆಳೆ ಪರಿಶೀಲನೆ ನಡೆಸಿದ್ದೆ. ಬರಗಾಲದ ಕುರಿತು ಮಾಹಿತಿ ಕಲೆ ಹಾಕಿ ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ತಿಳಿಸುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ. ಆದರೆ ತಾವು ಕೇಂದ್ರ ಸರ್ಕಾರದ ಮಾರ್ಗ ಸೂಚಿಗಳನ್ವಯ ರಾಜ್ಯದ ವಿಪತ್ತು ಕೋಶದವರು ಕಾಲ ಕಾಲಕ್ಕೆ ಸ್ಯಾಟಲೈಟ್ ಮೂಲಕ ಮಾಹಿತಿ ಪಡೆದು ಪ್ರತಿವಾರ ಮಳೆಯಾಧಾರಿತ ಮತ್ತು ಬೆಳೆಯಾಧಾರಿತ ಭೂಮಿಯ ತೇವಾಂಶವನ್ನು ಆಧರಿಸಿ ಘೋಷಿಸುತ್ತಾರೆ ಎಂಬುದು ನನಗೂ ಅರಿವಿದೆ. ಆದರೆ ಇವೆಲ್ಲ ನಿಯಮವನ್ನು ಅನುಸರಿಸಿದರೂ ಕೂಡ ಬರಪಟ್ಟಿಯಲ್ಲಿ ಸೇರಿಸದಿರಲು ಕಾರಣವೇನು ಆದರೆ ನೀವು ನಿಮ್ಮ ತಪ್ಪನ್ನು ಮರೆಮಾಚಲು ನಾನು ದೆಹಲಿಯಲ್ಲಿದ್ದೇನೆ ಎಂದು ಜನರಿಗೆ ಹಾಗೂ ರೈತರಿಗೆ ತಪ್ಪು ಸಂದೇಶ ನೀಡುತ್ತಿದ್ದೀರಿ ಎಂದು ನಾಡಗೌಡ ಕಿಡಿಕಾರಿದ್ದಾರೆ.

ನಾನು ಕಾಂಗ್ರೆಸ್ ಪಕ್ಷದ ಹಾಗೂ ವರಿಷ್ಠರ ವಿರುದ್ಧ ವಿರೋಧ ಚಟುವಟಿಕೆಗಳ ಹೇಳಿಕೆಯನ್ನು ನಡೆಸುತ್ತಿರುವ ಬಗ್ಗೆ ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದೀರಿ. ನಮ್ಮ ಕಾಂಗ್ರೆಸ್ ಸರ್ಕಾರದ ವಿರುದ್ಧ ಹಾಗೂ ಹೈಕಮಾಂಡ್ ವಿರುದ್ಧ ಒಂದೇ ಒಂದು ಕೀಳುಮಟ್ಟದ ಹಾಗೂ ಪಕ್ಷಕ್ಕೆ ಸರ್ಕಾರಕ್ಕೆ ಮುಜುಗರವನ್ನುಂಟು ಮಾಡುವ ಹೇಳಿಕೆ ನೀಡಿದ್ದು ಸಾಬೀತು ಪಡಿಸಿದರೆ ನಾನು ರಾಜಕೀಯವಾಗಿ ನಿವೃತ್ತಿ ಹೊಂದುತ್ತೇನೆ. ಒಂದು ವೇಳೆ ತಮ್ಮ ಮೇಲೆ ಪಕ್ಷ ವಿರೋಧಿ ಚಟುವಟಿಕೆಗಳು ಸಾಬೀತಾದರೆ ಎಂ.ಬಿ. ಪಾಟೀಲ್ ಅವರೇ ರಾಜಕೀಯವಾಗಿ ನಿವೃತ್ತಿ ಹೊಂದಲು ಸಿದ್ಧರಿದ್ದೀರಾ ಎಂದು ಅವರು ಸವಾಲು ಹಾಕಿದ್ದಾರೆ.

ಸಚಿವ ಎಂ.ಬಿ.ಪಾಟೀಲ್ ತಿರುಗೇಟು: ಅಪ್ಪಾಜಿ ನಾಡಗೌಡ ಆರೋಪಕ್ಕೆ ಪ್ರತಿಯಾಗಿ ಪತ್ರ ಬರೆದಿರುವ ಸಚಿವ ಎಂ.ಬಿ. ಪಾಟೀಲ್, ವಿಜಯಪುರ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿಯೂ ಮಳೆ ಅಭಾವದಿಂದ ಬರದ ತೀವ್ರ ಸ್ಥಿತಿ ಇದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ರಾಜ್ಯದ ವಿಪತ್ತು ಕೋಶದವರು ಕಾಲ-ಕಾಲಕ್ಕೆ ಸ್ಯಾಟಲೈಟ್ ಮೂಲಕ ಮಾಹಿತಿ ಪಡೆದು, ಪ್ರತಿವಾರ ವಸ್ತು ಸ್ಥಿತಿಯನ್ನು ಅವಲೋಕಿಸಿ, ಬರದ ತಾಲೂಕುಗಳನ್ನು ಘೋಷಿಸುತ್ತಾರೆ. ವಿಜಯಪುರ ಜಿಲ್ಲೆಯ ಎಲ್ಲ ತಾಲೂಕುಗಳನ್ನು ಬರ ಪೀಡಿತ ಎಂದು ಘೋಷಿಸುವಂತೆ ಸಭೆ ನಡೆಸಿ, ಸರ್ಕಾರಕ್ಕೆ ಮಾಹಿತಿ ನೀಡಿ, ಪತ್ರವನ್ನು ನೀಡಿದ್ದೇನೆ. ಮುಂದಿನ ವಾರಗಳಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳು ಬರ ಪೀಡಿತ ಎಂದು ಘೋಷಣೆ ಆಗಲಿವೆ. ಮೊದಲ ಪಟ್ಟಿ ಬಿಡುಗಡೆ ಆದಾಗ ನನ್ನ ಕ್ಷೇತ್ರವೂ ಸೇರಿರಲಿಲ್ಲ. ಇದರಲ್ಲಿ ಯಾವುದೇ ರಾಜಕೀಯ ಹಸ್ತಕ್ಷೇಪ ಅಸಾಧ್ಯ. ಈ ಎಲ್ಲ ಮಾಹಿತಿಯೂ ಎಲ್ಲ ಶಾಸಕರಿಗೂ ತಿಳಿದಿರುವ ಸಂಗತಿ ಎಂದು ಸ್ಪಷ್ಟಪಡಿಸಿದ್ದಾರೆ.

ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ಬರದ ಅಧ್ಯಯನಕ್ಕೆ ಇವರ ಕ್ಷೇತ್ರಗಳಿಗೆ ಜಿಲ್ಲಾಡಳಿತ ಅಧಿಕಾರಿಗಳ ತಂಡವನ್ನು ಕರೆದುಕೊಂಡು ಎರಡು ಬಾರಿ ಹೊರಟಾಗಲೂ, ನಾನು ದೆಹಲಿಯಲ್ಲಿದ್ದೇನೆ, ಬೆಂಗಳೂರಿನಲ್ಲಿದ್ದೇನೆ ಎಂದು ಅಲ್ಲಿಗೆ ಬಾರದೆ, ಇದೀಗ ರೈತರ ಹೆಸರಿನಲ್ಲಿ ಸರ್ಕಾರದ ವಿರುದ್ಧ ಹೇಳಿಕೆ ನೀಡಿರುವುದು ಹಾಸ್ಯಾಸ್ಪದ. ಬರ ಕಂದಾಯ ಇಲಾಖೆ ವ್ಯಾಪ್ತಿಗೆ ಸೇರಿದ್ದು, ಉಪಮುಖ್ಯಮಂತ್ರಿಗಳಿಗೆ ಕಂದಾಯ ಇಲಾಖೆ ಸೇರಿದೆ. ಅನ್ಯಾಯವಾಗಿದ್ದರೆ ಮುಖ್ಯಮಂತ್ರಿಗಳನ್ನು ಹಾಗೂ ಕಂದಾಯ ಸಚಿವರನ್ನು ಭೇಟಿ ಮಾಡಿ ಚರ್ಚಿಸಬಹುದಿತ್ತು. ಅದನ್ನು ಬಿಟ್ಟು ಕ್ಷೇತ್ರದ ಜನರನ್ನು ವಂಚಿಸಲು ನಾಟಕ ಮಾಡಿದ್ದೀರಿ. ಜನತೆ ನಿಮ್ಮ ಮಾತಿಗೆ ಮರುಳಾಗಲು ಮೂರ್ಖರಲ್ಲ. ಅವರಿಗೆ ನಿಮ್ಮ ನಿಜಬಣ್ಣ ತಿಳಿಯುತ್ತದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಶಾಸಕ ಸಿ.ಎಸ್. ನಾಡಗೌಡ ಇತ್ತೀಚಿನ ದಿನಗಳಲ್ಲಿ ಸರ್ಕಾರದ ವಿರುದ್ಧ, ಹೈಕಮಾಂಡ್?? ವಿರುದ್ಧ ಮತ್ತು ನನ್ನ ವಿರುದ್ಧ ಅತೀ ನೀಚ ಮಟ್ಟದ ಹೇಳಿಕೆಗಳನ್ನು ಸತತವಾಗಿ ನೀಡುತ್ತಿದ್ದಾರೆ. ಈ ಕುರಿತು ಹೈಕಮಾಂಡ್? ನನಗೆ ಸಹನೆಯಿಂದ ಇರಲು ಸೂಚನೆ ನೀಡಿದೆ. ಆದರೆ, ನನ್ನ ಸಹನೆ ದೌರ್ಬಲ್ಯ ಎಂದು ಕೆಲವರು ತಿಳಿದಿದ್ದಾರೆ. ಮುದ್ದೇಬಿಹಾಳ ಶಾಸಕರು ವಯೋಸಹಜವಾಗಿ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದಾರೆ. ಇವರಿಗೆ ಚಿಕಿತ್ಸೆ ಅವಶ್ಯಕತೆ ಇದ್ದು, ಇಂತಹ ನೀಚತನದ ಹೇಳಿಕೆಗಳು ಮುಂದುವರೆದರೆ, ಇವರ ಮಾನಸಿಕ ಕಾಯಿಲೆಗೆ ಚಿಕಿತ್ಸೆಯೇ ಮದ್ದು ಎಂದು ಎಂ.ಬಿ. ಪಾಟೀಲ್ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.

## ನಡವಳಿಕೆ ಮೇಲೆ ಹಿಡಿತವಿರಲಿ

ನಡವಳಿಕೆ ಮೇಲೆ ಹಿಡಿತವಿರಲಿ: ರಾಜಕೀಯವಾಗಿ ನನಗೆ ಎಷ್ಟೇ ಹಿಂಸೆ ಕೊಟ್ಟರೂದನ್ನು ತಾಳ್ಮೆಯಿಂದ ಸಹಿಸಿಕೊಂಡು ಇಲ್ಲಿಯವರೆಗೆ ಮೌನ ವಹಿಸಿದ್ದೇನೆ ಎಂದರೆ ಅದು ನನ್ನ ದೌರ್ಬಲ್ಯವೆಂದು ತಿಳಿದಿದ್ದರೆ ಅದು ನಿಮ್ಮ ತಪ್ಪು ಗ್ರಹಿಕೆ ಅಷ್ಟೇ. ಒಂದು ಜಿಲ್ಲೆಯ ಉಸ್ತುವಾರಿ ಸಚಿವರಾದವರು ಪಕ್ಷಾತೀತವಾಗಿ ಆ ಜಿಲ್ಲೆಯ ಎಲ್ಲ ಶಾಸಕರ ವಿಶ್ವಾಸ ಪಡೆದು ಕರ್ತವ್ಯ ನಿರ್ವಹಿಸಬೇಕು. ತಾವು ಜಿಲ್ಲಾ ಉಸ್ತುವಾರಿಯಾದ ಮಾತ್ರಕ್ಕೆ ಜವಾಬ್ದಾರಿಯನ್ನು ಮರೆಯಬಾರದು. ನಮ್ಮ ಕ್ಷೇತ್ರದ ಎರಡು ತಾಲೂಕುಗಳಲ್ಲಿ ಕಡಿಮೆ ಮಳೆಯಾಗಿದ್ದು ಗೊತ್ತಿದ್ದರೂ ಅದನ್ನು ಕಂಡು ಕಾಣದಂತಿರುವ ನಿಮ್ಮ ನಿರ್ಲಕ್ಷ್ಯ ಧೋರಣೆ ಸರಿಯೇ?. ಪ್ರಸ್ತುತ ಬೆಳೆಹಾನಿಯ ಕುರಿತು ನಾನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ದೂರವಾಣಿ ಮೂಲಕ ಕರೆ ಮಾಡಿ ಎಲ್ಲಾ ವಿವರಗಳನ್ನು ತಿಳಿಸಿದ್ದೇನೆ. ಈ ಕುರಿತು ಅವರು ಸದ್ಯ ಪರಸ್ಪರ ಮಾಧ್ಯಮ ಹೇಳಿಕೆಗಳನ್ನು ನಿಲ್ಲಿಸಿ, ಕೆಲವೇ ದಿನಗಳಲ್ಲಿ ಮುದ್ದೇಬಿಹಾಳ ಹಾಗೂ ತಾಳಿಕೋಟಿ ತಾಲೂಕುಗಳನ್ನು ಬರಗಾಲ ಪಟ್ಟಿಗೆ ಸೇರಿಸುವ ಮೂಲಕ ರೈತರ ಹಿತ ಕಾಪಾಡಲಾಗುವುದು, ತಾಳ್ಮೆಯಿಂದ ಸಹನೆಯಿಂದಿರಲು ಹೇಳಿದ್ದಾರೆ. ಅವರ ಆದೇಶವನ್ನು ಗೌರವಿಸುತ್ತೇನೆ. ಆದರೆ ತಾವೊಬ್ಬ ಜಿಲ್ಲಾ ಉಸ್ತುವಾರಿಗಳಾಗಿ ತಮ್ಮ ನಡವಳಿಕೆ ಮೇಲೆ ಹಿಡಿತವಿರಲಿ. ಇದು ನನ್ನ ಸಲಹೆ. ಇಲ್ಲದಿದ್ದರೆ ತಮ್ಮ ಹುದ್ದೆಯ ಗೌರವಕ್ಕೆ ಚ್ಯುತಿ ತಂದಂತಾಗುತ್ತದೆ ಎಂಬುದು ನನ್ನ ವೈಯಕ್ತಿಕ ಸಲಹೆಯಾಗಿದೆ ಎಂದು ಸಿ.ಎಸ್.ನಾಡಗೌಡ ಹೇಳಿದ್ದಾರೆ.

# ಹಳೇ ದ್ವೇಷ, ನಡು ರಸ್ತೆಯಲ್ಲಿ ಎರಡು ಗುಂಪುಗಳ ನಡುವೆ ಗಲಾಟೆ




ದಾವಣಗೆರೆ: ಹಳೇ ದ್ವೇಷ ಹಾಗೂ ಕ್ಷುಲ್ಲಕ ಕಾರಣಕ್ಕೆ ನಡುರಸ್ತೆಯಲ್ಲೇ ಎರಡು ಗುಂಪುಗಳು ಆಯುಧಗಳನ್ನು ಹಿಡಿದು ಗಲಾಟೆ ಮಾಡಿರುವ ಘಟನೆ ದಾವಣಗೆರೆಯ ಬಿ.ಡಿ. ಲೇಔಟ್?ನಲ್ಲಿ ಭಾನುವಾರ ರಾತ್ರಿ ನಡೆದಿದೆ.

ತಲ್ವಾರ್, ದೊಣ್ಣೆ ಹಿಡಿದು ಪರಸ್ಪರ ಯುವಕರು ಹಲ್ಲೆ ಮಾಡಿಕೊಂಡಿದ್ದಾರೆ. ಪರಿಣಾಮ ಯುವಕರಿಗೆ ತೀವ್ರ ಗಾಯಳಾಗಿವೆ. ಮೊಯ್ದೀನ್, ಜುನೇದ್ ಇಬ್ಬರು ಸಹೋದರರಾಗಿದ್ದು, ಇರ್ಫಾನ್, ನವಾಜ್, ತೌಸೀಫ್ ಒಟ್ಟು ಐದು ಜನರಿಗೆ ಗಲಾಟೆಯಲ್ಲಿ ಗಾಯಗಳಾಗಿವೆ. 20ಕ್ಕೂ ಹೆಚ್ಚು ಯುವಕರಿದ್ದ ಗುಂಪಿನಿಂದ ಮತ್ತೊಂದು ಗುಂಪಿನ ಮೇಲೆ ಹಲ್ಲೆ ನಡೆದಿದೆ. ಹಲ್ಲೆಗೊಳಗಾದವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಜಾದ್ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದ್ದು, ದಾವಣಗೆರೆಯಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗುತ್ತಿದೆಯಾ ಎಂಬ ಅನುಮಾನ ಕಾಡುತ್ತಿದೆ. ನಡುರಸ್ತೆಯಲ್ಲಿ ಮಾರಣಾಂತಿಕ ಹಲ್ಲೆ ನಡೆದಿರುವುದು ಇಡೀ ಹಳೇ ದಾವಣಗೆರೆ ಭಾಗದ ಜನರನ್ನು ಬೆಚ್ಚಿಬೀಳಿಸಿದೆ. ಐದು ಜನರ ತಲೆಭಾಗಕ್ಕೆ ಗಂಭೀರವಾಗಿ ಗಾಯಗಳಾಗಿದ್ದು, ಚಿಕಿತ್ಸೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಈ ಕುರಿತು ಮಾಧ್ಯಮದವರೊಂದಿಗೆ ಮಾತನಾಡಿದ ಆಜಾದ್ ನಗರ ಠಾಣೆಯ ಪಿಐ ವಸಂತ ಕುಮಾರ್, "ಎರಡು ಪ್ರತಿಷ್ಠಿತ ಕುಟುಂಬಗಳ ನಡುವೆ ಈ ಗಲಾಟೆ ಆಗಿದೆ. ಹಳೇ ದ್ವೇಷದ ಹಿನ್ನೆಲೆ ಎರಡು ಗುಂಪುಗಳು ಹೊಡೆದಾಡಿಕೊಂಡಿವೆ. ಈ ಹಿಂದೆ ಹೀಗೆ ಹೊಡೆದಾಡಿಕೊಂಡ ಬೆನ್ನಲ್ಲೇ ಇವರ ಮೇಲೆ ಪ್ರಕರಣ ದಾಖಲಾಗಿದ್ದವು. ರಾಜಿ ಮಾಡಿಕೊಳ್ಳೋಣ ಎಂದು ಒಂದು ಕುಟುಂಬ ಮುಂದೆ ಬಂದಿತ್ತು. ಮತ್ತೊಂದು ಕುಟುಂಬ ರಾಜಿಯಾಗಿಲ್ಲ. ಆದರೂ ಅವರ ನಡುವೆ ವೈಮನಸ್ಸು ಇತ್ತು. ನಿನ್ನೆ ರಾತ್ರಿ ಯಾವುದೋ ಒಂದು ವಿಚಾರ ನೆಪ ಮಾಡಿಕೊಂಡು ಪರಸ್ಪರ ಹಲ್ಲೆ ಮಾಡಿಕೊಂಡಿದ್ದಾರೆ.

ಈಗಾಗಲೇ ಆಜಾದ್ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಗಲಾಟೆಯಲ್ಲಿ ನಾಲ್ಕೈದು ಜನರಿಗೆ ಗಾಯಳಾಗಿವೆ. ಪ್ರಕರಣ ದಾಖಲಾಗುತ್ತಿದ್ದಂತೆ ಆರು ಜನರನ್ನು ಬಂಧಿಸಿದ್ದೇವೆ. ಈ ಘಟನೆ ಸಂಬಂಧ ಕೌಂಟರ್ ಕೇಸ್ ಆಗುವ ಸಂಭವ ಇದೆ.

ಮಾರಕಾಸ್ತ್ರಗಳಿಂದ ಪರಸ್ಪರ ಹಲ್ಲೆ ಮಾಡಿಕೊಂಡಿದ್ದಾರೆ. ತಲೆಯ ಭಾಗಕ್ಕೆ ಗಂಭೀರವಾಗಿ ಗಾಯಳಾಗಿವೆ. ಖಾಸಗಿ ಆಸ್ಪತ್ರೆಯಲ್ಲಿ ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿದ್ದಾರೆ" ಎಂದು ಮಾಹಿತಿ ನೀಡಿದರು.

# ಶ್ರಮಿಕರಿಗೆ ನಿರಂತರ ಕೆಲಸ: ಪಿಡಿಒ



ಚಿಕ್ಕನಾಯಕನಹಳ್ಳಿ: "ಗ್ರಾಮೀಣ ಪ್ರದೇಶದ ಕೂಲಿಕಾರರ ಗುಳೆ ತಪ್ಪಿಸಿ ಸ್ಥಳೀಯವಾಗಿ ಉದ್ಯೋಗ ಕಲ್ಪಿಸಲು ವಿಬಿ ಜಿ ರಾಮ್ ಜಿ ಯೋಜನೆಯಡಿ 125 ದಿನಗಳ ಕೆಲಸ ದೊರೆಯಲಿದೆ"ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಕೋಕಿಲ ರಾಜು ಕರೆ ನೀಡಿದರು.

ತಾಲ್ಲೂಕಿನ ಗಾಣಧಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೋಮನಹಳ್ಳಿ ಮತ್ತು ಮಜರೇ ಗ್ರಾಮಗಳನ್ನೊಳಗೊಂಡಂತೆ ಶುಕ್ರವಾರದಂದು ವಿಬಿ ಜಿ ರಾಮ್ ಜಿ ಯೋಜನೆಯಡಿ ಬೀದಿನಾಟಕ ಹಾಗೂ ಐಇಸಿ ಚಟುವಟಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಯಾರು ಗುಳೆ ಹೋಗದೆ ತಮ್ಮ ಊರಿನಲ್ಲಿ ಸರ್ಕಾರ ನಿಗದಿ ಪಡಿಸಿದ ದಿನಗಳ ವರೆಗೆ ಕೆಲಸ ಮಾಡಬಹುದು. ವೈಯಕ್ತಿಕ ಕಾಮಗಾರಿಗಳ ಲಾಭ ಪಡೆದುಕೊಳ್ಳಬೇಕು ಎಂದರು.

ವಿಬಿ ಜಿ ರಾಮ್ ಜಿ ಯೋಜನೆಯಡಿ 125 ದಿನಗಳ ಕೆಲಸ ಪಡೆಯಬೇಕಾದರೆ ಕೂಲಿಕಾರರು ಸರಿಯಾಗಿ ಕೆಲಸ ಮಾಡಿದಾಗ ಮಾತ್ರ ನಿಮಗೆ ನಿರಂತರ ಕೆಲಸ ನೀಡುತ್ತೇವೆ. ಅಂದಾಗ 125 ದಿನಗಳ ಕಾಲ ಕೆಲಸ ಪಡೆದುಕೊಳ್ಳಬಹುದು. ಆ ನಿಟ್ಟಿನಲ್ಲಿ ಅರ್ಹ ಎಲ್ಲಾ ಕೂಲಿಕಾರರು ಕೆಲಸ ಮಾಡಬಹುದು ಎಂದರು.

ಬೀದಿನಾಟಕ ಐಇಸಿ ಚಟುವಟಿಕೆ: ಯೋಜನೆಯ ಸಂಪೂರ್ಣ ಮಾಹಿತಿಯುಳ್ಳ ನೈಜವಾಗಿ ಹಳ್ಳಿಯ ಸೊಗಡನ್ನು ಆಕರ್ಷಕವಾಗಿ ಸಾರ್ವಜನಿಕರ ಗಮನ ಸೆಳೆಯುವಂತೆ ನಾಟಕ ಮಾಡಲಾಯಿತು.

ಈ ವೇಳೆ ಪಂಚಾಯಿತಿ ಕೋಕಿಲ ರಾಜು ರವರು, ತಾಂತ್ರಿಕ ಸಹಾಯಕರಾದ ಹೊನ್ನೇಶ್ ಬಿ. ಎಸ್ , ಕರಾವಸೂಲಿಕಾರರು ಪುಟ್ಟರಾಜು , ಡಿಇಒ ಅಮೃತ , ಬಿಎಫ್ ಟಿ ಓಂಕಾರ್ ಮೂರ್ತಿ , ಟಿಆರ್ ಎಂ ಪ್ರೇಮ , ಪಂಚಾಯಿತಿ ಸಿಬ್ಬಂದಿಗಳು,ಎಂಬಿಕೆ, ಸಂಜೀವಿನಿ ಸಂಘದ ಸದಸ್ಯರು, ದವನ ಭೂಮಿಕೆ ಸಾಂಸ್ಕೃತಿಕ ಟ್ರಸ್ಟ್ ಕಲಾವಿದರು, ಸಾರ್ವಜನಿಕರು ಉಪಸ್ಥಿತರಿದ್ದರು.

# ಗೌರಿ ದಿನ ಜೆನ್ ಝೀ ದಿನವಾಗಿ ಆಚರಣೆ



ಬೆಂಗಳೂರು: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆಯಾಗಿ ಒಂಬತ್ತು ವರ್ಷಗಳು ಕಳೆದಿವೆ. ಆದರೆ ಸಾವಿಗೆ ನ್ಯಾಯ ಸಿಕ್ಕಿಲ್ಲ ಎಂದು ಅವರ ಸಹೋದರಿ ಮತ್ತು ಚಲನಚಿತ್ರ ನಿರ್ಮಾಪಕಿ ಕವಿತಾ ಲಂಕೇಶ್ ಅವರು ತನಿಖೆಯ ವಿಳಂಬದ ಬಗ್ಗೆ ಬೇಸರ ವ್ಯಕ್ತಪಡಿಸಿದ್ದು, ತ್ವರಿತವಾಗಿ ಕಾನೂನು ಪ್ರಕ್ರಿಯೆ ನಡೆಸುವಂತೆ ಮನವಿ ಮಾಡಿದರು.

ನಗರದ ಲ್ಯಾಂಗ್‌ಫೋರ್ಡ್ ರಸ್ತೆಯ ಸೇಂಟ್ ಜೋಸೆಫ್ ಸಭಾಂಗಣದಲ್ಲಿ ಗೌರಿ ಸ್ಮಾರಕ ಟ್ರಸ್ಟ್ ವತಿಯಿಂದ ಭಾನುವಾರ ಆಯೋಜಿಸಲಾಗಿದ್ದ 'ಗೌರಿ ದಿನ'ವನ್ನು ಈ ವರ್ಷ 'ಜೆನ್? ಝೀ ದಿನ' ಎಂದು ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಕವಿತಾ ಅವರು, ಒಂಬತ್ತು ವರ್ಷಗಳು ಕಳೆದಿದ್ದರೂ ಸಹ ಕೊಲೆ ಪ್ರಕರಣವು ಇನ್ನೂ ವಿಚಾರಣೆ ಮತ್ತು ಸಾಕ್ಷಿಗಳ ವಿಚಾರಣೆ ಹಂತದಲ್ಲಿದೆ ಎಂದು ಬೇಸರಿಸಿದರು.

ವಿಚಾರಣೆಗಳು ಪ್ರಾರಂಭವಾದಾಗಿನಿಂದ ಏಳು ನ್ಯಾಯಾಧೀಶರು ಬದಲಾಗಿದ್ದಾರೆ. ಇನ್ನೂ ಅನೇಕ ಸಾಕ್ಷಿಗಳನ್ನು ವಿಚಾರಣೆ ಮಾಡಬೇಕಾಗಿದೆ. ಈ ಎಲ್ಲಾ ಪ್ರಕ್ರಿಯೆಗಳು ಇನ್ನೂ ಒಂದು ವರ್ಷ ತೆಗೆದುಕೊಳ್ಳಬಹುದು. ನಾವು ತ್ವರಿತ ಪ್ರಕ್ರಿಯೆಗಾಗಿ ಮನವಿ ಮಾಡುತ್ತಿದ್ದೇವೆ. ನ್ಯಾಯಾಧೀಶರು ಪ್ರಕರಣದಲ್ಲಿ ಮುಂದುವರೆಯಲು ಮತ್ತು ಪ್ರತಿ ತಿಂಗಳು ಸಾಕಷ್ಟು ದಿನಗಳನ್ನು ಮೀಸಲಿಡಲು ಸಾಧ್ಯವಾದರೆ, ವಿಚಾರಣೆ ಹೆಚ್ಚು ವೇಗವಾಗಿ ಸಾಗಬಹುದು ಎಂದರು.

ಜಾಮೀನು ನೀಡುವುದು ಕಾನೂನು ಪ್ರಕ್ರಿಯೆಯ ಭಾಗವಾಗಿದೆ ಎನ್ನವುದನ್ನು ಒಪ್ಪುತ್ತೇವೆ. ಆದರೆ ಜಾಮೀನು ಪಡೆದ ನಂತರ ಆರೋಪಿಗೆ ಸಾರ್ವಜನಿಕವಾಗಿ ಸನ್ಮಾನಿಸಿರುವುದು ಕುಟುಂಬಕ್ಕೆ ತೀವ್ರ ನೋವುಂಟು ಮಾಡಿದೆ. ಜಾಮೀನು ನೀಡಲಾಗಿದೆ ಎಂದರೆ ಯಾರಾದರೂ ನಿರಪರಾಧಿ ಎಂದು ಸಾಬೀತಾಗಿದೆ ಎಂದರ್ಥವಲ್ಲ. ಆರೋಪಿಯನ್ನು ನಾಯಕ ಅಥವಾ ಸ್ವಾತಂತ್ರ್ಯ ಹೋರಾಟಗಾರನಂತೆ ಸಂಭ್ರಮಿಸುವುದು ನಮ್ಮಂತಹ ಕುಟುಂಬಗಳಿಗೆ ನೋವಿನ ಸಂಗತಿ. ಮೂರು ತಿಂಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿ ಈ ವಿಷಯವನ್ನು ಪ್ರಸ್ತಾಪಿಸಿದ್ದೆ ಎಂದು ತಿಳಿಸಿದರು.

ನಾವು ಕಾನೂನು ವ್ಯವಸ್ಥೆಯನ್ನು ನಂಬಬೇಕು ಮತ್ತು ಅನುಸರಿಸಬೇಕು. ನಾವು ಕಾನೂನುಬಾಹಿರ ಮಾರ್ಗವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಆದರೆ ವರ್ಷದಿಂದ ವರ್ಷಕ್ಕೆ ಈ ಹೋರಾಟವನ್ನು ಉಳಿಸಿಕೊಳ್ಳುವುದು ಕಷ್ಟ. ಪ್ರಕರಣದ ತ್ವರಿತ ಮುಕ್ತಾಯ ಮತ್ತು ಗೌರಿ ಹತ್ಯೆಗೆ ನ್ಯಾಯ ಮಾತ್ರ ನಾವು ಕೇಳುತ್ತಿದ್ದೇವೆ ಎಂದು ಕವಿತಾ ಹೇಳಿದರು.

ಗೌರಿ ದಿನವು ಹೊಸ ಪೀಳಿಗೆಗೆ ವೇದಿಕೆಯಾಗಿ ವಿಕಸನಗೊಂಡಿದೆ. ಗೌರಿಯೊಂದಿಗೆ ನಿಕಟ ಸೈದ್ಧಾಂತಿಕ ಬಾಂಧವ್ಯವನ್ನು ಹಂಚಿಕೊಂಡವರು ಕನ್ಹಯ್ಯ ಕುಮಾರ್, ಶೆಹ್ಲಾ ರಶೀದ್, ಉಮರ್ ಖಾಲಿದ್ ಮತ್ತು ಜಿಗ್ನೇಶ್ ಮೇವಾನಿ. ಇತ್ತೀಚಿನ ಯುವ ಚಳವಳಿಗಳು ಯುವ ಪೀಳಿಗೆಯು ರಾಜಕೀಯದ ಬಗ್ಗೆ ಅಸಡ್ಡೆ ಹೊಂದಿದೆ ಎಂಬ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಅಧಿಕಾರದಲ್ಲಿರುವವರನ್ನು ಪ್ರಶ್ನಿಸಲು ಅವರು ಹಾಸ್ಯ ಮತ್ತು ವಿಡಂಬನೆಯನ್ನು ಬಳಸುತ್ತಿರುವುದು 'ಹೊಸ ರಕ್ತ, ಹೊಸ ಹೋರಾಟ ಮತ್ತು ಹೊಸ ಭರವಸೆ' ಮೂಡಿಸಿದೆ ಎಂದರು.

ಕಾರ್ಯಕರ್ತೆ ಮಲ್ಲಿಗೆ ಅವರು ಮಾತನಾಡಿ, ರೋಹಿತ್ ವೇಮುಲಾ ಅವರ ಮರಣದ ನಂತರದ ಪ್ರತಿಭಟನೆಗಳಿಂದ ಹಿಡಿದು ಜೆಎನ್‌ಯು ಚಳವಳಿಯವರೆಗೆ ಗೌರಿ ಅವರು ನಿರಂತರವಾಗಿ ಯುವ ಚಳವಳಿಗಳೊಂದಿಗೆ ನಿಂತರು. ಮತ್ತು ಜಿಗ್ನೇಶ್ ಮೇವಾನಿ ಮತ್ತು ಉಮರ್ ಖಾಲಿದ್ ಅವರಂತಹ ಧ್ವನಿಗಳನ್ನು ಬೆಂಬಲಿಸಿದರು ಎಂದು ಹೇಳಿದರು.

ಯುವಜನರಲ್ಲಿ ರಾಜಕೀಯ ಮತ್ತು ಸಾಮಾಜಿಕ ಪರಿವರ್ತನೆಯ ಭರವಸೆಯನ್ನು ಗೌರಿ ಕಂಡರು. ಅವರು ಜೀವಂತವಾಗಿದ್ದರೆ, ಇಂದಿನ ಯುವ ಚಳವಳಿಗಳನ್ನು ಆಚರಿಸುತ್ತಿದ್ದರು. ಅರ್ಥಪೂರ್ಣ ಸಾಮಾಜಿಕ ಬದಲಾವಣೆಯು ಮಹಿಳೆಯರು, ಆದಿವಾಸಿಗಳು ಮತ್ತು ಅಲ್ಪಸಂಖ್ಯಾತರನ್ನು ದಬ್ಬಾಳಿಕೆಯಿಂದ ಮುಕ್ತಗೊಳಿಸಬೇಕು ಎಂದು ತಿಳಿಸಿದರು.

ವಿದ್ಯಾರ್ಥಿ ಕಾರ್ಯಕರ್ತೆ ಅಮೂಲ್ಯ ಮಾತನಾಡಿ, ವಿವಿಧ ವಿದ್ಯಾರ್ಥಿ ಸಂಘಟನೆಗಳನ್ನು ಒಂದೇ ವೇದಿಕೆಗೆ ತರುವುದು ಒಂದು ಪ್ರಮುಖ ಸಂದೇಶವನ್ನು ರವಾನಿಸಿದೆ. ಸಾಂಸ್ಥಿಕ ಮತ್ತು ಗುರುತಿನ ವ್ಯತ್ಯಾಸಗಳನ್ನು ಬದಿಗಿಟ್ಟು, ಶಿಕ್ಷಣದ ಖಾಸಗೀಕರಣ, ವಾಣಿಜ್ಯ ನಿರ್ವಹಣಾ ಸೀಟುಗಳು ಮತ್ತು ಸರ್ಕಾರಿ ಶಾಲೆಗಳ ಮುಚ್ಚುವಿಕೆಯನ್ನು ಎದುರಿಸಲು ವಿದ್ಯಾರ್ಥಿ ಚಳವಳಿಗಳು ಕ್ಯಾಂಪಸ್‌ಗಳು ಮತ್ತು ನಗರಗಳನ್ನು ಮೀರಿ ಚಲಿಸಬೇಕೆಂದು ಕರೆ ನೀಡಿದರು.

# ಬಿಗಿ ಭದ್ರತೆಯಲ್ಲಿ ನಡೆದ ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆ



ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಒಟ್ಟು 3,991 ಸಿಎಆರ್ ಮತ್ತು ಡಿಎಆರ್ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳ ಭರ್ತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸಿದ ಲಿಖಿತ ಪರೀಕ್ಷೆಯು ಭಾನುವಾರ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಅತ್ಯಂತ ಬಿಗಿ ಭದ್ರತೆ ಹಾಗೂ ಶಾಂತಿಯುತ ವಾತಾವರಣದಲ್ಲಿ ಸುಸೂತ್ರವಾಗಿ ಮುಕ್ತಾಯಗೊಂಡಿದೆ.

ಯಾವುದೇ ರೀತಿಯ ಅಕ್ರಮಗಳಿಗೆ ಆಸ್ಪದ ನೀಡದಂತೆ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರಲಾಗಿದ್ದು, ಪರೀಕ್ಷಾರ್ಥಿಗಳು ಸಮಯಕ್ಕೆ ಸರಿಯಾಗಿ ಕೇಂದ್ರಗಳನ್ನು ತಲುಪಲು ಬೆಂಗಳೂರು ಸಂಚಾರ ಪೊಲೀಸರು ಸೂಕ್ತ ಸಂಚಾರ ದಟ್ಟಣೆ ನಿರ್ವಹಣೆ ಮತ್ತು ಮಾರ್ಗದರ್ಶನ ವ್ಯವಸ್ಥೆ ಮಾಡಿದ್ದರು.

ಈ ಬಾರಿ ಮಿಕ್ಕುಳಿದ ವೃಂದದ ಪರೀಕ್ಷೆಗಾಗಿ 16 ಜಿಲ್ಲೆಗಳ 309 ಕೇಂದ್ರಗಳಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಅರ್ಜಿ ಸಲ್ಲಿಸಿದ್ದ 1,42,220 ಅಭ್ಯರ್ಥಿಗಳ ಪೈಕಿ 1,14,079 (ಶೇ. 80) ಮಂದಿ ಹಾಜರಾಗಿದ್ದರು. ಅದೇ ರೀತಿ ಕಲ್ಯಾಣ ಕರ್ನಾಟಕ ವೃಂದದ ನಾಲ್ಕು ಜಿಲ್ಲೆಗಳ 60 ಕೇಂದ್ರಗಳಲ್ಲಿ ನಡೆದ ಪರೀಕ್ಷೆಗೆ ಒಟ್ಟು 32,191 ಅಭ್ಯರ್ಥಿಗಳ ಪೈಕಿ 28,849 (ಶೇ. 90) ಮಂದಿ ಹಾಜರಾಗಿದ್ದರು ಎಂದು ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್. ಪ್ರಸನ್ನ ಮಾಹಿತಿ ನೀಡಿದ್ದಾರೆ.

?ಪರೀಕ್ಷಾ ಪ್ರಕ್ರಿಯೆಯಲ್ಲಿ ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಲು ಬೆಂಗಳೂರಿನ ಕೆಇಎ ಕಚೇರಿಯ ಕಮಾಂಡ್ ಸೆಂಟರ್‌ನಿಂದಲೇ ಎಲ್ಲಾ ಕೇಂದ್ರಗಳ ಮೇಲೆ ವೆಬ್‌ಕಾಸ್ಟಿಂಗ್ ಮೂಲಕ ತೀವ್ರ ನಿಗಾ ವಹಿಸಲಾಗಿತ್ತು. ಪರೀಕ್ಷೆ ಮುಗಿದ ತಕ್ಷಣ ಕೆಇಎ ತಲುಪಿದ ಒಎಂಆರ್ ಉತ್ತರ ಪತ್ರಿಕೆಗಳನ್ನು ತಕ್ಷಣವೇ ಸ್ಕ್ಯಾನ್ ಮಾಡಿ ಅಧಿಕೃತ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡುವ ಪ್ರಕ್ರಿಯೆ ಆರಂಭಿಸಲಾಗಿದೆ. ಅಭ್ಯರ್ಥಿಗಳು ಸೇರಿದಂತೆ ಸಾರ್ವಜನಿಕರು ಯಾರು ಬೇಕಾದರೂ ಈ ಒಎಂಆರ್ ಪ್ರತಿಗಳನ್ನು ವೀಕ್ಷಿಸಲು ಮುಕ್ತ ಅವಕಾಶ ಕಲ್ಪಿಸಲಾಗಿದೆ. ಯಾವುದೇ ಅಹಿತಕರ ಘಟನೆಗಳಿಲ್ಲದೆ ಪರೀಕ್ಷೆ ಯಶಸ್ವಿಯಾಗಿ ನಡೆದಿದೆ ಎಂದು ಅವರು ತಿಳಿಸಿದ್ದಾರೆ.

ಸಿಎಆರ್ ಮತ್ತು ಡಿಎಆರ್ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳ ನೇಮಕಾತಿಗಾಗಿ ಬಳ್ಳಾರಿ ಜಿಲ್ಲೆಯಲ್ಲೂ ಪರೀಕ್ಷೆ ಸುಗಮವಾಗಿ ನಡೆಯುವಂತೆ ಪರೀಕ್ಷಾ ಕೇಂದ್ರಗಳ ಸುತ್ತ ಬಿಗಿ ಭದ್ರತೆ ಕಲ್ಪಿಸಲಾಗಿತ್ತು. ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯಲ್ಲಿ ಪರೀಕ್ಷೆ ನಡೆಯುವ ಅವಧಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳನ್ನು ತೀವ್ರ ತಪಾಸಣೆಗೆ ಒಳಪಡಿಸಿದ ಬಳಿಕವೇ ಪರೀಕ್ಷಾ ಕೇಂದ್ರದೊಳಗೆ ಪ್ರವೇಶಿಸಲು ಅವಕಾಶ ನೀಡಲಾಯಿತು.

# ಮೆಜೆಸ್ಟಿಕ್ ರೈಲ್ವೆ ನಿಲ್ದಾಣದ ಬಳಿ ಬೆಂಕಿ ಅವಘಡ: ಬೋಗಿ ಸುಟ್ಟು ಕರಕಲು



ಬೆಂಗಳೂರು: ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್, ಮೆಜೆಸ್ಟಿಕ್) ರೈಲು ನಿಲ್ದಾಣದ ಯಾರ್ಡ್‌ನಲ್ಲಿ ನಿಲ್ಲಿಸಲಾಗಿದ್ದ ರೈಲಿನ ಬೋಗಿಯೊಂದರಲ್ಲಿ ಭಾನುವಾರ ತಡರಾತ್ರಿ ಆಕಸ್ಮಿಕ ಅಗ್ನಿ ಅವಘಡ ಸಂಭವಿಸಿದೆ. ಅದೃಷ್ಟವಶಾತ್ ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಅಥವಾ ಗಾಯಗಳು ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾತ್ರಿ ಸುಮಾರು 11 ಗಂಟೆಯ ಸುಮಾರಿಗೆ ರೈಲ್ವೆ ಯಾರ್ಡ್‌ನಲ್ಲಿ ನಿಲ್ಲಿಸಿದ್ದ ಬೋಗಿಯಿಂದ ದಟ್ಟವಾದ ಹೊಗೆ ಬರುತ್ತಿರುವುದನ್ನು ಕರ್ತವ್ಯದಲ್ಲಿದ್ದ ಸಿಬ್ಬಂದಿ ಗಮನಿಸಿದ್ದಾರೆ. ತಕ್ಷಣವೇ ಎಚ್ಚೆತ್ತ ಅವರು ಅಗ್ನಿಶಾಮಕ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಬೆಂಕಿ ಪಕ್ಕದ ಹಳಿಗಳು ಹಾಗೂ ಇತರೆ ಬೋಗಿಗಳಿಗೆ ಹರಡದಂತೆ ಸಂಪೂರ್ಣವಾಗಿ ನಿಯಂತ್ರಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಕಿ ಕಾಣಿಸಿಕೊಂಡ ಸಮಯದಲ್ಲಿ ಬೋಗಿಯಲ್ಲಿ ಯಾರೂ ಇರದ ಕಾರಣ ಅನಾಹುತ ತಪ್ಪಿದೆ. ಘಟನೆಗೆ ನಿಖರ ಕಾರಣವೇನು ಎಂಬ ಬಗ್ಗೆ ರೈಲ್ವೆ ಅಧಿಕಾರಿಗಳು ಹಾಗೂ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡಿದೆಯೇ ಎಂಬ ಆಯಾಮದಲ್ಲಿ ಪರಿಶೀಲನೆ ನಡೆಸುತ್ತಿರುವುದಾಗಿ ಪೊಲೀಸರು ಮಾಹಿತಿ ನೀಡಿದ್ದಾರೆ.

# ಹಾವೇರಿ ಕಲಾವಿದನ ಕೈಚಳಕ: 'ಪಂಚಗವ್ಯ'ದಲ್ಲಿ ಅರಳಿದ ಪರಿಸರಸ್ನೇಹಿ ಗಣಪ



ಹಾವೇರಿ: ಗಣೇಶ ಚತುರ್ಥಿಗೆ ದಿನಗಣನೆ ಆರಂಭವಾಗಿದ್ದು, ಸಾರ್ವಜನಿಕ ಸ್ಥಳಗಳಲ್ಲಿ, ಮನೆ ಮನೆಗಳಲ್ಲಿ ಸ್ಥಾಪಿಸುವ ಗಣೇಶ ಮೂರ್ತಿಗಳಿಗೆ ಕಲಾವಿದರು ಅಂತಿಮ ಹಂತದ ಸ್ಪರ್ಶ ನೀಡುತ್ತಿದ್ದಾರೆ. ಗಣೇಶನ ಹಬ್ಬ ಬರುತ್ತಿದ್ದಂತೆ, ಎಲ್ಲೆಡೆ ಪರಿಸರಸ್ನೇಹಿ ಮೂರ್ತಿಗಳ ಮಾತು ಕೇಳಿಬರುತ್ತೆ. ಆದರೆ ಹಾವೇರಿಯ ಕಲಾವಿದರೊಬ್ಬರು ಹಸುವಿನ ಸೆಗಣಿಯಿಂದ ಗಣೇಶ ಮೂರ್ತಿಗಳನ್ನು ತಯಾರಿಸುತ್ತ ಗಮನ ಸೆಳೆಯುತ್ತಿದ್ದಾರೆ.

ಸವಣೂರು ತಾಲೂಕಿನ ಕುರುಬರ ಮಲ್ಲೂರು ಗ್ರಾಮದಲ್ಲಿರುವ ಯುವ ಕಲಾವಿದ ಯಲ್ಲಪ್ಪ ಶಿವಪ್ಪ ದೊಡ್ಡಮನಿ ಈ ರೀತಿಯ ವಿಶಿಷ್ಟ ಗಣೇಶ ಮೂರ್ತಿಗಳನ್ನು ಕಳೆದ ನಾಲ್ಕು ವರ್ಷಗಳಿಂದ ತಯಾರಿಸಿಕೊಂಡು ಬರುತ್ತಿದ್ದಾರೆ. ವರ್ಷದಿಂದ ವರ್ಷಕ್ಕೆ ಯಲ್ಲಪ್ಪ ತಯಾರಿಸುವ ಗಣೇಶ ಮೂರ್ತಿಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ.

ಪಂಚಗವ್ಯ ಗಣಪ ತಯಾರಿಕೆ: ಐದು ವರ್ಷಗಳ ಹಿಂದೆ ಕನ್ನೇರಿ ಕಾಡಸಿದ್ದೇಶ್ವರ ಮಠಕ್ಕೆ ಭೇಟಿ ನೀಡಿದಾಗ ಅಲ್ಲಿಯ ವಟುಗಳು ಮಾಡುತ್ತಿದ್ದ ಗಣೇಶ ಮೂರ್ತಿಗಳನ್ನು ನೋಡಿ ಯಲ್ಲಪ್ಪ ಸಹ ತಾನು ಈ ರೀತಿಯ ಗಣೇಶ ಮೂರ್ತಿಗಳನ್ನು ಮಾಡುವ ಆಸೆ ವ್ಯಕ್ತಪಡಿಸಿದರು. ಇದನ್ನರಿತ ಮಠದವರು ಯಲ್ಲಪ್ಪಗೆ ಗೋಕಾಕ್? ತಾಲೂಕಿನ ಕೌಜಲಗಿಯಲ್ಲಿ ಈ ಕುರಿತ ಕಾರ್ಯಾಗಾರವಿದೆ ಅಲ್ಲಿ ಸೇರಿಕೊಳ್ಳುವಂತೆ ಸಲಹೆ ನೀಡಿದರು.

ಕಾರ್ಯಾಗಾರಕ್ಕೆ ಸೇರಿದ ಯಲ್ಲಪ್ಪ ಗಣೇಶ ಮೂರ್ತಿಗಳನ್ನು ಸೆಗಣಿಯಿಂದ ಮಾಡುವ ಕುರಿತಂತೆ ತರಬೇತಿ ಪಡೆದರು. ಕಳೆದ ನಾಲ್ಕು ವರ್ಷಗಳಿಂದ ಹಸುವಿನ ಸೆಗಣಿಯಲ್ಲಿ ಗಣೇಶ ಮೂರ್ತಿ ತಯಾರಿಸುತ್ತಿದ್ದ ಯಲ್ಲಪ್ಪ ಅವರು ಈ ವರ್ಷ ಪಂಚಗವ್ಯಗಳಿಂದ ಗಣೇಶ ಮೂರ್ತಿಗಳನ್ನು ತಯಾರಿಸುತ್ತಿದ್ದಾರೆ. ಹಸುವಿನ ಸೆಗಣಿ, ಹಸುವಿನ ಹಾಲು, ಹಸುವಿನ ತುಪ್ಪ, ಹಸುವಿನ ಮೂತ್ರ ಮತ್ತು ಮೊಸರಿನಿಂದ ಯಲ್ಲಪ್ಪ ಗಣೇಶ ಮೂರ್ತಿಗಳನ್ನು ಮಾಡುತ್ತಿದ್ದಾರೆ.

ಸೆಗಣಿ ಗಣೇಶನಿಗಿದೆ ಪೌರಾಣಿಕ ಹಿನ್ನೆಲೆ: ಸೆಗಣಿಯಿಂದ ತಯಾರಿಸುವ ಗಣೇಶ ಮೂರ್ತಿಗೆ ಪೌರಾಣಿಕ ಹಿನ್ನೆಲೆ ಇದೆ. ಎಲ್ಲರನ್ನೂ ಕಾಡುವ ಶನಿಮಹಾದೇವ ಗಣೇಶನನ್ನೂ ಕಾಡಲು ಬರುತ್ತಾನೆ. ಇದನ್ನರಿತ ಗಣೇಶ ಶನಿಯಿಂದ ತಪ್ಪಿಸಿಕೊಳ್ಳಲು ಗರಿಕೆಯಾಗುತ್ತಾನೆ. ಆ ಮೂಲಕ ಶನಿಯಿಂದ ಗಣೇಶ ತಪ್ಪಿಸಿಕೊಳ್ಳುತ್ತಾನೆ. ಆದರೆ ಅಲ್ಲಿಯೇ ಮೇಯುತ್ತಿದ್ದ ಹಸು ಗರಿಕೆಯ ರೂಪದಲ್ಲಿರುವ ಗಣೇಶನನ್ನು ಸೇವಿಸುತ್ತದೆ. ಹಸುವಿನ ಹೊಟ್ಟೆ ಸೇರುವ ಗಣೇಶ ಹಸುವಿನ ಸೆಗಣಿಯಲ್ಲಿ ಹೊರಗೆ ಬರುತ್ತಾನೆ. ಈ ಹಿನ್ನೆಲೆಯಲ್ಲಿ ಸೆಗಣಿಯಲ್ಲಿ ಮಾಡಿದ ಗಣೇಶ ಮೂರ್ತಿ ಶ್ರೇಷ್ಠ ಎನ್ನುವ ಮಾತಿದೆ. ಅಲ್ಲದೆ ಗಣೇಶನಿಗೆ ಗರಿಕೆ ಹುಲ್ಲು ಅರ್ಪಿಸುವುದು ಈ ಕಾರಣಕ್ಕಾಗಿ ಎನ್ನುತ್ತಾರೆ ಹಿರಿಯರು.

ಆದರೆ ಸಂಪೂರ್ಣವಾಗಿ ಗಣೇಶ ಮೂರ್ತಿಗಳನ್ನು ಮಾಡುವುದು ಅಷ್ಟು ಸುಲಭದ ಮಾತಲ್ಲ. ತಿಂಗಳುಗಟ್ಟಲೇ ಸೆಗಣಿ ಸಂಗ್ರಹಿಸಬೇಕು. ನಂತರ ಅದನ್ನು ತೀರಾ ಸಣ್ಣದಾಗಿ ಹಿಟ್ಟಿನಂತೆ ಮಾಡಿಕೊಳ್ಳಬೇಕು. ಅದಕ್ಕೆ ಗೋಅರ್ಗ್? ಸೇರಿಸಿಕೊಳ್ಳಬೇಕು. ಸೆಗಣಿಯ ಪುಡಿಯನ್ನ ಒಂದು ಕೆ.ಜಿ ತೆಗೆದುಕೊಂಡರೇ ಗೋಅರ್ಗ್ 250 ಗ್ರಾಂ ಹಾಕಬೇಕು. ಜೊತೆಗೆ ಗಣೇಶನ ಮೂರ್ತಿಗಳನ್ನು ಬಿಸಿಲಿನಲ್ಲಿ ಒಣಗಿಸಿ ಅಂತಿಮ ಟಚ್ ನೀಡಿದರೆ ಪರಿಸರಸ್ನೇಹಿ ಗಣೇಶ ಮೂರ್ತಿಗಳು ಸಿದ್ದವಾಗುತ್ತವೆ.

### ಮೂರ್ತಿ ತಯಾರಿಕೆ ಹೇಗೆ:

ಮೊದಲು ಸೆಗಣಿಯನ್ನು ಬೆರಣಿಯನ್ನಾಗಿ ಮಾಡಿ ಬೇಸಿಗೆ ಕಾಲದಲ್ಲಿ ಒಣಗಿಸಲಾಗುತ್ತದೆ. ನಂತರ ಅದನ್ನು ಗಿರಣಿಯಲ್ಲಿ ಹಿಟ್ಟಿನ ರೀತಿ ಹಾಕಿಸಿಕೊಂಡು ಬರಲಾಗುತ್ತದೆ. ಅದಕ್ಕೆ ಗೋಅರ್ಗ್ ಪೌಡರ್ ಸೇರಿಸಲಾಗುತ್ತದೆ. ಅದರ ಜೊತೆಗೆ ಪಂಚಗವ್ಯ ಸೇರಿಸಿ ಪ್ಲಾಸ್ಟಿಕ್‌ನಿಂದ ಮಾಡಿದ ಮೋಲ್ಡ್‌ನಲ್ಲಿ ಹಾಕಲಾಗುತ್ತದೆ. ನಂತರ ಮೂರು ದಿನಗಳನ್ನು ಬಿಟ್ಟು ಗಣೇಶ ಮೂರ್ತಿಗಳನ್ನು ಹೊರಗೆ ತೆಗೆಯಲಾಗುತ್ತದೆ. ಈ ರೀತಿ ಮೋಲ್ಡ್‌ನಲ್ಲಿ ತಯಾರಿಸಿದ ಪಂಚಗವ್ಯ ಗಣೇಶ ಮೂರ್ತಿಗಳಿಗೆ ಕೈಜೋಡಿಸಿದರೆ ಪಂಚಗವ್ಯ ಗಣೇಶ ಮೂರ್ತಿ ಸಿದ್ದವಾಗುತ್ತದೆ.

ಯಲ್ಲಪ್ಪ ದೊಡ್ಡಮನಿ ಮಾತನಾಡಿ, "ಕಳೆದ ನಾಲ್ಕು ವರ್ಷಗಳಿಂದ ಸೆಗಣಿಯ ಗಣೇಶ ಮೂರ್ತಿಗಳನ್ನು ಮಾಡುತ್ತಿದ್ದೇವೆ. ಮೊದಲು ಕನ್ನೇರಿ ಮಠದಲ್ಲಿ ಈ ರೀತಿಯ ಗಣೇಶ ಮೂರ್ತಿ ನೋಡಿದ್ದೆ. ಅಲ್ಲಿ ಕಲಿತುಬಂದು ಗಣೇಶ ಮೂರ್ತಿ ಮಾಡಲು ಆರಂಭಿಸಿದೆ. ಇಲ್ಲಿಯವರೆಗೆ ಸೆಗಣಿಯಿಂದ ಮೂರ್ತಿ ತಯಾರಿಸುತ್ತಿದ್ದೆ. ಈ ವರ್ಷ ಇದಕ್ಕೆ ಹೊಸ ಸೇರ್ಪಡೆಯಾಗಿ ಪಂಚಗವ್ಯ ಸೇರಿಸಿ ಗಣೇಶ ಮೂರ್ತಿ ತಯಾರಿಸುತ್ತಿದ್ದೇವೆ" ಎಂದರು.

"ಹಸುವಿನಲ್ಲಿ ಮೂಕ್ಕೋಟಿ ದೇವಾನುದೇವತೆಗಳು ನೆಲೆಸಿದ್ದಾರೆ ಎನ್ನುತ್ತಾರೆ. ಯಾವುದೇ ಪೂಜೆ ಪುನಸ್ಕಾರ ನಡೆದರೆ ಹಸುವಿನ ಪಾದಾರ್ಪಣೆ ಮಾಡಿಸುತ್ತಾರೆ. ಈ ಹಿನ್ನೆಲೆಯಲ್ಲಿ ಪಂಚಗವ್ಯದಿಂದ ಗಣೇಶ ಮೂರ್ತಿಗಳನ್ನ ಸಿದ್ದಪಡಿಸುತ್ತಿದ್ದೇವೆ. ಪ್ರಸ್ತುತ ಪಿಒಪಿ ರಸಾಯನಿಕಗಳಿಂದ ಗಣೇಶ ಮೂರ್ತಿಗಳನ್ನು ತಯಾರಿಸಲಾಗುತ್ತದೆ. ಇದರಿಂದ ಪರಿಸರಕ್ಕೆ ಹಾನಿ. ಆದರೆ ಸೆಗಣಿ ಗಣೇಶ ಮೂರ್ತಿಗಳಿಂದ ಪರಿಸರ ಹಾನಿಯಿಲ್ಲ. ಈ ವಿಚಾರ ಇಟ್ಟುಕೊಂಡು ಪರಿಸರ ಉಳಿಸಲು ಸಣ್ಣ ಹೆಜ್ಜೆ ಇಟ್ಟಿದ್ದೇನೆ" ಎಂದು ಹೇಳಿದರು.

"ಈ ರೀತಿಯ ಗಣೇಶ ಮೂರ್ತಿಗಳ ವಿಸರ್ಜನೆಯಿಂದ ನೀರು ಕಲುಷಿತವಾಗುವುದಿಲ್ಲ. ಕೊನೆ ಪಕ್ಷ ಮನೆಯಲ್ಲಿನ ಬಕೆಟ್‌ನಲ್ಲಿ ಸಹ ಗಣೇಶ ಮೂರ್ತಿ ವಿಸರ್ಜನೆ ಮಾಡಬಹುದು. ಅದರಿಂದ ಬರುವ ಗೊಬ್ಬರ ಗಿಡಗಳಿಗೆ ಹಾಕಬಹುದು. ವರ್ಷದಿಂದ ವರ್ಷಕ್ಕೆ ಈ ರೀತಿಯ ಗಣೇಶ ಮೂರ್ತಿಗಳಿಗೆ ಬೇಡಿಕೆ ಅಧಿಕವಾಗುತ್ತಿದೆ. ನಮಗೆ ತಯಾರಿಸಿಕೊಡಲು ಸಾಧ್ಯವಾಗುತ್ತಿಲ್ಲ" ಎನ್ನುತ್ತಾರೆ ಯಲ್ಲಪ್ಪ. ಯಲ್ಲಪ್ಪ ಸಹೋದರ ವಿನಾಯಕ ಮಾತನಾಡಿ, "ಈ ರೀತಿಯ ಸೆಗಣಿ ಗಣೇಶ ಮೂರ್ತಿಗಳಿಗೆ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧಡೆಯಿಂದ ಬೇಡಿಕೆ ಬಂದಿದ್ದು, ಗಣೇಶ ಮೂರ್ತಿಗಳನ್ನು ಭಕ್ತರಿಗೆ ಮುಟ್ಟಿಸುವ ಪ್ರಯತ್ನ ಮಾಡುತ್ತಿದ್ದೇವೆ. ಜನರಿಗೆ ಇದರ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಯಲ್ಲಪ್ಪಣ್ಣ ಕಳೆದ ನಾಲ್ಕು ವರ್ಷಗಳಿಂದ ಈ ರೀತಿ ಸೆಗಣಿಯಿಂದ ಗಣೇಶ ಮೂರ್ತಿಗಳನ್ನು ತಯಾರಿಸುತ್ತಾ ಬಂದಿದ್ದಾರೆ. ವರ್ಷದಿಂದ ವರ್ಷಕ್ಕೆ ಸೆಗಣಿಯಿಂದ ಮಾಡಿದ ಗಣೇಶ ಮೂರ್ತಿಗಳಿಗೆ ಉತ್ತಮ ಬೇಡಿಕೆ ಬರುತ್ತಿದೆ" ಎಂದು ತಿಳಿಸಿದರು.

# ಮೈಸೂರು ದಸರಾ: ಮಹೇಂದ್ರ ಆನೆಗೆ ಮೂಟೆ ಹೊರುವ ತಾಲೀಮು



ಮೈಸೂರು: ನಾಡಹಬ್ಬ ದಸರಾದ ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿ ಹೊರುವ ಆನೆಯ ಆಯ್ಕೆಯ ಪ್ರಕ್ರಿಯೆ ಆರಂಭವಾಗಿದ್ದು, ಮಹೇಂದ್ರ ಆನೆಗೆ ಮರಳು ಮೂಟೆ ಹೊರಿಸಿ ಭಾರದ ತಾಲೀಮನ್ನು ನಡೆಸಲಾಯಿತು.

ಅಕ್ಟೋಬರ್ 11 ರಿಂದ ಅಕ್ಟೋಬರ್ 21 ರವರೆಗೆ ನವರಾತ್ರಿಯ ಕಾರ್ಯಕ್ರಮಗಳು ನಡೆಯಲಿದ್ದು, ಅ.21 ರಂದು ವಿಶ್ವವಿಖ್ಯಾತ ಜಂಬೂಸವಾರಿ ಮೆರವಣಿಗೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಭಾನುವಾರ ಸಂಜೆ ದಸರಾ ಆನೆ ಮಹೇಂದ್ರಗೆ ಮರಳು ಮೂಟೆ ಹೊರಿಸಿ ಭಾರ ಹೊರುವ ತಾಲೀಮು ಮಾಡಿಸಲಾಯಿತು. ಮಹೇಂದ್ರ ಆನೆಗೆ ಹೆಣ್ಣಾನೆಗಳಾದ ಲಕ್ಷ್ಮೀ ಹಾಗೂ ಕಾವೇರಿ ಸಾಥ್? ನೀಡಿದವು. ಬನ್ನಿಮಂಟಪದವರೆಗಿನ ಸುಮಾರು 5 ಕಿಲೋಮೀಟರ್? ದೂರವನ್ನು ಎರಡು ಗಂಟೆಯಲ್ಲಿ ಕ್ರಮಿಸಿದ ಮಹೇಂದ್ರ ತಾನು ಚಿನ್ನದ ಅಂಬಾರಿ ಹೊರಲು ಸಿದ್ಧ ಎಂಬುದನ್ನು ನಿರೂಪಿಸಿದ.

ಇತರೆ ಆನೆಗಳಿಗೂ ಭಾರ ಹೊರುವ ತಾಲೀಮು: ಕಳೆದ ಬಾರಿ ಚಿನ್ನದ ಅಂಬಾರಿಯನ್ನು ಹೊತ್ತಿದ್ದ ಅಭಿಮನ್ಯು ಆನೆ ನಿವೃತ್ತಿಯಾದ ನಂತರ ಈ ಬಾರಿ ಅಂಬಾರಿ ಹೊರುವ ಆನೆಯನ್ನು ಆಯ್ಕೆ ಮಾಡಿಲ್ಲ. ಇದರಿಂದ ಈ ಬಾರಿ ಯಾವ ಆನೆ ಜಂಬೂಸವಾರಿ ಕ್ಯಾಪ್ಟನ್ ಆಗಿ ಆಯ್ಕೆ ಮಾಡಬೇಕು ಎಂಬ ಪ್ರಕ್ರಿಯೆಯ ಮೊದಲ ಹಂತವಾಗಿ ಗಜಪಡೆಗಳಿಗೆ ಭಾರ ಹೊರುವ ತಾಲೀಮನ್ನು ನಡೆಸಲಾಗುತ್ತಿದ್ದು, ಇದರ ಅಂಗವಾಗಿ ಮಹೇಂದ್ರ ಆನೆಗೆ ಭಾರ ಹೊರುವ ತಾಲೀಮನ್ನು ನಡೆಸಲಾಗಿದೆ. ಮುಂದಿನ ದಿನಗಳಲ್ಲಿ ಪ್ರಶಾಂತ ಹಾಗೂ ಧನಂಜಯ ಆನೆಗಳಿಗೂ ಭಾರ ಹೊರುವ ತಾಲೀಮನ್ನು ನಡೆಸಲಾಗುತ್ತದೆ. ಆ ಮೂಲಕ ಅಂಬಾರಿ ಹೊರುವ ಆನೆಯನ್ನು ಆಯ್ಕೆ ಮಾಡಲಾಗುವುದು ಎಂದು ಡಿಸಿಎಫ್ ಪ್ರಭುಗೌಡ ತಿಳಿಸಿದರು.

ಆನೆ ನೋಡಲು ಜನಸಾಗರ: ದಸರಾ ಜಂಬೂಸವಾರಿ ಮೆರವಣಿಗೆಯನ್ನು ನೋಡಲು ಪಾಸು ಇಲ್ಲದೆ ಜನರು ನಿರಾಸೆ ವ್ಯಕ್ತಪಡಿಸುತ್ತಿದ್ದು, ಆದರೆ ಮೈಸೂರಿಗೆ ಬರುವ ಪ್ರವಾಸಿಗರು ಹಾಗೂ ಸ್ಥಳೀಯರು ಪ್ರತಿದಿನ ಅರಮನೆಯಿಂದ ಬನ್ನಿಮಂಟಪದವರೆಗೆ ಸಾಗುವ ಗಜಪಡೆಗಳನ್ನು ನೋಡಲು ಜನಸಾಗರವೇ ಹರಿದು ಬರುತ್ತಿದ್ದು, ದಸರಾವೇ ನೋಡಿದಂತೆ ಭಾಸವಾಗುತ್ತದೆ.

**ಸಾಂಪ್ರದಾಯಿಕ ಪೂಜೆ:** ಭಾರ ಹೊರುವ ತಾಲೀಮನ್ನು ನಡೆಸುವ ಮುನ್ನ ಗಜಪಡೆಯ ಶೆಡ್‌ನ ಆವರಣದಲ್ಲಿರುವ ಕೋಡಿ ಸೋಮೇಶ್ವರ ದೇವಾಲಯದ ಮುಂಭಾಗದಲ್ಲಿ ಪೂಜೆ ಸಲ್ಲಿಸಿದ ಬಳಿಕ ಮಹೇಂದ್ರ ಆನೆಯ ಬೆನ್ನಿನ ಮೇಲೆ ಗಾದಿ, ನಮ್ದಾ ಕಟ್ಟಿ ಸೇರಿ ಒಟ್ಟು 600 ಕೆ.ಜಿ ತೂಕದ 6 ಮರಳು ಮೂಟೆಗಳನ್ನು ಕಟ್ಟಲಾಯಿತು. ಎಡ ಭಾಗಕ್ಕೆ ಲಕ್ಷ್ಮೀ, ಬಲ ಭಾಗಕ್ಕೆ ಕಾವೇರಿ ಆನೆಯನ್ನು ಕುಮ್ಕಿ ಆನೆಗಳಾಗಿ ನಿಲ್ಲಿಸಿ ಚಿನ್ನದ ಅಂಬಾರಿ ಕಟ್ಟುವ ಸ್ಥಳವನ್ನು ಪರಿಚಯಿಸಿದ ನಂತರ ಅರಮನೆಯ ಬಲರಾಮ ದ್ವಾರದಿಂದ ಕೆ.ಆರ್.ವೃತ್ತ ಸಯ್ಯಾಜಿರಾವ್ ರಸ್ತೆ, ಆಯುರ್ವೇದಿಕ್ ವೃತ್ತದ ಮೂಲಕ ಬನ್ನಿಮಂಟಪದ ವರೆಗೆ ತಾಮೀಮು ನಡೆಯಿತು. ಗಜಪಡೆ ಸಾಗುವ ಮಾರ್ಗದ ಎರಡೂ ಬದಿಯಲ್ಲೂ ಜನಸಾಗರವೇ ಸೇರಿದ್ದು, ಗಜಪಡೆಗಳಿಗೆ ಹೂವನ್ನು ಎಸೆದು ಭಕ್ತಿಯನ್ನು ತೋರುತ್ತಿರುವುದು ಕಂಡುಬಂತು.



ಸರ್ವೋದಯ ಕಾಲೇಜು ಕ್ರೀಡಾಂಗಣದಲ್ಲಿ ನಡೆದ ತುಮಕೂರು ತಾಲ್ಲೂಕು ಮಟ್ಟದ ಖೋಖೋ ಪಂದ್ಯಾವಳಿಯಲ್ಲಿ ಚಿನ್ಮಯ ಜಿ ಅವರು ಪ್ರಥಮ ಸ್ಥಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದು, ಹಣ್ಣಿನ ವ್ಯಾಪಾರಿ ಗಿರೀಶ್ ಅವರ ಪುತ್ರಿಯಾದ ಇವರನ್ನು ಶಾಸಕ ಜಿ.ಬಿ.ಜ್ಯೋತಿಗಣೇಶ್ ಅಭಿನಂದಿಸಿದರು. ಆಟೋ ಶಿವಕುಮಾರ್, ಬಂಬುಮೋಹನ್, ಲತಾ, ರಾಧಮ್ಮ,ನಿಸರ್ಗ ರಮೇಶ್, ರಾಧಾ, ನಟರಾಜಶೆಟ್ಟಿ ಮುಂತಾದವರಿದ್ದರು.

## ಸಹಾಯಧನ ಸೌಲಭ್ಯಕ್ಕೆ ಅರ್ಜಿ

ತುಮಕೂರು: ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯು ಗಣಿಬಾಧಿತ ಪ್ರದೇಶಗಳ ಸಮಗ್ರ ಅಭಿವೃದ್ಧಿ ಯೋಜನೆ(ಅಇಕಒಋಚ) ಯಡಿ ಒಂದು ಹಸು/ಎಮ್ಮೆ ಸಾಕಾಣಿಕೆಗೆ ಸಹಾಯಧನ ಸೌಲಭ್ಯ ನೀಡಲು ತುಮಕೂರು ಜಿಲ್ಲೆಯ ತಿಪಟೂರು ಮತ್ತು ಗುಬ್ಬಿ ತಾಲ್ಲೂಕಿನ ಗಣಿಬಾಧಿತ/ಪ್ರಭಾವಕ್ಕೊಳಗಾದ 5 ಕಿ.ಮೀ. ವ್ಯಾಪ್ತಿಯ ಗ್ರಾಮಗಳ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಸಾಮಾನ್ಯ ವರ್ಗದ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

# ಸ್ವಾಮೀಜಿಗೆ ನೀಡಿದ್ದ ಜಾಮೀನು ರದ್ದು ಕೋರಿ ಸಲ್ಲಿಸಿದ್ದ ಅರ್ಜಿ ತಿರಸ್ಕೃತ



ದಾವಣಗೆರೆ: ಪೋಕ್ಸೋ ಪ್ರಕರಣದಲ್ಲಿ ಎರಡನೇ ಬಾರಿ ವಚನಾನಂದ ಸ್ವಾಮೀಜಿಗೆ ನೀಡಿದ್ದ ರೆಗ್ಯೂಲರ್ ಜಾಮೀನು ರದ್ದು ಪಡೆಸುವಂತೆ ಕೋರಿ ಸಂತ್ರಸ್ತ ಬಾಲಕನ ತಾಯಿ ಸಲ್ಲಿಸಿದ್ದ ಅರ್ಜಿಯನ್ನು ದಾವಣಗೆರೆ ವಿಶೇಷ ಪೋಕ್ಸೋ ನ್ಯಾಯಾಲಯ ತಿರಸ್ಕರಿಸಿದೆ.

ವಚನಾನಂದ ಸ್ವಾಮೀಜಿಗೆ ಜಾಮೀನು ರದ್ದು ಪಡಿಸುವಂತೆ ಆಗ್ರಹಿಸಿ ಸಂತ್ರಸ್ತ ಬಾಲಕನ ತಾಯಿ ಕೋರ್ಟ್ ಮೊರೆ ಹೋಗಿದ್ದರು. ಅಲ್ಲದೆ ಬಾಲಕನ ತಾಯಿ ಸಾಕ್ಷಿದಾರರಿಗೆ ಬೆದರಿಕೆ ಹಾಕುತ್ತಿದ್ದಾರೆ ಎಂಬ ಆರೋಪ ಮಾಡಿದ್ದಾರೆ. ಕಳೆದ ಜುಲೈ 13 ರಂದು ಪೋಕ್ಸೋ ಪ್ರಕರಣದಲ್ಲಿ ವಚನಾನಂದ ಸ್ವಾಮೀಜಿಗೆ ರೆಗ್ಯೂಲರ್ ಜಾಮೀನನ್ನು ಕೋರ್ಟ್ ಮಂಜೂರು ಮಾಡಿತ್ತು. ಈ ಹಿನ್ನೆಲೆ ಸ್ವಾಮೀಜಿಗೆ ನೀಡಿದ್ದ ಜಾಮೀನು ರದ್ದುಗೊಳಿಸುವಂತೆ ಕೋರ್ಟ್?ಗೆ ಸಂತ್ರಸ್ತ ಬಾಲಕನ ತಾಯಿ ತರಕಾರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಕೋರ್ಟ್ ತಿರಸ್ಕರಿಸಿದೆ.

ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನ ಹನಗವಾಡಿ ಬಳಿ ಇರುವ ಪಂಚಮಸಾಲಿ ಮಠದ ವಚನಾನಂದ ಸ್ವಾಮೀಜಿ ಅವರು ಮಠದಲ್ಲಿದ್ದ ಮಕ್ಕಳಿಗೆ ಕಿರುಕುಳ ನೀಡಿದ್ದಾರೆಂದು ಆರೋಪಿಸಿ ಹರಿಹರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಪ್ರಕರಣ ದಾಖಲಿಸಲಾಗಿತ್ತು. ಸ್ವಾಮೀಜಿ ಪರ ಹಿರಿಯ ನ್ಯಾಯವಾದಿ ಎಸ್. ವಿ. ಪಾಟೀಲ್ ವಾದ ಮಂಡನೆ ಮಾಡಿದರು.

ಕೋರ್ಟ್‌ಗೆ ಹಾಜರಾಗಿ ಜಾಮೀನು ಪ್ರಕ್ರಿಯೆ ಮುಗಿಸಿದ್ದ ವಚನಾನಂದ ಶ್ರೀ: ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಜುಲೈ 14 ರಂದು ದಾವಣಗೆರೆ ಜಿಲ್ಲಾ ಪೋಕ್ಸೋ ಕೋರ್ಟ್‌ಗೆ ಆಗಮಿಸಿ ಜಾಮೀನು ಪ್ರಕ್ರಿಯೆ ಮುಗಿಸಿದ್ದರು. ಬಳಿಕ ಮಾತನಾಡಿದ್ದ ಅವರು, "ಷರತ್ತುಬದ್ಧ ಜಾಮೀನು ನೀಡಿರುವ ಪೋಕ್ಸೋ ನ್ಯಾಯಾಲಯದ ಆದೇಶವನ್ನು ಗೌರವಿಸುತ್ತೇವೆ. ಕಾನೂನನ್ನು ಪರಿಪಾಲಿಸುತ್ತೇವೆ. ಇದು ಸತ್ಯಕ್ಕೆ ಸಂದ ಜಯ. ಮಠದ ಭಕ್ತರು ಹಾಗೂ ವಕೀಲ ವೃಂದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ವಕೀಲರಾದ ಎಸ್.ವಿ. ಪಾಟೀಲ್ ಅವರು ನ್ಯಾಯಾಲಯಕ್ಕೆ ಸೂಕ್ತ ದಾಖಲೆಗಳನ್ನು ಒದಗಿಸಿದರು. ಅಖಂಡ ಇತಿಹಾಸ ನೋಡಿದಾಗ ಯಾರೆಲ್ಲ ಹೋರಾಟ ಮಾಡಿದ್ದಾರೆಯೋ ಅವರಿಗೆಲ್ಲ ನಿಂದನೆ, ಅಪವಾದಗಳು ಬರುವುದು ಸಹಜ. ಶಂಕರಾಚಾರ್ಯರಿಂದ ಹಿಡಿದು ಇಲ್ಲಿಯತನಕ ಪ್ರತಿಯೊಬ್ಬರಿಗೂ ನೋವುಗಳನ್ನು, ಕಷ್ಟಗಳನ್ನು ಕೊಟ್ಟಿದ್ದಾರೆ" ಎಂದಿದ್ದರು.

"ಸನ್ಯಾಸತ್ವ ಎಂಬುದು ಹೂವಿನ ಹಾಸಿಗೆ ಅಲ್ವೇ ಅಲ್ಲ. ಅಗ್ನಿಪಥ. ಕೊನೆಗೆ ಉಳಿಯುವುದು ಸತ್ಯ, ಧರ್ಮ, ನ್ಯಾಯ. ಅದನ್ನೇ ನಾವು ಪಾಲಿಸುತ್ತಿದ್ದೇವೆ. ಪ್ರಕರಣ ನ್ಯಾಯಾಲಯದಲ್ಲಿ ಇರುವ ಕಾರಣ ಇಷ್ಟು ಮಾತ್ರ ಹೇಳಲು ಇಚ್ಚೆಪಡುತ್ತೇನೆ. ಲಿಂಗೈಕ್ಯ ಮಹಾಂತ ಶಿವಚಾರ್ಯ ಸ್ವಾಮೀಜಿಗಳು ಡೈರಿಯಲ್ಲಿ ಬರೆದು ಹೋಗಿದ್ದಾರೆ. ಅದು ಎಲ್ಲಾ ಭಕ್ತರಿಗೆ ಗೊತ್ತಿದೆ. ನಾವು ಹರಿಹರದ ಸ್ವಾಮೀಜಿ ಎಂದು ಗೊತ್ತಾಗ್ತಾ ಇರಲಿಲ್ಲ. ಏಕೆಂದರೆ ಭಕ್ತರು ಮಠಕ್ಕೆ ಬರುತ್ತಿರಲಿಲ್ಲ. ಹರಿಹರ ಭಕ್ತರು ಮಠದ ಪರ ಗಟ್ಟಿಯಾಗಿ ನಿಂತಿದ್ದಾರೆ. ನಮ್ಮ ಗುರುಗಳಾದ ಯೋಗ ಭಾರತೀಯ ಸ್ವಾಮೀಜಿಯವರಿಂದ ಯೋಗ, ಧ್ಯಾನ ಕಲಿತಿದ್ದೇನೆ. ಅವರು ಬರೆದ ಸೈಲೆನ್ಸ್ ಎಂಬ ಪುಸ್ತಕ ಇದು.ಶಬ್ದಗಳಲ್ಲಿ ಹೇಳುವುದಕ್ಕೆ ಮೌನ ಉತ್ತರಿಸಲಿದೆ.

# ಶ್ರೀಕೃಷ್ಣ ಜನ್ಮಾಷ್ಟಮಿ ಆಚರಣೆ: ಕೃಷ್ಣ ವೇಷಧಾರಿ ಮಕ್ಕಳ ಕಲರವ



ತುಮಕೂರು: ನಗರದ ಅಮಾನಿಕೆರೆ ಅಂಗಳದ ಗಾಜಿನಮನೆ ಭಾನುವಾರ ನಂದಗೋಕುಲವಾಗಿತ್ತು. ನೂರಾರು ಮಕ್ಕಳು ಕೃಷ್ಣ, ರಾಧೆಯರ ವೇಷ ತೊಟ್ಟು ಹಾವಭಾವ ಪ್ರದರ್ಶಿಸಿ ಸಂಭ್ರಮಿಸಿದರು. ಶ್ರೀ ಕೃಷ್ಣ ಜನ್ಮಾಷ್ಟಮಿ ಸಮಿತಿಯ 40ನೇ ವರ್ಷದ ಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಂಡಿದ್ದ ಕೃಷ್ಣಲೋಕ ವೈಭವದ ವರ್ಣರಂಜಿತ ಕಾರ್ಯಕ್ರಮ ಕೃಷ್ಣಮಯವಾಗಿತ್ತು.

ಶ್ರೀ ಕೃಷ್ಣ ಜನ್ಮಾಷ್ಟಮಿ ಸಮಿತಿಯೊಂದಿಗೆ ಜನಕಲ್ಯಾಣ ಟ್ರಸ್ಟ್, ವಿಶ್ವ ಹಿಂದೂ ಪರಿಷದ್, ಸಂಸ್ಕಾರ ಭಾರತಿ ಇವರ ಸಹಯೋಗದಲ್ಲಿ ನಡೆದ ಕೃಷ್ಣಲೋಕ ವೈಭವ ಕಾರ್ಯಕ್ರಮದಲ್ಲಿ ವೇಷಧಾರಿ ಮಕ್ಕಳ ಕೃಷ್ಣಲೀಲಾ ವಿನೋದಗಳು ಕಣ್ಣುತುಂಬಿ ರಂಜಿಸಿದವು.

ಇದಕ್ಕೂ ಮೊದಲು ಬೆಳಿಗ್ಗೆ ರಂಗೋಲಿ ಸ್ಪರ್ಧೆ, ಭಜನಾ ಸ್ಪರ್ಧೆಗಳಲ್ಲಿ ಹೆಚ್ಚು ಜನ ಉತ್ಸಾಹದಿಂದ ಭಾಗವಹಿಸಿ ಪ್ರತಿಭಾ ಪ್ರದರ್ಶನ ಮಾಡಿದರು. ಮಧ್ಯಾಹ್ನದ ಶ್ರೀಕೃಷ್ಣ ಲೋಕ ಕಾರ್ಯಕ್ರಮವನ್ನು ಶಾಸಕ ಜಿ.ಬಿ. ಜ್ಯೋತಿಗಣೇಶ್ ಉದ್ಘಾಟಿಸಿ, ಮಕ್ಕಳು ರಾಧೆ, ಕೃಷ್ಣದ ವೇಷದಲ್ಲಿ ಕಂಗೊಳಿಸುತ್ತಿದ್ದಾರೆ. ಇಂತಹ ವೇಷಪ್ರದರ್ಶನಗಳು ನಮ್ಮ ಸಂಸ್ಕೃತಿ, ಸಂಪ್ರದಾಯದ ಪ್ರತೀಕ. ಶ್ರೀ ಕೃಷ್ಣ ಜನ್ಮಾಷ್ಟಮಿ ಸಮಿತಿಯವರು 40 ವರ್ಷಗಳಿಂದ ಇಂತಹ ವೈವಿಧ್ಯಮಯ ಕಾರ್ಯಕ್ರಮ ಮಾಡುತ್ತಾ, ನಮ್ಮ ಪರಂಪರೆಯನ್ನು ಹೊಸ ತಲೆಮಾರಿಗೆ ಪರಿಚಯಿಸುತ್ತಿದ್ದಾರೆ ಎಂದು ಅಭಿನಂದಿಸಿದರು.

ಸಾಮಾಜಿಕ ಕಾರ್ಯಕರ್ತೆ, ವಾಗ್ಮಿ ಕು. ಹಾರಿಕಾ ಮಂಜುನಾಥ್ ಅವರು ತಮ್ಮ ಕಿಕ್ಲೂಚಿ ಭಾಷಣದಲ್ಲಿ ಕೃಷ್ಣಲೀಲಾ ವೈಭವವನ್ನು ವಿವರಿಸಿದರು. ರಾಜ್ಯ ಕಲ್ಲು ಗಣಿಗಾರಿಕೆ ಮಾಲೀಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸಿ.ಎಸ್. ಭಾಸ್ಕರ್, ನಗರ ವೀರಶೈವ ಸಮಾಜ ಸೇವಾ ಸಮಿತಿ ಅಧ್ಯಕ್ಷ ಕೋರಿ ಮಂಜುನಾಥ್, ಶ್ರೀಕೃಷ್ಣ ಜನ್ಮಾಷ್ಟಮಿ ಸ್ವಾಗತ ಸಮಿತಿ ಅಧ್ಯಕ್ಷೆ ರೇಖಾ ಮಹೇಶ್, ಕಾಂತಾರ ಖ್ಯಾತಿಯ ಚಲನಚಿತ್ರ ಶೈನ್ ಶೆಟ್ಟಿ, ಖ್ಯಾತ ನೃತ್ಯಪಟು, ಕನ್ನಡ-ತೆಲುಗು ಚಿತ್ರನಟ ದೀಕ್ಷಿತ್ ಶೆಟ್ಟಿ, ಸಮಿತಿ ಪ್ರಧಾನ ಕಾರ್ಯದರ್ಶಿಗಳಾದ ಪರಶುರಾಮಯ್ಯ, ರೇಖಾ ಶಿವಕುಮಾರ್, ಮುಖಂಡರಾದ ಗೋವಿಂದರಾವ್, ಗ.ಸಿ.ಶ್ರೀನಿವಾಸಮೂರ್ತಿ, ಜಿ.ಕೆ. ಶ್ರೀನಿವಾಸ್, ಜಿ.ಎಸ್. ಬಸವರಾಜು, ಮಹೇಶ್, ನಟರಾಜಶ್ರೇಷ್ಠಿ, ಕಿರಣ್ ಕೆ.ಹೆಚ್, ಎಸ್.ಆರ್. ಪ್ರಸಾದ್ ಮೊದಲಾದವರು ಭಾಗವಹಿಸಿದ್ದರು. ನಂತರ ಶ್ರೀಕೃಷ್ಣನ ಜೀವನ ಮತ್ತು ಭಗವದ್ಗೀತೆ ಆಧರಿಸಿದ ನೃತ್ಯ ಸ್ಪರ್ಧೆ, ದಾಂಡಿಯಾ ನೃತ್ಯ ನಡೆಯಿತು.

# ಅರಮನೆ ನಗರಿಯಲ್ಲಿ ದೇಶೀಯ ಸೊಪ್ಪು ಮೇಳ




ಮೈಸೂರು: ನಮ್ಮ ಆರೋಗ್ಯದ ಮೂಲ ಸೊಪ್ಪುಗಳು. ಸಕಲ ರೋಗಕ್ಕೂ ಸೊಪ್ಪುಗಳೇ ಮದ್ದು ಎಂಬ ಮಾತಿದೆ. ಇಂತಹ ಮಾತಿಗೆ ನಿದರ್ಶನ ಎಂಬಂತೆ ಮೈಸೂರಿನಲ್ಲಿ ದೇಶೀಯ ಸೊಪ್ಪು ಮೇಳ ಆಯೋಜನೆ ಮಾಡಲಾಗಿದೆ. ವಿಶೇಷ ಎಂದರೆ ಈ ಮೇಳದಲ್ಲಿ ಕಂಡು ಬಂದಿದ್ದು ಸಾವಯವ ಮತ್ತು ರಾಸಾಯನಿಕ ಮುಕ್ತ ಸೊಪ್ಪುಗಳು.

ಜನರಲ್ಲಿ ಸೊಪ್ಪಿನ ಕುರಿತು ಕಾಳಜಿ ಜೊತೆಗೆ ವಿಭಿನ್ನ ಬಗೆಯ ಸೊಪ್ಪುಗಳನ್ನು ಪರಿಚಯಿಸುವ ಮೂಲಕ ಆರೋಗ್ಯಕರ ಆಹಾರದ ಆಯ್ಕೆಯನ್ನು ಪರಿಚಯಿಸಿ, ಈ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಎರಡು ದಿನಗಳ ಕಾಲ ಸೆ.5 ಮತ್ತು 6ರಂದು ಈ ಮೇಳವನ್ನು ಆಯೋಜಿಸಲಾಗಿದೆ.

ಪ್ರತಿನಿತ್ಯ ಪ್ರತಿಯೊಂದು ಅಡಿಗೆ, ತಿಂಡಿಗೂ ವಿವಿಧ ರೀತಿಯ ಸೊಪ್ಪುಗಳನ್ನು ಬಳಸುತ್ತೇವೆ. ಅದರಲ್ಲಿ ಕರಿಬೇವಿನ ಸೊಪ್ಪು, ಮೆಂತ್ಯೆ ಸೊಪ್ಪು, ಪುದಿನ ಸೊಪ್ಪು, ಪಾಲಕ್ ಸೊಪ್ಪು, ಕಿಲ್ಕೀರೆ, ಕೊತ್ತಂಬರಿ ಸೊಪ್ಪು ಸೇರಿದಂತೆ ಸಾಮಾನ್ಯ. ಆದರೆ, ಇದರ ಹೊರತಾಗಿ ಹಲವು ಸೊಪ್ಪುಗಳಿದ್ದು, ಅವು ಆರೋಗ್ಯ ಮತ್ತು ರೋಗಗಳಿಂದ ಕಾಪಾಡುವಲ್ಲಿ ಮುಖ್ಯವಾಗಿವೆ. ಈ ಕುರಿತು ಜನರಿಗೆ ಪರಿಚಯಿಸುವುದು ಈ ದೇಶೀಯ ಸೊಪ್ಪಿನ ಮೇಳದ ಪ್ರಮುಖ ಉದ್ದೇಶವಾಗಿದೆ.

ಇದಕ್ಕಾಗಿ ಮೈಸೂರಿನ ನಂಜಬಹದ್ದೂರು ಛತ್ರದಲ್ಲಿ ಸಹಜ ಸಮೃದ್ಧ ಸಂಸ್ಥೆಯು ಹುಲಿಕಾಡು ರೈತ ಉತ್ಪಾದಕರ ಕಂಪನಿ ಮತ್ತು ಐಸಿಇಆರ್?- ಜೆಎಸ್?ಎಸ್? ಕೃಷಿ ವಿಜ್ಞಾನ ಕೇಂದ್ರ ಸುತ್ತೂರು ಸಹಯೋಗದಲ್ಲಿ ಈ ಮೇಳ ಆಯೋಜಿಸಲಾಗಿದೆ. ಈ ಮೇಳದಲ್ಲಿ ಸುಮಾರು 150ಕ್ಕೂ ಹೆಚ್ಚು ಬಗೆಯ ಸೊಪ್ಪುಗಳನ್ನು ಕಾಣಬಹುದಾಗಿದೆ. ಜೊತೆಗೆ ರಾಸಾಯನಿಕ ಮುಕ್ತವಾಗಿ ಸೊಪ್ಪು ಬೆಳೆಯುತ್ತಿರುವವರಿಗೆ ಇಲ್ಲಿ ವೇದಿಕೆ ಕಲ್ಪಿಸಲಾಗಿದ್ದು, ಈ ಮೂಲಕ ಆರೋಗ್ಯ ಜಾಗೃತಿಯನ್ನು ನಡೆಸಲಾಗಿದೆ.

ಈ ಸೊಪ್ಪಿನ ಮೇಳದಲ್ಲಿ ಭಾಗಿಯಾದ ಉತ್ತರ ಕರ್ನಾಟಕ ಮೂಲದ ನೀಲಮ್ಮ, ಪ್ರತಿಯೊಂದು ಅಡಿಗೆಗೂ ಸೊಪ್ಪುಗಳನ್ನು ಬಳಸುವುದು ಸಾಮಾನ್ಯ. ಆದರೆ ಇಂತಹ ಸೊಪ್ಪುಗಳು ರಾಸಾಯನಿಕ ಮುಕ್ತ ಸೊಪ್ಪುಗಳನ್ನ ಬಳಸಿದ್ದರೆ ಆರೋಗ್ಯಕ್ಕೆ ತುಂಬಾ ಉಪಯೋಗಕಾರಿ ಹಾಗೂ ಹಲವು ರೋಗಗಳನ್ನು ಬರದಂತೆ ತಡೆಯುತ್ತದೆ. ಹಲವು ರೋಗಗಳಿಗೂ ಮದ್ದಾಗಿರುವುದೇ ಈ ಸೊಪ್ಪು ಎಂಬುದನ್ನು ಮರೆಯಬಾರದು ಎಂದರು.

ಇನ್ನು ತಮ್ಮ ಹೊಲದಲ್ಲಿ ಬೆಳೆಯುವ ಜೊತೆಗೆ ಬೆಂಗಳೂರಿನ ಮಾಗಡಿಯಲ್ಲಿ ನರ್ಸರಿ ಹೊಂದಿರುವ ಶ್ರೀವತ್ಸ ಮಾತನಾಡಿ, ಇಂದು ನಮ್ಮ ಸುತ್ತಮುತ್ತಲಿರುವ ಎಷ್ಟೋ ಸೊಪ್ಪು ಮತ್ತು ಹಣ್ಣಿನ ಪರಿಚಯ ಜನರಿಗೆ ಇಲ್ಲದಂತೆ ಆಗಿದೆ. ಪ್ರತಿಯೊಂದು ನೋವು, ರೋಗಕ್ಕೆ ಅನುಗುಣವಾದ ಸೊಪ್ಪಿದ್ದು, ಅದನ್ನು ಪರಿಚಯಿಸುವ ಕೆಲಸ ಮಾಡಬೇಕಿದೆ ಎಂದರು.

ಸೊಪ್ಪುಗಳು ನಮ್ಮ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ ಜೊತೆಗೆ ಜೀರ್ಣಕ್ರಿಯೆಗೆ ಅತ್ಯುತ್ತಮವಾಗಿದೆ. ರಕ್ತಶುದ್ಧೀಕರಣ ಮಾಡುವಲ್ಲಿ ಇವು ಸಹಕಾರಿ. ಔಷಧಿಯ ಗುಣ ಹೊಂದಿರುವ ಈ ಸೊಪ್ಪುಗಳು ನಮ್ಮ ಕಾಯಿಲೆಯನ್ನು ಕಡಿಮೆ ಮಾಡುವಲ್ಲಿ ಪ್ರಮುಖವಾಗಿದೆ ಎನ್ನುತ್ತಾರೆ ಹುಲಿಕಾಡು ಮೂರ್ತಿ.

# ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಸ್ಮಾರ್ಟ್ ಕ್ಲಾಸ್ ಪ್ರಾರಂಭಿಸಿ



ಮಧುಗಿರಿ : ತಾಲೂಕಿನಲ್ಲಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಐದು ಸ್ಮಾರ್ಟ್ ಕ್ಲಾಸ್ ಗಳನ್ನು ಪ್ರಾರಂಭಿಸಲು ಶಿಕ್ಷಣ ಇಲಾಖೆಗೆ ನಿರ್ದೇಶನ ನೀಡಲಾಗಿದೆ ಎಂದು ತಾ.ಪಂ ಇಓ ಬಿ.ಕೆ. ಉತ್ತಮ್ ತಿಳಿಸಿದರು.

ತಾಲೂಕಿನ ಯಾದವ ಸಮುದಾಯ ಭವನದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ತಾಲೂಕು ಪಂಚಾಯ್ತಿ ವತಿಯಿಂದ ಸರ್ಕಾರಿ ಶಾಲೆಗಳಲ್ಲಿ ಸ್ಮಾರ್ಟ್ ಕ್ಲಾಸ್ ಪ್ರಾರಂಭಿಸುವ ಬಗ್ಗೆ ಚಿಂತನೆ ನಡೆಸಲಾಗಿದ್ದು, ಅತೀ ಹೆಚ್ಚು ದಾಖಲಾತಿ ಇರುವ ಶಾಲೆಗಳ ಪಟ್ಟಿ ನೀಡಿದರೆ ಈ ಶಾಲೆಗಳಲ್ಲಿ ಸ್ಮಾರ್ಟ್ ಕ್ಲಾಸ್ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು. ಇದರ ಜೊತೆಗೆ ಮುರಾರ್ಜಿ ದೇಸಾಯಿ ವಸತಿ ಶಾಲೆಗಳಿಗೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ ಎಂದರು.

ಶೈಕ್ಷಣಿಕ ಸಾಧನೆಯ ಬಗ್ಗೆ ಶಿಕ್ಷಕರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಶಿಕ್ಷಕರ ಬಗ್ಗೆ ಪೂಜೆ ಭಾವನೆ ಇದ್ದು ಶಾಲೆಗಳಲ್ಲಿ ಸಾಂಸ್ಕೃತಿಕ ವಾತಾವರಣ ಮತ್ತು ಕ್ರಮಬದ್ಧ ಶಿಕ್ಷಣ ಮೂಡಿ ಬರಬೇಕು. ಪೋಷಕರು ಸರ್ಕಾರಿ ಶಾಲೆಗಳನ್ನು ಕಡೆಗಣಿಸಬಾರದು. ಶಿಕ್ಷಕರೂ ಸಹ ತಮ್ಮ ಜವಾಬ್ದಾರಿಗಳನ್ನು ಅರಿತು ಕರ್ತವ್ಯ ನಿರ್ವಹಿಸಬೇಕು ಎಂದರು.

ಪ್ರಧಾನ ಭಾಷಣಕಾರ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೋ. ಮುನೇಂದ್ರ ಕುಮಾರ್ ಮಾತನಾಡಿ ಶಿಕ್ಷಕರು ಜ್ಞಾನ ಶಿಖರದ ಅಧ್ಯಯನಶೀಲರಾಗಬೇಕು. ಶಿಕ್ಷಕರ ಸರೋಪಲ್ಲಿ ರಾಧಾಕೃಷ್ಣನ್ ರವರ ಆದರ್ಶ ತತ್ವಗಳನ್ನು ವೃತ್ತಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಮೌಲ್ಯಯುತ ಶಿಕ್ಷಣವನ್ನು ನೀಡಬೇಕು ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸುವ ಕೆಲಸ ಶಿಕ್ಷಕರ ಮೇಲಿದೆ. ಸ್ವಾತಂತ್ರ ಬಂದು 79 ವರ್ಷಗಳಾದರೂ ಏಕೋಪಾಧ್ಯಾಯ ಶಾಲೆಗಳು ಇರುವುದು ವಿಷಾದನೀಯ. ಹತ್ತು ವರ್ಷಗಳಿಂದ ಶಿಕ್ಷಕರ ನೇಮಕಾತಿಯಾಗಿಲ್ಲ ಇದರಿಂದ ಶಿಕ್ಷಣ ಗುಣಮಟ್ಟದ ನೀಡಲು ಸಾಧ್ಯವಾಗುತ್ತಿಲ್ಲ. ಪ್ರಸ್ತುತ ಶಿಕ್ಷಕರು ಭಯದ ವಾತಾವರಣದಲ್ಲಿ ಕೆಲಸ ಮಾಡುವ ಪರಿಸ್ಥಿತಿ ಇದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮುಂದಿನ ಆರು ತಿಂಗಳ ಒಳಗೆ ಗುರುಭವನಕ್ಕೆ ಕಾಯಕಲ್ಪ ನೀಡಲು ವಿಧಾನಪರಿಷತ್ ಸದಸ್ಯ ರಾಜೇಂದ್ರ ರಾಜಣ್ಣನವರು ಭರವಸೆ ನೀಡಿದ್ದು, ರಾಜ್ಯದಲ್ಲೇ ಮೊಟ್ಟ ಮೊದಲ ಬಾರಿಗೆ ತಾಲೂಕಿನ ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 996 ಎಲ್ ಕೆಜಿ, ಯುಕೆಜಿ ಮಕ್ಕಳಿಗೆ ಸಮವಸ್ತ್ರ ಮತ್ತು ಶೂ ವಿತರಣೆಗೆ ಶಾಸಕ ಕೆ.ಎನ್. ರಾಜಣ್ಣನವರು ಕ್ರಮ ಕೈಗೊಂಡಿದ್ದು, ಇನ್ನೊಂದು ವಾರದೊಳಗೆ ಸಮವಸ್ತ್ರ ವಿತರಣೆಯಾಗಲಿದೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ರಮೇಶ್ ತಿಳಿಸಿದ್ದಾರೆ.

: ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತ ರಾಯಪ್ಪ ಬಿ ಆರ್ ಸಿ ಪವನ್ ಕುಮಾರ್ ರೆಡ್ಡಿ ಸರ್ಕಾರಿ ನೌಕರ ಸಂಘದ ಅಧ್ಯಕ್ಷ ರಂಗಪ್ಪ ವಲಯ ಅರಣ್ಯಾಧಿಕಾರಿ ಸುರೇಶ್ ಶಿಕ್ಷಕರ ಸಂಘದ ಪದಾಧಿಕಾರಿಗಳಾದ ತೋಟದಪ್ಪ ವೆಂಕಟೇಶ್ ನರಸೇಗೌಡ ಜಗದೀಶ್ ಲತಾ ಮಣಿ ಉಪನ್ಯಾಸಕ ಮಂಜುನಾಥ್ ಸರ್ಕಾರಿ ನೌಕರ ಸಂಘದ ಮಾಜಿ ಅಧ್ಯಕ್ಷನ ಸಿದ್ದೇಶ್ ಇದ್ದರು.

# ಸಹಕಾರಿ ಬ್ಯಾಂಕ್‌ಗೆ 7.11 ಕೋಟಿ ರೂ. ಆದಾಯ

ತುಮಕೂರು: ನಗರದ ಕೆಂಪೇಗೌಡ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ಈ ಸಾಲಿನಲ್ಲಿ ಸಾಲಿನಲ್ಲಿ ರೂ.7.11 ಕೋಟಿ ಆದಾಯ ಗಳಿಸಿದೆ. ವಿವಿಧ ಸ್ವರೂಪಗಳ 5045.00 ಲಕ್ಷಗಳ ರೂ.ಗಳ ಮೊತ್ತದ ಠೇವಣಿಗಳನ್ನು ಸಂಗ್ರಹಿಸಿದ್ದು, 2582.03 ಲಕ್ಷ ರೂ. ಸಾಲಗಳನ್ನು ವಿತರಿಸಲಾಗಿರುತ್ತದೆ ಎಂದು ಬ್ಯಾಂಕಿನ ಅಧ್ಯಕ್ಷ ಕರಿಯಣ್ಣ ಹೇಳಿದರು.

ಭಾನುವಾರ ನಗರದ ಕುಂಚಿಟಿಕ ಸಮುದಾಯ ಭವನದಲ್ಲಿ ನಡೆದ 28ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಯಲ್ಲಾಪುರ ಶಾಖೆಯಿಂದ 595.26 ಲಕ್ಷ ರೂ. ಠೇವಣಿಯನ್ನು ಸಂಗ್ರಹಿಸಿದ್ದು, ಆಡಳಿತ ಕಛೇರಿಯಿಂದ ಶಾಖಾ ಹೊಂದಾಣಿಕೆಯ ರೂಪದಲ್ಲಿ 825.42 ಲಕ್ಷ ರೂ. ಪಡೆದು ಶಾಖೆಯಿಂದ 1412.81 ಲಕ್ಷ ರೂ. ಮೊತ್ತಗಳ ಸಾಲಗಳನ್ನು ವಿತರಿಸಿರುತ್ತದೆ ಎಂದರು.

ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ 9ನೇ ವೇತನ ಆಯೋಗವು ಶಿಫಾರಸು ಮಾಡಿರುವ ಸಿ ವೇತನ ಶ್ರೇಣಿಯನ್ನು ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೆ ಅಳವಡಿಸಲಾಗಿರುತ್ತದೆ. ಹಾಗು ಕರ್ನಾಟಕ ಸರ್ಕಾರವು ತನ್ನ ನೌಕರರಿಗೆ ಘೋಷಿಸಿದ ತುಟ್ಟಿಭತ್ಯೆಯ ದರದಲ್ಲಿ ಬ್ಯಾಂಕಿನ ಸಿಬ್ಬಂದಿಗೆ ತುಟ್ಟಿಭತ್ಯೆಯನ್ನು ನೀಡಲಾಗಿರುತ್ತದೆ. ಆಡಳಿತ ಮಂಡಲಿಯ ಮಾರ್ಗದರ್ಶನ ಹಾಗು ಸಿಬ್ಬಂದಿ ವರ್ಗದ ಕಾರ್ಯಕ್ಷಮತೆಯಿಂದ ಆಡಿಟ್ ವರ್ಗೀಕರಣದಲ್ಲಿ ಬ್ಯಾಂಕು 'ಎ' ವರ್ಗೀಕರಣವನ್ನು ಪಡೆದಿರುತ್ತದೆ ಎಂದು ಅಧ್ಯಕ್ಷ ಕರಿಯಣ್ಣ ಹೇಳಿದರು.

ಬ್ಯಾಂಕಿನ ಉಪಾಧ್ಯಕ್ಷ ಶಿವರಾಮಯ್ಯ, ನಿರ್ದೇಶಕರಾದ ಹನುಮಂತರಾಯಪ್ಪ.ಕೆ, ದೊಡ್ಡವೀರಯ್ಯ.ಬಿ.ಕೆ, ರಾಜು ಹೆಚ್.ಎಸ್, ಎಂ. ಲಿಂಗಣ್ಣ, ವಸಂತಕುಮಾರ್ ಬಿ.ವಿ, ಹೆಂಜಾರಪ್ಪ ಹೆಚ್, ನಾಗರಾಜು ಆರ್, ಗಂಗಯ್ಯ ಜಿ.ಸಿ, ನರಸಿಂಹಪ್ಪ ಜಿ, ಅನಿಲ್‌ಕುಮಾರ್ ಜಿ.ಆರ್, ಅಶೋಕ್ ಎಸ್, ಶಶಿಕಲಾ ಎಸ್, ಶಮಂತಕಮಣಿ ಎಂ.ಎ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ವಿ. ಕುಮಾರ್, ಆಡಳಿತ ಸಿಬ್ಬಂದಿ ಹಾಗೂ ಸದಸ್ಯರು ಭಾಗವಹಿಸಿದ್ದರು.



# ಪ್ರಬುದ್ಧ ಮನಸುಗಳ ನಿರ್ಮಾಣವೇ ಶಿಕ್ಷಕರ ಜವಾಬ್ದಾರಿ

ತುಮಕೂರು: ಕೇವಲ ಶೇ. 100 ರಷ್ಟು ಫಲಿತಾಂಶದ ಹಿಂದೆ ಬೀಳದೆ, ಶೇ. 100 ರಷ್ಟು ಪ್ರಾಮಾಣಿಕ ಪರಿಶ್ರಮವನ್ನು ಹಾಕಿ ವಿದ್ಯಾರ್ಥಿಗಳಲ್ಲಿ ನೈತಿಕತೆ ಮತ್ತು ಕೌಶಲ್ಯ ಬೆಳೆಸುವ ಕಾಯಕವೇ ನಿಜವಾದ ಶಿಕ್ಷಕ ವೃತ್ತಿ ಎಂದು ವಿ ಆರ್ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಾದ ಡಾ. ರಘು ವಿ. ಅಭಿಪ್ರಾಯಪಟ್ಟಿದ್ದಾರೆ.



ತುಮಕೂರು ವಿಶ್ವವಿದ್ಯಾನಿಲಯದ ಆಂತರಿಕ ಗುಣಮಟ್ಟ ಭರವಸೆ ಕೋಶ (ಐಕ್ಯೂಎಸಿ) ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ವತಿಯಿಂದ ಸೆ. 5 ರಂದು ಆಯೋಜಿಸಲಾಗಿದ್ದ ಶಿಕ್ಷಕರ ದಿನಾಚರಣೆ ಹಾಗೂ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳನ್ನು ಕೇವಲ ಪಠ್ಯಪುಸ್ತಕಗಳಿಗೆ ಸೀಮಿತಗೊಳಿಸದೆ, ಅವರಲ್ಲಿ ಜೀವನೋಪಯುಕ್ತ ಕೌಶಲ್ಯಗಳನ್ನು ತುಂಬುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ವಿದ್ಯಾರ್ಥಿಗಳು ಮಾನಸಿಕವಾಗಿ ಕುಗ್ಗಿದಾಗ ಅವರಿಗೆ ಧೈರ್ಯ ತುಂಬಿ, ಸರಿಯಾದ ಮಾರ್ಗ ದರ್ಶನ ನೀಡುವುದೇ ನಿಜವಾದ ಗುರುವಿನ ಲಕ್ಷಣ ಎಂದರು.

ಕೇವಲ ಪಾಠ ಮಾಡಿ ಮುಗಿಸುವುದಷ್ಟೇ ಅಲ್ಲದೆ, ವಿದ್ಯಾರ್ಥಿಗಳ ವೈಯಕ್ತಿಕ ಸಮಸ್ಯೆಗಳನ್ನು ಆಲಿಸಿ ಸ್ಪಂದಿಸುವ ಗುಣವನ್ನು ಶಿಕ್ಷಕರು ರೂಢಿಸಿಕೊಳ್ಳಬೇಕು. ಕೇವಲ ಅಂತಿಮ ಫಲಿತಾಂಶದ ಶೇಕಡಾವಾರು ಪ್ರಮಾಣಕ್ಕಿಂತ, ಬೋಧನೆಯಲ್ಲಿ ಹಾ ಕುವ ನೂರಕ್ಕೆ ನೂರರಷ್ಟು ಪರಿಶ್ರಮ ಮುಖ್ಯವಾಗುತ್ತದೆ ಎಂದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ತುಮಕೂರು ವಿವಿಯ ಶಿಕ್ಷಕರಿಗೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ತುಮಕೂರು ವಿವಿ ಪ್ರಭಾರ ಕುಲಪತಿಗಳಾದ ಪ್ರೊ. ನಾಗಭೂಷಣ ಹೆಚ್. ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಐಕ್ಯೂಎಸಿ ನಿರ್ದೇಶಕರಾದ ಪ್ರೊ. ಪರಶುರಾಮ ಕೆ.ಜಿ. ಸ್ವಾಗತಿಸಿದರು ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಸಂಚಾಲಕರಾದ ಡಾ. ಸುದೀಪ್ ಕುಮಾರ್ ಆರ್. ಉಪಸ್ಥಿತರಿದ್ದರು. ಡಾ. ಚೇತನ್ ಪ್ರತಾಪ್ ಕೆ. ಎನ್. ನಿರೂಪಿಸಿದರು. ಡಾ. ರೇಣುಕಾ ಹೆಚ್. ಆರ್. ಅವರು ವಂದಿಸಿದರು.



ತುಮಕೂರು ಗಾರ್ಡನ್ ರಸ್ತೆಯ ಕಲ್ಪತರುವನ ತೋಟದ ಶ್ರೀ ಶನೇಶ್ವರಸ್ವಾಮಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಶ್ರೀ ಶನೇಶ್ವರಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು. ವಿವಿಧ ಜನಪದ ಕಲಾ ತಂಡಗಳೊಂದಿಗೆ ರಾಜಬೀದಿಗಳಲ್ಲಿ ಶನೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು. ಪ್ರಧಾನ ಅರ್ಚಕರಾದ ರಾಜಣ್ಣ, ನಿರ್ಮಿತಿ ರಾಜಶೇಖರ್, ಯಜಮಾನ್ ಶಿವಕುಮಾರ್, ಹನುಮಂತರಾಯಪ್ಪ ಮುಂತಾದವರಿದ್ದರು.

# ಮತಿಘಟ್ಟ ಕೈಮರ ದಲ್ಲಿ ವಾಲ್ಮೀಕಿಪುತ್ಥಳಿ ನಿರ್ಮಾಣ: ಶಾಸಕ ಸಿ.ಬಿ.ಸುರೇಶ್‌ಬಾಬು

ಚಿಕ್ಕನಾಯಕನಹಳ್ಳಿ: ಸಮಾಜದ ಬದಲಾವಣೆಯಲ್ಲಿ ನಮ್ಮ ಪಾತ್ರ ಮುಖ್ಯ, ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವ ಮೂಲಕ ಸಮಾಜದ ಆಸ್ತಿಯನ್ನಾಗಿ ಮಾಡುವ ಮೂಲಕ ವಾಲ್ಮೀಕಿ ಸಮಾಜವನ್ನು ಮುಖ್ಯವಾಹಿನಿಗೆ ಬರುವಂತೆ ಮಾಡುವುದು ಜವಾಬ್ದಾರಿಯಾಗಿದೆ ಎಂದು ಶಾಸಕ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.

ತಾಲ್ಲೂಕಿನ ಹಂದನಕೆರೆ ಹೋಬಳಿಯ ಮತಿಘಟ್ಟ ಕೈಮರದಲ್ಲಿ ಎಲ್.ಜಿ.ಹಾವನೂರ ವಿದ್ಯಾಭಿವೃದ್ಧಿ ಸಂಘದವತಿಯಿಂದ ಏರ್ಪಡಿಸ ಲಾಗಿದ್ದ ಕೈಮರ ವೃತ್ತಕ್ಕೆ ಶ್ರೀವಾಲ್ಮೀಕಿ ವೃತ್ತ ಎಂಬ ನಾಮಕರಣದ ಫಲಕವನ್ನು ಉದ್ಘಾಟನೆ ಮಾಡಿ ಮಾತನಾಡಿದ ಅವ ರು ನಾವು ಮಹಾನ್ ದಾರ್ಶನೀಕರ ತತ್ವಾದರ್ಶಗಳ ಮಾರ್ಗದರ್ಶನದಲ್ಲಿ ಬಾಳಬೇಕು ವಿದ್ಯಾವಂತರಾಗಿ ಉತ್ತಮ ಜೀವನ ನಡೆಸಬೇಕು ಇಂತಹ ವಾಲ್ಮೀಕಿ ಸಮಾಜವನ್ನು ಮುಖ್ಯವಾಹಿನಿಗೆ ತರಬೇಕೆಂದು ಅಂದು ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿಯವರು ರಾಜನಹಳ್ಳಿಯಲ್ಲಿ ವಾಲ್ಮೀಕಿ ಮಠಕ್ಕಾಗಿ 10ಲಕ್ಷ ನೀಡಿದ್ದರು ಅದೇ ರೀತಿ ನಾವು ಇಂದು ಪಟ್ಟಣದಲ್ಲಿ ಒಂದುವರೆ ಕೋಟಿವೆಚ್ಚದಲ್ಲಿ ವಾಲ್ಮೀಕಿ ಭವನ ನಿರ್ಮಿಸಲಾಗುತ್ತಿದ್ದು ಇನ್ನು ಹೆಚ್ಚಿನ ಅನುದಾನವನ್ನು ನೀಡಿ ಅದ ನ್ನು ಪೂರ್ಣಗೊಳಿಸುವುದಾಗಿ ತಿಳಿಸಿದ ಅವ ರು ಮುಂದಿನ ದಿನಗಳಲ್ಲಿ ಈ ವೃತ್ತದಲ್ಲಿ ವಾಲ್ಮೀಕಿ ಪುತ್ಥಳಿಯನ್ನು ಸ್ಥಾಪಿಸಲು ಕ್ರಮ ವಹಿಸಲಾಗುವುದು ಎಂದರು.




ಡಿಸಿಸಿ ಬ್ಯಾಂಕ್ ನಿರ್ದೇಶಕ ಜೆಡಿಎಸ್ ಜಿಲ್ಲಾ ಕಾರ್ಯದರ್ಶಿ ಸಿಂಗದಹಳ್ಳಿ ರಾಜ್‌ಕುಮಾರ್ ಮಾತನಾಡಿ ಈ ವ್ಯಾಪ್ತಿಯ ಗ್ರಾ.ಪಂನಲ್ಲಿ ತೀರ್ಮಾನಮಾಡಿದಂತೆ ಇಂದು ಈ ವೃತ್ತ ನಮ್ಮ ಸಮಾಜದ ಈಡೀ ದೇಶಕ್ಕೆ 24ಸಾವಿರ ಶ್ಲೋಕದ ರಾಮಾಯಣವನ್ನು ನೀಡಿದವರು ವಾಲ್ಮೀಕಿಯವರು ಇಂತಹ ಸಮಾಜದಲ್ಲಿ ಹುಟ್ಟಿದ ನಾವು ಸಂಘಟಿತರಾಗಬೇಕಿದೆ ನಮಗೆ ಎಲ್ ಜಿ.ಹಾವನೂರ್‌ವರದಿಯಂತೆ ದೇವರಾಜಅರಸುರವರ ಕಾಲದಲ್ಲಿ ಮೀಸಲಾತಿ ಸಿಕ್ಕಿದೆ ಇಂತಹ ನಮ್ಮ ಸಮಾಜದ ಪರವಾಗಿ ದೇವೇಗೌಡರು, ಕುಮಾರಸ್ವಾಮಿಯವರು ಅಪಾರ ಗೌರವವನ್ನು ಇಟ್ಟುಕೊಂಡಿದ್ದಾರೆ. 1.50ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ವಾಲ್ಮೀಕಿ ಭವನ ಶೇಕಡ 80ರಷ್ಟು ಕೆಲಸ ಮುಗಿದಿದ್ದು ಇನ್ನು 80ಲಕ್ಷದ ಅನುದಾನವನ್ನು ನೀಡಬೇಕಿದೆ ಇದರೊಂದಿಗೆ ಹೋಬಳಿಗಳಲ್ಲು ವಾಲ್ಮೀಕಿ ಭವನಗಳನ್ನು ನಿರ್ಮಿಸಬೇಕು ಎಂದರು.

ಈ ಸಂದರ್ಭದಲ್ಲಿ ಮಾಜಿ ಜಿ.ಪಂ.ಸದಸ್ಯ ರಾಮಚಂದ್ರಯ್ಯ ಮಾತನಾಡಿ ಈ ಭಾಗದಲ್ಲಿ 5ಕೋಟಿ 20 ಲಕ್ಷ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ನಡೆಯುತ್ತಿದೆ ಅದರಂತೆ 9ನೇ ಮೈಲಿಕಲ್ಲಿನಿಂದ ಭದ್ರಮೇಲ್ದಂಡೆ ಯೋಜನೆಯ ಮೂಲಕ ನೀರನ್ನು ಹರಿಸುವ ಮೂಲಕ ಜನರಿಗೆ ಅನುಕೂಲ ಮಾಡಿಕೊಡಬೆಕು ಎಂದರು.

ಎಲ್.ಜಿ.ಹಾವನೂರ ವಿದ್ಯಾಭಿವೃದ್ಧಿ ಸಂಘದ ಅಧ್ಯಕ್ಷ ಮಾತನಾಡಿ ತಿಪಟೂರು, ಹುಳಿಯಾರು, ಚಿಕ್ಕನಾಯಕನಹಳ್ಳಿ ಕಡೆಯಿಂದ ಬರುವಂತಹ ರಸ್ತೆಗಳು ಸೇರುವ ಈ ಜಾಗಕ್ಕೆ ಮಹಾನ್ ಸಂತರ ಹೆಸರನ್ನು ಇಟ್ಟಿರುವುದು ಎಲ್ಲರಿಗೂ ಆದರ್ಶವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮಂಜುನಾಥ್, ರಮೇಶ್ ಯರೇಕಟ್ಟೆ, ಶ್ರೀನಿವಾಸ್, ರಾಜಲಕ್ಷ್ಮೀ, ಶರತ್, ಕರಿಯಪ್ಪ, ಜೋಗಣ್ಣ, ಸುಮಾರ್, ಜಯರಾಜ್, ನರಸಿಂಹಮೂರ್ತಿ ಇತರರು ಇದ್ದರು.

# ಜೀತ ಪದ್ಧತಿ: 32 ಕಾರ್ಮಿಕರ ರಕ್ಷಣೆ



ಚಾಮರಾಜನಗರ: ಕೆಲಸದ ಆಸೆ ತೋರಿಸಿ ಅಮಾಯಕರನ್ನು ಅಕ್ರಮ ಬಂಧನದಲ್ಲಿಟ್ಟು ಜೀತಕ್ಕೆ ದೂಡಿದ್ದ ಪ್ರಕರಣ ಹನೂರು ತಾಲ್ಲೂಕಿನ ರಾಮಾಪುರ ಠಾಣಾ ವ್ಯಾಪ್ತಿಯ ಗಂಗನದೊಡ್ಡಿ ಗ್ರಾಮದಲ್ಲಿ ಬಯಲಾಗಿದೆ.

ತಮಿಳುನಾಡು ಮೂಲದ ಷಣ್ಮುಖ ಎಂಬಾತ ತಮಿಳುನಾಡು, ಆಂಧ್ರಪ್ರದೇಶದ ರೈಲ್ವೆ, ಬಸ್ ನಿಲ್ದಾಣಗಳಲ್ಲಿ ಸುತ್ತಾಡಿ "ನಿಮಗೆ ಒಳ್ಳೆಯ ಕೆಲಸ ಕೊಡಿಸುತ್ತೇನೆ" ಎಂದು ನಂಬಿಸಿ ಕರೆತಂದು, ಗಂಗನದೊಡ್ಡಿಯ ನಿರ್ಜನ ಪ್ರದೇಶದಲ್ಲಿ ಅಕ್ರಮವಾಗಿ ಬಂಧಿಸಿ ಬೆದರಿಸಿ ಕೂಲಿ ಕೆಲಸ ಮಾಡಿಸುತ್ತಿದ್ದ ಎಂದು ಕೂಲಿ ಕಾರ್ಮಿಕರು ಆರೋಪಿಸಿದ್ದಾರೆ.

ಖಚಿತ ಮಾಹಿತಿ ಮೇರೆಗೆ ರಾಮಾಪುರ ಪೊಲೀಸರು ಮತ್ತು ರೈತ ಸಂಘದ ಮುಖಂಡರು ಕಾರ್ಯಾಚರಣೆ ನಡೆಸಿ ಎಲ್ಲರನ್ನೂ ರಕ್ಷಿಸಿದ್ದಾರೆ. ರಕ್ಷಿಸಲ್ಪಟ್ಟವರು ತಮಿಳುನಾಡಿನ ವಿಲ್ಲುಪುರಂನ ರಾಮಲಿಂಗಂ, ಚಿದಂಬರಂನ ವಿಜಯ್, ದಿಂಡಿಗಲ್‌ನ ಮೀನಾ, ಚೆಂಗಲ್ಪಟ್ಟುವಿನ ಕನ್ನಿಯಮ್ಮ, ವೃದ್ಧಾಚಲಂನ ಸೆಲ್ವಿ, ಪೆರಂಬಲೂರಿನ ಪೆರಿಯಸಾಮಿ, ಕಳ್ಳಕುರಿಚಿಯ ಪಳನಿ, ಶ್ರೀರಂಗಂನ ಬಾಬು, ತೇಣಿಯ ಕಾರ್ತಿಕ್, ಕಳ್ಳಕುರಿಚಿಯ ಕುಮಾರ್, ತಿರುಚ್ಚಿಯ ರಾಜಕುಮಾರ್, ತೆಂಕಾಶಿಯ ಆರುಮುಗಂ, ದಿಂಡಿಗಲ್‌ನ ಮಾರಿಮುತ್ತು, ವೆಲ್ಲೂರಿನ ಮಂಜುನಾಥ್, ತಿರುವಣ್ಣಾಮಲೈನ ಜಾನ್, ಚಿರಾಳದ ಮೋಹನರಾಜು, ಕಳ್ಳಕುರಿಚಿಯ ಮುರುಗನ್, ತಂಜಾವೂರಿನ ಪ್ರತೀಶ್ ಕುಮಾರ್, ತಿರುಚಿಯ ಮಹಾಲಕ್ಷ್ಮಿ, ಪಾಂಡಿಚೇರಿಯ ರಾಜು, ಅರುಣಾಗಿರಿಯ ರಾಮಮೂರ್ತಿ, ನಾಮಕಲ್ಲುವಿನ ಕಾಮರಾಜು, ತಿರುವಣ್ಣಾಮಲೈನ ಮುರುಗನ್, ಸಿರ್ಕಾಳಿಯ ತಿರುಮುರುಗನ್ ಮತ್ತು ಬಿಹಾರದ ವಿಕಾಸ್ ಕುಮಾರ್ ಎಂದು ಗುರುತಿಸಲಾಗಿದೆ.

ಕೂಲಿಯೂ ಇಲ್ಲ, ವಸತಿಯೂ ಇಲ್ಲ – ಪ್ರಾಣಿಗಳಂತೆ ಹಿಂಸೆ: ಕಳೆದ ಒಂದು ವರ್ಷದಿಂದ ಯಾವುದೇ ಕೂಲಿ ನೀಡದೆ ಪ್ರಾಣಿಗಳಂತೆ ದುಡಿಸಿಕೊಳ್ಳಲಾಗಿದೆ. ಮಲಗಲು ಸರಿಯಾದ ವ್ಯವಸ್ಥೆ ಇರಲಿಲ್ಲ, ಎಲ್ಲೆಂದರಲ್ಲಿ ಮಲಗಿಸುತ್ತಿದ್ದರು. ದಿನವಿಡೀ ದುಡಿದು ಬರುತ್ತಿದ್ದವರಿಗೆ ಉಪ್ಪು–ಖಾರವಿಲ್ಲದ ರುಚಿಯಿಲ್ಲದ ಊಟ ನೀಡಿ ಹಿಂಸಿಸುತ್ತಿದ್ದರು. ಊರಿಗೆ ಹೋಗುತ್ತೇವೆ ಎಂದರೆ ಹಲ್ಲೆ ನಡೆಸುತ್ತಿದ್ದರು. ಇದು ಮಾನವ ಹಕ್ಕುಗಳ ಘೋರ ಉಲ್ಲಂಘನೆ ಎಂದು ಸ್ಥಳೀಯ ರೈತ ಮುಖಂಡ ಅಮ್ಜದ್ ಖಾನ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಮಾಪುರ ಹೋಬಳಿಯ ರಾಜಸ್ವ ನಿರೀಕ್ಷಕ ಶಿವಕುಮಾರ್ ಅವರಿಗೆ ಬಂದ ಖಚಿತ ಮಾಹಿತಿ ಮೇರೆಗೆ, ಪುರುಷೋತ್ತಮ್ ಅವರ ಜಮೀನಿನಲ್ಲಿ ಪರಿಶೀಲನೆ ನಡೆಸಿದಾಗ ಪ್ರಕರಣ ಪತ್ತೆಯಾಗಿದೆ. ಕಬ್ಬು ಕಟಾವು ಮಾಡುವ ಸಲುವಾಗಿ ತಮಿಳುನಾಡಿನ 30 ಜನ, ಆಂಧ್ರಪ್ರದೇಶದ ಒಬ್ಬರು ಮತ್ತು ಬಿಹಾರ ರಾಜ್ಯದ ಒಬ್ಬರು ಸೇರಿ ಒಟ್ಟು 32 ಜನರನ್ನು ಷಣ್ಮುಗಂ ತಮಿಳುನಾಡಿನ ವಿವಿಧ ಗ್ರಾಮಗಳಿಂದ ಕರೆತಂದು ಕೂಲಿ ಕೆಲಸಕ್ಕೆ ನಿಯೋಜಿಸಿದ್ದರು. ರಾಮಾಪುರ ಹೋಬಳಿ ವ್ಯಾಪ್ತಿಯ ವಿವಿಧ ಜಮೀನುಗಳಲ್ಲಿ ಕಡಿಮೆ ಕೂಲಿಗೆ, ಕೆಲವರಿಗೆ ಕೂಲಿಯನ್ನೇ ನೀಡದೆ ಕೆಲಸ ಮಾಡಿಸಿಕೊಳ್ಳುತ್ತಿದ್ದರು ಎಂದು ದೂರು ನೀಡಿದ್ದಾರೆ.

ಸಂತ್ರಸ್ತರ ಆರೋಗ್ಯ ಸ್ಥಿತಿ ಪರಿಶೀಲಿಸಲು ರಾಮಾಪುರ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಕೀಯ ಸಿಬ್ಬಂದಿಯನ್ನು ಕರೆಯಿಸಿ 12 ಜನರಿಗೆ ನೋವು ನಿವಾರಕ ಚುಚ್ಚುಮದ್ದು ನೀಡಿ ಆರೈಕೆ ಮಾಡಿದ್ದು ಎಲ್ಲರೂ ಈಗ ಆರೋಗ್ಯವಾಗಿದ್ದಾರೆ. ರಕ್ಷಣೆ ಬಳಿಕ ಮುಂದೇನು: 32 ಕೂಲಿ ಕಾರ್ಮಿಕರನ್ನು ಕರೆತಂದು ಅಮಾನವೀಯವಾಗಿ ನಡೆಸಿಕೊಂಡು ಕೂಲಿ ಕೆಲಸ ಮಾಡಿಸುತ್ತಿರುವುದು ಗಮನಕ್ಕೆ ಬಂದ ತಕ್ಷಣ ರಾಮಾಪುರ ಠಾಣೆಯಲ್ಲಿ ಕೇಸ್ ದಾಖಲಿಸಿ ಸಂತ್ರಸ್ಥರನ್ನು ರಕ್ಷಣೆ ಮಾಡಲಾಗಿದೆ. ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿದ್ದು ಈಗಾಗಲೇ ಎಲ್ಲರ ಆರೋಗ್ಯ ತಪಾಸಣೆ ನಡೆಸಿ ಬಿಡುಗಡೆ ಪತ್ರದೊಂದಿದೆ ತಮಿಳುನಾಡಿನ ಚೆನ್ನೈಗೆ ಕಳುಹಿಸಿ ಕೊಡಲಾಗಿದೆ. ನಾಲ್ವರ ವಿಳಾಸ ಇನ್ನೂ ಪತ್ತೆಯಾಗದ ಹಿನ್ನಲೆ ನಿರಾಶ್ರಿತರ ಕೇಂದ್ರದಲ್ಲಿ ಇರಿಸಲಾಗಿದ್ದು, ಅವರನ್ನೂ ಕುಟುಂಬಸ್ಥರ ಜೊತೆ ಸೇರಿಸಲಾಗುವುದು. ಪೊಲೀಸರು ಕೂಡ ಈ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಈ ಬಗ್ಗೆ ತಾಲೂಕು ಆಡಳಿತ ಜಾಗೃತಿ ಮೂಡಿಸಲಿದೆ ಎಂದು ಹನೂರು ತಹಶೀಲ್ದಾರ್ ಚೈತ್ರಾ ಮಾಹಿತಿ ನೀಡಿದ್ದಾರೆ.

### 6 ಮಂದಿ ವಿರುದ್ಧ ಎಫ್‌ಐಆರ್:

ಹನೂರು ತಾಲ್ಲೂಕಿನ ರಾಮಾಪುರ ಹೋಬಳಿ ಗಂಗನದೊಡ್ಡಿ ಗ್ರಾಮದಲ್ಲಿ ಅಕ್ರಮವಾಗಿ ಕೂಲಿ ಕಾರ್ಮಿಕರನ್ನು ಜೀತದಾಳುಗಳಂತೆ ದುಡಿಸಿಕೊಳ್ಳಲಾಗುತ್ತಿತ್ತು.32 ಮಂದಿಯನ್ನು ಪೊಲೀಸರು ರಕ್ಷಿಸಿ ಪ್ರಕರಣ ದಾಖಲಿಸಿದ್ದಾರೆ. ಈ ಪ್ರಕರಣದ ಪ್ರಮುಖ ಆರೋಪಿ ಷಣ್ಮುಗಂ ಆಗಿದ್ದು, ಆತನ ಸಹಚರರಾದ ರೂಬಿ (39 ವರ್ಷ), ರಂಜಿತಾ (29 ವರ್ಷ), ಸರವಣನ್ (37 ವರ್ಷ), ಕಾರ್ತಿಕ್ (35 ವರ್ಷ) ಹಾಗೂ ಅಪರಿಚಿತನ ವಿರುದ್ಧ ಪ್ರಕರಣ ದಾಖಲಾಗಿದೆ.

# ರಸ್ತೆ ಗುಂಡಿಯಿಂದ ಅಪಘಾತ: ಚಿಕಿತ್ಸೆಗೆ 1.97 ಲಕ್ಷ ಖರ್ಚು!

ಬೆಂಗಳೂರು: ವೈಟ್ ಫೀಲ್ಡ್ – ವರ್ತೂ ರು ರಸ್ತೆಯಲ್ಲಿನ ಗುಂಡಿಯಿಂದಾಗಿ ಸ್ಕೂಟರ್‌ನಿಂದ ಬಿದ್ದು, ಪ್ಲಾಸ್ಟಿಕ್ ಸರ್ಜಿ ಮಾಡಿಸಿಕೊಂಡಿದ್ದಲ್ಲದೇ, ಐದು ದಿನ ಆಸ್ಪತ್ರೆಗೆ ದಾಖಲಾಗಿ 1.97 ಲಕ್ಷ ರೂ ಖರ್ಚು ಮಾಡಿದೆ ಎಂದು ಮಹಿಳೆಯೊಬ್ಬರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಖಾಸಗಿ ವಲಯದಲ್ಲಿ ಕೆಲಸ ಮಾಡುತ್ತಿರುವ ವರ್ತೂರು ನಿವಾಸಿ ಐಶಾನಿ ಖನ್ನಾ ಅವರು ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಸೆ.4 ರಂದು ಪೋಸ್ಟ್ ಮಾಡಿದ್ದಾರೆ. ಪೋಸ್ಟ್‌ಗೆ ಬಿಬಿಎಂಪಿ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು ಟ್ಯಾಗ್ ಮಾಡಿ, 15 ದಿನಗಳಲ್ಲಿ ರಸ್ತೆ ದುರಸ್ತಿ ಮಾಡುವಂತೆ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಆಗಸ್ಟ್ 20 ರಂದು ಐಶಾನಿ ಅವರು ಕೆಲಸಕ್ಕೆ ಹೋಗುತ್ತಿದ್ದ ವೇಳೆ ಈ ಅಪಘಾತ ಸಂಭವಿಸಿದೆ. "ರಸ್ತೆಯಲ್ಲಿನ ಗುಂಡಿ ನೀರಿನಿಂದ ತುಂಬಿದ್ದರಿಂದ ನನಗೆ ರಸ್ತೆ ಕಾಣಲಿಲ್ಲ. ಪರಿಣಾಮ ನಾನು ಕೆಳಗೆ ಬಿದ್ದೆ ಮತ್ತು ಸ್ಕೂಟರ್ ನನ್ನ ಮೇಲೆ ಬಿತ್ತು," ಎಂದು ಖನ್ನಾ ತಿಳಿಸಿದ್ದಾರೆ.



ಅಪಘಾತದಿಂದಾಗಿ ನನ್ನ ಎಡ ಪಾದಕ್ಕೆ ತೀವ್ರ ಗಾಯವಾಗಿತ್ತು. ಪರಿಣಾಮ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿ ತುರ್ತು ಪ್ಲಾಸ್ಟಿಕ್ ಸರ್ಜರಿಯೂ ಆಯಿತು. ಐದು ದಿನಗಳ ಕಾಲ ಆಸ್ಪತ್ರೆಯಲ್ಲಿದೆ. ಸದ್ಯ ಚೇತರಿಕೆಯ ಆಧಾರದ ಮೇಲೆ ಎರಡನೇ ಶಸ್ತ್ರಚಿಕಿತ್ಸೆ ಅಗತ್ಯವಾಗಬಹುದು ಎಂದು ವೈದ್ಯರು ಹೇಳಿದ್ದಾರೆ. ಆಸ್ಪತ್ರೆಗೆ 1.97 ಲಕ್ಷ ರೂ ಖರ್ಚಾಯಿತು. ಇದೇ ರೀತಿ ಮುಂದೆ ಯಾರಿಗಾದರೂ ಸಂಭವಿಸಬಹುದು. ಈಗಲೇ ರಸ್ತೆಗಳನ್ನು ಸರಿಪಡಿಸಿ. ಇದು ಕೇವಲ ದೈಹಿಕ ಆಘಾತವಲ್ಲ. ಮಾನಸಿಕ ಆಘಾತ ಮತ್ತು ಅನಿರೀಕ್ಷಿತ ಆರ್ಥಿಕ ಹೊರೆ ಎಂದು ಅವರು ಹೇಳಿದ್ದಾರೆ.

ನಗರದಲ್ಲಿನ ಮೂಲಸೌಕರ್ಯದ ಸ್ಥಿತಿಯ ಬಗ್ಗೆ ಪೋಸ್ಟ್ ಮಾಡಿರುವ ಖನ್ನಾ, "ಇಲ್ಲಿ ರಸ್ತೆ ಇಲ್ಲ, ಬರೀ ಗುಂಡಿಗಳು ಮಾತ್ರ". ಸುರಕ್ಷಿತ ಮತ್ತು ಸರಿಯಾದ ರಸ್ತೆಗಳನ್ನು ಒದಗಿಸುವಂತೆ ಸರ್ಕಾರಕ್ಕೆ ಅವರು ಮನವಿ ಮಾಡಿದ್ದಾರೆ.

ರಸ್ತೆ ಗುಂಡಿಗಳ ಬಗ್ಗೆ ಪದೇ ಪದೇ ದೂರು ನೀಡಿದರೂ ವರ್ತೂರು ಪ್ರದೇಶದ ರಸ್ತೆಗಳು ಸುಮಾರು ಒಂದು ದಶಕದಿಂದ ಹಾಗೆಯೇ ಇವೆ ಎಂದು ನಿವಾಸಿಗಳು ಆರೋಪಿಸಿದ್ದಾರೆ.

ಕರ್ನಾಟಕ ಬಿಜೆಪಿಯು ಖನ್ನಾ ಅವರ ಪೋಸ್ಟ್ ಹಂಚಿಕೊಂಡು, ಸರ್ಕಾರದ ವಿರುದ್ಧ ಕಿಡಿಕಾರಿದೆ. ಬೆಂಗಳೂರು ರಸ್ತೆಗಳಿಗೆ ಈ ಹಿಂದೆ ಸರ್ಕಾರ 5,500 ಕೋಟಿಯನ್ನು ಹೇಗೆ ಖರ್ಚು ಮಾಡಿದೆ ಎಂದು ಪ್ರಶ್ನಿಸಿದೆ.

ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಕೂಡ ಈ ಘಟನೆ ಬಗ್ಗೆ ಪೋಸ್ಟ್ ಮಾಡಿ, ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ರಸ್ತೆ ದುರಸ್ತಿಗಾಗಿ 8,000 ಕೋಟಿ ಘೋಷಿಸಿದ್ದನ್ನು ಉಲ್ಲೇಖಿಸಿದ್ದಾರೆ. ಹೆಚ್ಚುವರಿ ಹಣವನ್ನು ಹಂಚಿಕೆ ಮಾಡುವ ಮೊದಲು ಹಿಂದಿನ ರಸ್ತೆ–ಅಭಿವೃದ್ಧಿ ನಿಧಿಗಳನ್ನು ಹೇಗೆ ಬಳಸಲಾಗಿದೆ ಎಂಬುದಕ್ಕೆ ಶ್ವೇತಪತ್ರ ಹೊರಡಿಸುವಂತೆ ಆಗ್ರಹಿಸಿದ್ದಾರೆ.

# ಪ್ರಗತಿಯತ್ತ ಬಸವೇಶ್ವರ ಕ್ರೆಡಿಟ್ ಕೋ. ಆಪರೇಟಿವ್ ಸೊಸೈಟಿ

ತುಮಕೂರು: ನಗರದ ಬಸವೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಪ್ರಸಕ್ತ ಸಾಲಿನ ದುಡಿಯುವ ಬಂಡವಾಳವು ರೂ.312.10 ಕೋಟಿಗೆ ಏರಿಕೆಯಾಗಿದ್ದು, 8.67 ಕೋಟಿ ರೂ. ನಿವ್ವಳ ಲಾಭಗಳಿಸಿದೆ ಎಂದು ಸೊಸೈಟಿಯ ಅಧ್ಯಕ್ಷ ಎಂ.ಎನ್. ಲೋಕೇಶ್ ಹೇಳಿದರು.

ಭಾನುವಾರ ನಗರದ ಬಾವಿಕಟ್ಟೆ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ 34ನೇ ಸರ್ವ ಸದಸ್ಯರ ಮಹಾಸಭೆ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಬಸವೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯನ್ನು ಅಭಿವೃದ್ಧಿಗೊಳಿಸಿ ಜಿಲ್ಲೆಯಲ್ಲಿಯೇ ಒಂದು ಅತ್ಯುತ್ತಮ ಸಹಕಾರ ಸಂಘವನ್ನಾಗಿ ಬೆಳೆಸಬೇಕೆಂಬ ಗುರಿ ಹೊಂದಲಾಗಿದೆ. ಸೊಸೈಟಿಯ ಕಾರ್ಯಕಾರಿ ಮಂಡಳಿ ಸದಸ್ಯರ ಸಹಕಾರದಿಂದ ದಕ್ಷ ಆಡಳಿತದಿಂದಾಗಿ ಆರ್ಥಿಕ ಚಟುವಟಿಕೆ ಪ್ರಗತಿಪರವಾಗಿದೆ ಎಂದರು.



ಸಂಘದ ಈವರೆಗಿನ ಸಾಧನೆಗೆ ಹಿಂದಿನ ಆಡಳಿತ ಮಂಡಳಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು ಕಾರಣರಾಗಿದ್ದು ಹಾಗೂ ಸಂಘವನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿಪಡಿಸುವ ಸಲುವಾಗಿ ಹಿರಿಯ ಸಹಕಾರಿಗಳ ಸೂಕ್ತ ಮಾರ್ಗದರ್ಶನ ಪಡೆದು ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಸಂಘವನ್ನು ಮುನ್ನಡೆಸಲಾಗುವುದು. ಸಂಘದಲ್ಲಿ ಮುಖ್ಯವಾಗಿ ಸದಸ್ಯರುಗಳು ಠೇವಣಿ ಹೂಡುವ ಮೂಲಕ, ಸಾಲ ಪಡೆಯುವ ಮೂಲಕ ಮತ್ತು ಹಾಲಿ ಸಾಲ ಪಡೆದಿರುವ ಹಾಗೂ ಈಗಾಗಲೇ ಸುಸ್ತಿದಾರರಾಗಿರುವ ಸದಸ್ಯರುಗಳು ತಪ್ಪದೇ ಸಾಲವನ್ನು ಸಕಾಲದಲ್ಲಿ ಮರುಪಾವತಿಸಿ ಸಂಘವು ಇನ್ನಷ್ಟು ಶ್ರೇಯೋಭಿವೃದ್ಧಿ ಹೊಂದಲು ಸಹಕರಿಸಬೇಕೆಂದು ಅಧ್ಯಕ್ಷ ಎಂ.ಎನ್. ಲೋಕೇಶ್ ಮನವಿ ಮಾಡಿದರು.

ಕಳೆದ 9 ವರ್ಷಗಳಿಂದ ಸದಸ್ಯರಿಗೆ ಶೇ.20ರಷ್ಟು ಡಿವಿಡೆಂಡ್ ನೀಡಲಾಗಿದ್ದು, ಈ ಸಾಲಿನಲ್ಲೂ ಮುಂದುವರೆಸಲಾಗುವುದು. ಸದಸ್ಯರಿಗೆ ಕ್ಯಾನ್ಸರ್, ಪಾರ್ಶ್ವವಾಯು, ಕಿಡ್ನಿ ವೈಪಲ್ಯ, ಜಠರ ವೈಪಲ್ಯ, ಹೃದಯಾಘಾತ, ವೈದ್ಯಕೀಯ ಚಿಕಿತ್ಸೆಗಾಗಿ ಆರ್ಥಿಕ ನೆರವನ್ನು ನೀಡುತ್ತಿರುತ್ತೇವೆ ಹಾಗೂ ಸಂಘದ ಸದಸ್ಯರುಗಳಿಗೆ ಅಪಘಾತದ ಸಂಬಂಧ ರೂ.1,00,000=00 ವರೆವಿಗೆ ವಿಮೆಯ ಸೌಲಭ್ಯ ಒದಗಿಸಲಾಗಿದೆ. ಸಂಘದ ಸದಸ್ಯರಿಗೆ ಮತ್ತು ಗ್ರಾಹಕರಿಗೆ ಸಂಘದಿಂದ ಇ–ಟ್ಯಾಕ್ಸ್ ಪೇಮೆಂಟ್, ಇ–ಟ್ರಾನ್ಸ್‌ಫರ್ ಸೌಲಭ್ಯ ಒದಗಿಸಲಾಗಿದೆ. ಸರ್ಕಾರದ ಯಶಸ್ವಿನಿ ಯೋಜನೆ ಅಡಿಯಲ್ಲಿ ಸಂಘದ ಸದಸ್ಯರುಗಳಿಗೆ ಯಶಸ್ವಿನಿ ವಿಮಾ ಯೋಜನೆ ಸೌಲಭ್ಯ ಕಲ್ಪಿಸಲಾಗಿದೆ ಎಂದು ಹೇಳಿದರು.

ಸೊಸೈಟಿಯ ಉಪಾಧ್ಯಕ್ಷ ಜಿ. ಮಲ್ಲಿಕಾರ್ಜುನಯ್ಯ, ಆಡಳಿತ ಮಂಡಳಿ ನಿರ್ದೇಶಕರಾದ ಟಿ.ಸಿ. ಓಹಿಲೇಶ್ವರ, ಎಸ್.ಎಂ. ರಾಜು, ಟಿ.ಕೆ. ಕುಮಾರಸ್ವಾಮಿ, ರೇಣುಕಯ್ಯ, ಕೆ.ಆರ್. ಮಹದೇವಯ್ಯ, ಎ.ಎಸ್. ರುದ್ರಮೂರ್ತಿ, ಎಸ್.ವಿ. ಗುರುದೇವಯ್ಯ, ಕೆ.ಎಂ. ಸಿದ್ದಲಿಂಗಪ್ಪ, ಜಿ.ಎಸ್. ಸಿದ್ದಲಿಂಗಪ್ಪ, ಹೆಚ್. ರವಿ, ಬಿ. ಕುಮಾರ್, ಟಿ.ಎನ್. ಮಹದೇವಯ್ಯ, ಹೆಚ್.ಜಿ. ವೀರಶೆಟ್ಟಪ್ಪ, ಟಿ.ಜೆ. ಅರುಣ್‌ಕುಮಾರ್, ಪವನ್ ಮೂರ್ತಿ, ಬಿ.ಎಸ್. ವೀಣಾ ನಾಗೇಶ್, ಕೆ.ವಿ.ಸುಮ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎ.ಜೆ. ಉಮೇಶ್ ಸೇರಿದಂತೆ ಸಿಬ್ಬಂದಿ ವರ್ಗದವರು, ಸದಸ್ಯರು ಭಾಗವಹಿಸಿದ್ದರು.

Printed By: J AMBRISH, DEVANAHALLI TQ, BANGALORE RURAL DIST. PRINTED AT: KALYANI PRINTERS, GROUND FLOOR, FLAT NO. 12/1, 1ST CROSS ROAD, MYSURE ROAD, OLD TOLLGATE, NEAR BY GOPALAN MALL, BENGALURU, KARNATAKA-560026. Published & owned by RADHIKA A. R., D/O RAMAKRISHNAIAH, BEHAIND AC OFFICE, SWEET WATER BOREWELL ROAD, MADHUGIRI TALUK, TUMAKURU DIST. KARNATAKA PIN-572132, and published at TUMAKURU. BEHAIND AC OFFICE, SWEET WATER BORE WELL ROAD, MADHUGIRI, MADHUGIRI TALUK, TUMAKURU. DIST. KARNATAKA PIN-572132 Editor: RADHIKA A.R. ``KARNATAKA SUCCESS NO 1 '' KANNADA Daily News Paper